ಕರ್ನಾಟಕ ವಿಧಾನ ಸಭೆ

ಬುಧವಾರ 17ನೇ ಮಾರ್ಚಿ 1999ರಂದು ಸದನವು ವಿಧಾನ ಸೌಧದಲ್ಲಿರುವ, ವಿಧಾನ ಸಭೆಯ ಸಭಾಂಗಣ ದಲ್ಲಿ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರಿ ರಮೇಶ್ ಕುಮಾರ್ ಅವರು) ಪೀಠವನ್ನು ಅಲಂಕರಿಸಿದ್ದರು.

ವಿತ್ತೀಯ ಕಾರ್ಯಕಲಾಪಗಳು

ಆಯವ್ಯಯ ಪತ್ರದ ಮಂಡನೆ 1999

ಅಧ್ಯಕ್ಷರು:- ಈಗ 1999-2000 ನೇ ಸಾಲಿನ ಆಯವ್ಯಯ ಮಂಡನೆ:

ಶ್ರೀ ಸಿದ್ಧರಾಮಯ್ಯ (ಉಪ-ಮುಖ್ಯಮಂತ್ರಿಗಳು ಹಾಗೂ ಆರ್ಥಿಕ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೇ, ನಾನೀಗ 1999-2000ನೇ ಸಾಲಿನ ಆಯವ್ಯಯದ ಅಂದಾಜುಗಳನ್ನು ಮಂಡಿಸುತ್ತಿದ್ದೇನೆ.

2. ಇದು ಈ ಸಹಸ್ರಮಾನದ ಅಂತಿಮ ಮುಂಗಡ ಪತ್ರ. ಹಾಗೆಯೇ ನಾನು ಸತತವಾಗಿ ಮಂಡಿಸುತ್ತಿರುವ ನಮ್ಮ ಸರ್ಕಾರದ ಐದನೆಯ ಮುಂಗಡಪತ್ರ. ಈ ಅಪರೂಪದ ಅವಕಾಶವನ್ನು ನನಗೆ ಒದಗಿಸಿಕೊಟ್ಟ ಕರ್ನಾಟಕದ ಜನತೆಗೆ ನಾನು ಚಿರಋಣಿಯಾಗಿದ್ದೇನೆ. ಹಾಗೂ ಸಹಕಾರ ನೀಡಿದ ಈ ಸದನದ ಎಲ್ಲ ಗೌರವಾನ್ವಿತ ಸದಸ್ಯರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕಳೆದ ನಾಲ್ಕು ವರ್ಷಗಳ ನಮ್ಮ ಸರ್ಕಾರದ ಪ್ರಮುಖ ಸಾಧನೆಗಳನ್ನು ಈ ಸದನದಲ್ಲಿ ಮಂಡಿಸುವುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ.

3. ನಾವು ನಮ್ಮ ಆದ್ಯತೆಗಳನ್ನು ಪ್ರಥಮ ವರ್ಷದಲ್ಲಿಯೆ ಗುರುತಿಸಿಕೊಂಡೆವು. ಸಮಾಜ ಕಲ್ಯಾಣ, ಗ್ರಾಮೀಣಾಭಿವೃದ್ಧಿ, ಕುಡಿಯುವ ನೀರು, ವಸತಿ, ಆರೋಗ್ಯ, ಶಿಕ್ಷಣ, ನೀರಾವರಿ, ವಿದ್ಯುತ್, ಮೂಲ ಸೌಲಭ್ಯಗಳ ಅಭಿವೃದ್ಧಿ ಮತ್ತು ಕೈಗಾರಿಕೆಗೆ ಕಳೆದ ನಾಲ್ಕು ವರ್ಷಗಳಲ್ಲಿ ನಾವು ಹೆಚ್ಚು ಒತ್ತು ನೀಡಿದ್ದೇವೆ. ಈ ಅವಧಿಯ ನಮ್ಮ ಆಡಳಿತದಲ್ಲಿ ನಾವು ರಾಜ್ಯದ ಸರ್ವತೋಮುಖ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸಿದ್ದೇವೆ. ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಉದ್ಯೋಗ ಸೃಜನೆಗೆ ಮತ್ತು ಆಸ್ತಿ ನಿರ್ಮಾಣಕ್ಕೆ ಆದ್ಯತೆ ನೀಡಿದ್ದೇವೆ. ಅಲ್ಲದೆ, ಪರಿಶಿಷ್ಟ ಜಾತಿ-ಪಂಗಡಗಳ, ಹಿಂದುಳಿದ ಜಾತಿಗಳ, ಅಲ್ಪಸಂಖ್ಯಾತರ, ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಸಾಧನೆ ಮೂಲಕ ಸಮಾಜದಲ್ಲಿ ಸಮಾನತೆ ತರಲು ಶ್ರಮಿಸಿದ್ದೇವೆ. ಸಂಕ್ಷಿಪ್ತವಾಗಿ ಹೇಳುವುದಾದರೆ; ನಮ್ಮ ಗುರಿ ಕೇವಲ ಆರ್ಥಿಕ ಅಭಿವೃದ್ಧಿಯಷ್ಟೇ ಅಲ್ಲ; ಸಾಮಾಜಿಕ ನ್ಯಾಯ ಒದಗಿಸುವುದು ಕೂಡ ಆಗಿದೆ.

4. ನಮ್ಮ ಈ ಗುರಿ ಸಾಧನೆಗಾಗಿ ನಾವು ಸಂಪನ್ಮೂಲ ಸಂಗ್ರಹಣೆಗೆ ಪ್ರಯತ್ನಿಸಿದೆವು. 1995-96ರಿಂದ 1998-99ರವರೆಗೆ ನಾವು ಸುಮಾರು 24,734 ಕೋಟಿ ರೂ.ಗಳ ತೆರಿಗೆ ಸಂಪನ್ಮೂಲವನ್ನು ಸಂಗ್ರಹಿಸಿದ್ದೇವೆ. ಹೀಗಾಗಿ ತೆರಿಗೆ ಸಂಗ್ರಹಣೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಕೆಲವೇ ರಾಜ್ಯಗಳಲ್ಲಿ ನಮ್ಮ ರಾಜ್ಯ ಕೂಡಾ ಒಂದಾಗಿದೆ. ಈ ನಾಲ್ಕು ವರ್ಷಗಳ ಅವಧಿಯಲ್ಲಿ ನಮ್ಮ ಯೋಜನಾ ಸಾಧನೆ 16,918 ಕೋಟಿ ರೂ.ಗಳಾಗಿದ್ದು ಇದು ನಮ್ಮ ಸಂಪನ್ಮೂಲದ ಸಮರ್ಪಕ ಬಳಕೆಯನ್ನು ತೋರಿಸುತ್ತದೆ.

5. ನಮ್ಮ ಸಾಧನೆ ಕೇವಲ ವೆಚ್ಚದಲ್ಲಿ ಮಾತ್ರವಲ್ಲ; ಭೌತಿಕ ಮಾನದಂಡದಲ್ಲಿ ಕೂಡ ಗಮನಾರ್ಹವಾಗಿದೆ. ನಾವು ಕಳೆದ ನಾಲ್ಕು ವರ್ಷಗಳಲ್ಲಿ 4,01,082 ಮನೆಗಳನ್ನು ನಿರ್ಮಿಸಿದ್ದೇವೆ. 8456 ಕುಡಿಯುವ ನೀರಿನ ಯೋಜನೆಗಳನ್ನು ಪೂರೈಸಿದ್ದೇವೆ ಹಾಗೂ 25,269 ಕೊಳವೆ ಬಾವಿಗಳನ್ನು ತೋಡಿಸಿದ್ದೇವೆ. ಇದೇ ಅವಧಿಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ನಾವು ವೆಚ್ಚ ಮಾಡಿರುವ ಹಣ 8569 ಕೋಟಿ ರೂ.ಗಳು; ಆರೋಗ್ಯ ವಲಯದಲ್ಲಿ 2685 ರೂ.ಗಳು. ನೀರಾವರಿಗಾಗಿ 7809 ಕೋಟಿ ರೂ.ಗಳನ್ನು ಮತ್ತು ವಿದ್ಯುತ್ ವಲಯದಲ್ಲಿ 4991ಕೋಟಿ ರೂ.ಗಳನ್ನು ವೆಚ್ಚ ಮಾಡಿದ್ದೇವೆ.

6. ಕಳೆದ ವರ್ಷ ನಮ್ಮ ರಾಜ್ಯ ನೈಸರ್ಗಿಕ ವಿಕೋಪಕ್ಕೆ ತುತ್ತಾಯಿತು. ಉತ್ತರ ಕರ್ನಾಟಕದಲ್ಲಿ ಬೆಳೆ, ಜಾನುವಾರಗಳು ಮತ್ತು ಆಸ್ತಿ ಪಾಸ್ತಿಗಳಿಗೆ ಅಪಾರ ಹಾನಿಯುಂಟಾಯಿತು. ಸರ್ಕಾರ ತನ್ನ ಆಯವ್ಯಯದಲ್ಲಿ ಪ್ರಕೃತಿ ವಿಕೋಪಕ್ಕಾಗಿ 46.41 ಕೋಟಿ ರೂ.ಗಳನ್ನು ನಿಗದಿಪಡಿಸಿದ್ದರೂ ಅತಿವೃಷ್ಟಿಯಿಂದ ನೊಂದವರ ಪರಿಹಾರಕ್ಕಾಗಿ 119.20 ಕೋಟಿ ರೂ.ಗಳನ್ನು ವೆಚ್ಚ ಮಾಡಿತು. ಕೇಂದ್ರ ಸರ್ಕಾರ ಈ ಸಂಬಂಧ 50 ಕೋಟಿ ರೂ.ಗಳನ್ನು ಅನುದಾನವೆಂದು ಬಿಡುಗಡೆ ಮಾಡುವುದಕ್ಕೆ ಬದಲಾಗಿ ಯೋಜನಾ ನೆರವಿನ ಮುಂಗಡ ಹಣವೆಂದು ಬಿಡುಗಡೆ ಮಾಡಿದೆ. ಇದರ ಜೊತೆಗೆ ಕೇಂದ್ರವು ನಮಗೆ ಭರವಸೆ ನೀಡಿದ್ದ 50 ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕೆಂದು ನಾನು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತೇನೆ.

7. ಆರ್ಥಿಕ ಹಿಂಜರಿತದ ಸಮಸ್ಯೆ ಹಿಂದಿನಂತೆಯೇ ಮುಂದುವರಿದಿದೆ. ಕೈಗಾರಿಕಾ ಬೆಳವಣಿಗೆ ಇಳಿಮುಖವಾಗಿದ್ದು; ರಫ್ತು ಬೆಳವಣಿಗೆ ಕೂಡ ನಿರಾಶಾದಾಯಕವಾಗಿದೆ. ಆದರೆ ಹಣ ಪೂರೈಕೆ ಬೆಳವಣಿಗೆ ಮಾತ್ರ ಗುರಿಯನ್ನು ಮೀರಿದ್ದು, ಇದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ಕೇಂದ್ರ ಸರ್ಕಾರಕ್ಕೆ ನೀಡಿದ ನಿವ್ವಳ ಸಾಲದಲ್ಲಿ ಆದ ತೀವ್ರ ಏರಿಕೆಯೆ ಮೂಲ ಕಾರಣವಾಗಿದೆ. ಖಾಸಗಿ ಕಂಪನಿಗಳಿಗೆ ಬ್ಯಾಂಕ್‌ನ ಸಾಲನೀಡಿಕೆ ಪ್ರಮಾಣದ ಏರಿಕೆ ಕೆಳಮಟ್ಟದಲ್ಲಿಯೇ ಉಳಿದಿದೆ. ಆರ್ಥಿಕ ಹಿಂಜರಿತದ ವಾತಾವರಣ ರಾಜ್ಯದ ತೆರಿಗೆ ಸಂಗ್ರಹಣೆಗೆ ಧಕ್ಕೆ ತಂದಿದೆ.

8. ಇಷ್ಟೆಲ್ಲಾ ಪ್ರತಿಕೂಲ ವಾತಾವರಣದ ನಡುವೆಯೂ ಸಹ ನಾವು ನಮ್ಮ ಜವಾಬ್ದಾರಿಗಳಿಗೆ ಬದ್ಧರಾಗಿದ್ದೇವೆ. ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಯಾವುದೇ ರೀತಿಯ ಧಕ್ಕೆಯಾಗದಂತೆ ನೋಡಿಕೊಂಡಿದ್ದೇವೆ.

9. ಈ ವರ್ಷ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರ 9500 ಕೊಳವೆ ಬಾವಿಗಳಿಗೆ ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡಲಾಗಿದ್ದು ಇದು ಸರ್ವಕಾಲಿಕ ದಾಖಲೆಯಾಗಿದೆ. ವೈಯಕ್ತಿಕ ಫಲಾನುಭವಿಗಳಿಗೆ ಕೊಳವೆಬಾವಿ ನೀಡುವ ಯೋಜನೆಯನ್ನು ಈ ವರ್ಷದಿಂದ ಹಿಂದುಳಿದ ಜಾತಿಗಳಿಗೆ ಮತ್ತು ಅಲ್ಪಸಂಖ್ಯಾತರಿಗೆ ಕೂಡ ವಿಸ್ತರಿಸಲು ಉದ್ದೇಶಿಸಿದ್ದೇವೆ. ಸಂಬಂಧಿಸಿದ ನಿಗಮಗಳು ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತವೆ.

10. ಹಿಂದುಳಿದ ಜಾತಿ ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಹಾಗೂ ಮಹಿಳೆಯರಿಗೆ ನೀಡುತ್ತಿರುವ ವಕೀಲಿ ತರಬೇತಿ ಮಾಸಿಕ ಭತ್ಯೆಯನ್ನು 750 ರೂ.ಗಳಿಂದ 1000 ರೂ.ಗಳಿಗೆ ಏರಿಸಲು ನಾನು ಉದ್ದೇಶಿಸಿದ್ದೇನೆ.

11. ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾಗಿರುವ 230 ಕೋಟಿ ರೂ.ಗಳ ಬಾಕಿ ಸಹಾಯಧನವನ್ನು ಮುಂದಿನ ಮೂರು ತಿಂಗಳ ಒಳಗೆ ನಾವು ಪಾವತಿ ಮಾಡಲಿದ್ದೇವೆ.

12. ರಾಜ್ಯದ ಅಭಿವೃದ್ಧಿ ಮತ್ತು ಆರ್ಥಿಕ ಬೆಳೆವಣಿಗೆಗೆ ಸ್ವಲ್ಪ ಹಿನ್ನಡೆ ಉಂಟು ಮಾಡಿದ ಕೆಲವು ಪ್ರಮುಖ ವಿಷಯಗಳನ್ನು ಈ ಸದನದ ಮುಂದಿಡುವುದು ನನ್ನ ಕರ್ತವ್ಯ.

ವೇತನ ಪರಿಷ್ಕರಣೆ

13. ಕೇಂದ್ರ ಸರ್ಕಾರವು ತನ್ನ ನೌಕರರ ವೇತನ ಶ್ರೇಣಿಯನ್ನು ಪರಿಷ್ಕರಣೆ ಮಾಡಿದ್ದರಿಂದ ರಾಜ್ಯ ಸರ್ಕಾರವು ಸಹ ತನ್ನ ನೌಕರರ ವೇತನ ಶ್ರೇಣಿಯನ್ನು ಪರಿಷ್ಕರಿಸಬೇಕಾಯಿತು. ಇದರಿಂದ 1998-99ರಲ್ಲಿ ನಮಗೆ ಸುಮಾರು 750 ಕೋಟಿ ರೂ.ಗಳ ಹೊರೆಯಾಗಿದ್ದು, 1999-2000ನೇ ಸಾಲಿಗೆ ಇದು ಸುಮಾರು 900ಕೋಟಿ ರೂ.ಗಳಿಗೆ ಏರಲಿದೆ. ಮುಂದಿನ ವರ್ಷ ರಾಜ್ಯ ಸರ್ಕಾರಿ ನೌಕರರ ವೇತನದ ಮತ್ತು ಪಿಂಚಣಿಯ ವೆಚ್ಚ 6000 ಕೋಟಿಗೂ ಹೆಚ್ಚಾಗಲಿದೆ. ಇದಲ್ಲದೆ ನಾವು ನೌಕರರ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯ ಪರಿಷ್ಕರಣೆಯ ಬಗ್ಗೆ ನೌಕರರ ಸಂಘದ ಜೊತೆ ಚರ್ಚಿಸಲು ಒಪ್ಪಿಕೊಂಡಿದ್ದೇವೆ.

14. ಕೇಂದ್ರವು ರಾಜ್ಯಗಳೊಡನೆ ಸಮಾಲೋಚಿಸದೆ ವೇತನ ಪರಿಷ್ಕರಣೆ ಮಾಡಿರುವುದರಿಂದ ರಾಜ್ಯಗಳ ಮೇಲೆ ಹಣಕಾಸಿನ ಹೊರೆ ಹೆಚ್ಚಾಗಿದೆ. ರಾಜ್ಯ ಸರ್ಕಾರಗಳ ಮೇಲೆ ಬಿದ್ದಿರುವ ಹೆಚ್ಚುವರಿ ಹೊರೆಯಲ್ಲಿ ಕನಿಷ್ಠ ಶೇಕಡಾ 50ರಷ್ಟನ್ನಾದರೂ ಭರಿಸಬೇಕೆಂದು ನಾನು ಮತ್ತೊಮ್ಮೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಕೇಂದ್ರ ಮುಂಗಡಪತ್ರ

15. ಕೇಂದ್ರದ 1999-2000ರ ಮುಂಗಡ ಪತ್ರವು ರಾಜ್ಯಗಳಿಗೆ ಸಂಪನ್ಮೂಲ ದೊರಕಿಸುವ ನಿಟ್ಟಿನಲ್ಲಿ ಸಹಕಾರಿಯಾಗಿಲ್ಲ.

16. ಕೇಂದ್ರವು ಆದಾಯ ತೆರಿಗೆಯ ಮೇಲೆ ವಿಧಿಸಿರುವ ಸರ್‌ಚಾರ್ಜ್ ಮತ್ತು ಡೀಸಲ್ ಮೇಲೆ ವಿಧಿಸಿರುವ ಎಕ್ಸೈಜ್ ಸುಂಕಗಳನ್ನು ಕೇಂದ್ರವು ರಾಜ್ಯಗಳೊಡನೆ ಹಂಚಿಕೊಳ್ಳುವುದಿಲ್ಲ. ಇದರ ಪರಿಣಾಮವಾಗಿ ನಾವು ಹಂಚಿಕೊಳ್ಳಬೇಕಾದ ಸಂಪನ್ಮೂಲದ ಗಾತ್ರ ಸಣ್ಣದಾಗುತ್ತದೆ.

17. ಕೆಲವು ರಾಜ್ಯಗಳಿಗೆ ಕೇಂದ್ರ ಸರ್ಕಾರವು ವಿಶೇಷ ನೆರವು ಮತ್ತು ಕೇಂದ್ರದ ಹೆಚ್ಚುವರಿ ನೆರವನ್ನು ನೀಡುತ್ತಾ ಬಂದಿದೆ. ಇದು ಸಂಪೂರ್ಣವಾಗಿ ಕೇಂದ್ರದ ವಿವೇಚನೆಗೆ ಒಳಪಟ್ಟಿದ್ದು ಕೆಲವು ರಾಜ್ಯಗಳು ಈ ನೆರವಿನಿಂದ ವಂಚಿತವಾಗಿದ್ದು ಇಂತಹ ರಾಜ್ಯಗಳಲ್ಲಿ ಕರ್ನಾಟಕವೂ ಸಹ ಒಂದು.

18. ಇದಲ್ಲದೆ ಸಣ್ಣ ಉಳಿತಾಯ ಪತ್ರಗಳ ಮೇಲಿನ ಬಡ್ಡಿ ದರವನ್ನೂ ಕೇಂದ್ರವು ಇಳಿಸಿದೆ. ಇದು ಸಣ್ಣ ಉಳಿತಾಯ ಸಂಗ್ರಹಣೆಗೆ ತೊಡಕುಂಟು ಮಾಡಿದ್ದು ರಾಜ್ಯದ ಒಂದು ಪ್ರಮುಖ ಸಂಪನ್ಮೂಲಕ್ಕೆ ತೊಂದರೆ ತಂದಿದೆ. ಆದ್ದರಿಂದ ಸಣ್ಣ ಉಳಿತಾಯದ ಮೇಲಿನ ಬಡ್ಡಿ ದರವನ್ನು ಮೊದಲಿನಷ್ಟೇ ಉಳಿಸಬೇಕೆಂದು ನಾನು ಕೇಂದ್ರವನ್ನು ಆಗ್ರಹಿಸುತ್ತೇನೆ.

19. ಗ್ರಾಮ ಪಂಚಾಯತ್ ಕೆಲವು ಸಂಪನ್ಮೂಲಗಳನ್ನು ನೇರವಾಗಿ ವರ್ಗಾಯಿಸುವ ತನ್ನ ನಿರ್ಧಾರವನ್ನು ಕೇಂದ್ರ ಸರ್ಕಾರವು ಮರುಪರಿಶೀಲಿಸುವ ಅಗತ್ಯವಿದೆ. ಬಹು ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆ ಇರುವ ರಾಜ್ಯಗಳಿಗೆ; ಕೇಂದ್ರದ ಈ ನಿರ್ಧಾರದಿಂದ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ ಸಿಗಬೇಕಾದ ಸಂಪನ್ಮೂಲ ಪ್ರಮಾಣ ಕಡಿಮೆಯಾಗುತ್ತದೆ.

20. ಕೇಂದ್ರ ಮುಂಗಡಪತ್ರದಲ್ಲಿ ಘೋಷಿಸಿರುವ ಕೆಲವು ಯೋಜನೆಗಳಿಗೆ ರಾಜ್ಯವೂ ತನ್ನ ಕೊಡುಗೆಯನ್ನು ನೀಡಬೇಕಾಗುತ್ತದೆ. ಆದರೆ ಈಗಾಗಲೆ ರಾಜ್ಯದ ಸಂಪನ್ಮೂಲ, ನಿರ್ದಿಷ್ಟ ಯೋಜನೆಗಳಿಗೆ ನಿಗದಿಯಾಗಿರುವುದರಿಂದ ಇಂತಹ ಹೊಸ ಯೋಜನೆಗಳಿಗೆ ರಾಜ್ಯದ ಪಾಲು ನೀಡಲು ಸಂಪನ್ಮೂಲ ಕ್ರೋಢೀಕರಿಸುವುದು ನಮಗೆ ಕಷ್ಟವಾಗುತ್ತದೆ. ಆದ್ದರಿಂದ ಇಂತಹ ಯೋಜನೆಗಳಿಗೆ ಕೇಂದ್ರವೇ ಗರಿಷ್ಟ ಮಟ್ಟದ ಕೊಡುಗೆ ನೀಡಬೇಕೆಂದು ನಾನು ಕೇಂದ್ರ ಸರ್ಕಾರವನ್ನು ಕೋರುತ್ತೇನೆ.

ಕೇಂದ್ರ-ರಾಜ್ಯ ಹಣಕಾಸು ಸಂಬಂಧಗಳು

21. ನಮ್ಮ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ರಾಜ್ಯಗಳ ಹಿತವನ್ನು ಸಹ ಪರಿಗಣಿಸಬೇಕಾಗುತ್ತದೆ. ಕೇಂದ್ರ ಮತ್ತು ರಾಜ್ಯದ ಆರ್ಥಿಕ ಸಂಬಂಧಗಳು ರಾಷ್ಟ್ರೀಯ ದೃಷ್ಟಿಯನ್ನು ಪ್ರತಿಬಿಂಬಿಸಬೇಕಾಗುತ್ತದೆ. ಆದರೆ ಈ ರೀತಿ ಆಗದಿರುವುದು ವಿಷಾದನೀಯ. ಕೇಂದ್ರದ ಒಟ್ಟು ತೆರಿಗೆಯಲ್ಲಿ ಶೇ.29ರಷ್ಟು ಮೊತ್ತವನ್ನು ರಾಜ್ಯಗಳಿಗೆ ವರ್ಗಾಯಿಸಬೇಕೆಂಬ ಹತ್ತನೇ ಹಣಕಾಸು ಆಯೋಗದ ಶಿಫಾರಸ್ಸು, ರಾಜ್ಯಾಂಗಕ್ಕೆ ತಿದ್ದುಪಡಿಯಾಗದ ಕಾರಣ ಇನ್ನೂ ಜಾರಿಯಾಗಿರುವುದಿಲ್ಲ. ತಾತ್ಕಲಿಕ ಪರಿಹಾರ ಅನುದಾನಕ್ಕಾಗಿ ನಾವು ಮಾಡಿರುವ ಮನವಿಯನ್ನು ಕೇಂದ್ರವು ಪರಿಗಣಿಸಿಲ್ಲ. ರಾಜ್ಯ ಸರ್ಕಾರಗಳು ಕಾನೂನು ಮತ್ತು ಶಿಸ್ತು ಪಾಲನೆ, ಮೂಲಭೂತ, ಸೌಲಭ್ಯ, ಆರೋಗ್ಯ, ಶಿಕ್ಷಣ ಹಾಗೂ ಇತರ ಸಾಮಾಜಿಕ ಕ್ಷೇತ್ರಗಳಲ್ಲಿನ ಸೌಲಭ್ಯಗಳನ್ನು ಜನರಿಗೆ ಒದಗಿಸಬೇಕಾಗಿರುವ ಜವಾಬ್ದಾರಿಯನ್ನು ಪರಿಗಣಿಸಿದರೆ ಕೇಂದ್ರವು ತನ್ನ ಒಟ್ಟು ತೆರಿಗೆ ಸಂಗ್ರಹದಲ್ಲಿ ಶೇ.40ರಷ್ಟು ಪಾಲನ್ನು ರಾಜ್ಯ ಸರ್ಕಾರಗಳಿಗೆ ವರ್ಗಾಯಿಸುವುದು ನ್ಯಾಯಸಮ್ಮತ. ಪ್ರಮುಖ ಆದಾಯ ಮೂಲವಾಗಲಿರುವ ಸೇವಾ ಕ್ಷೇತ್ರದಲ್ಲಿ ತೆರಿಗೆ ವಿಧಿಸುವುದಕ್ಕೆ ರಾಜ್ಯಗಳಿಗೂ ಅವಕಾಶ ನೀಡಬೇಕು ಎಂದು ನಾನು ಒತ್ತಾಯಿಸುತ್ತೇನೆ.

22. ಕೇಂದ್ರ ಹಣಕಾಸು ಆಯೋಗವು ಅನುಚ್ಛೇದ 275ರಡಿಯಲ್ಲಿ ಆದಾಯ ಕೊರತೆ ಎದುರಿಸುತ್ತಿರುವ ರಾಜ್ಯಗಳಿಗೆ ಅನುದಾನವನ್ನು ವಿತರಿಸುತ್ತದೆ. ಇದರಿಂದ ಉತ್ತಮ ಆರ್ಥಿಕ ಶಿಸ್ತನ್ನು ಹೊಂದಿರುವ ರಾಜ್ಯಗಳಿಗೇ ದಂಡ ವಿಧಿಸಿದಂತಾಗಿದೆ. ಕೇಂದ್ರ-ರಾಜ್ಯ ಹಣಕಾಸು ಸಂಬಂಧಗಳ ಬಗ್ಗೆ ನಾವು 11ನೇ ಹಣಕಾಸು ಆಯೋಗಕ್ಕೆ ಸಲ್ಲಿಸಲಿರುವ ಮನವಿಯಲ್ಲಿ ಈ ತಾರತಮ್ಯ ಹಾಗೂ ನ್ಯೂನತೆಗಳನ್ನು ಸರಿಪಡಿಸಬೇಕೆಂದು ಕೋರಲಿದ್ದೇವೆ.

ವೆಚ್ಚ ನಿಯಂತ್ರಣ

23. ರಾಜ್ಯಕ್ಕೆ ಲಭ್ಯವಿರುವ ಸಂಪನ್ಮೂಲಗಳು ಕಡಿಮೆ ಇರುವುದರಿಂದ ಹಾಗೂ ಅಭಿವೃದ್ಧಿಯೇತರ ವೆಚ್ಚ ನಿರಂತರವಾಗಿ ಏರುತ್ತಿರುವುದರಿಂದ ನಾವೀಗ ಅನಗತ್ಯ ವೆಚ್ಚಕ್ಕೆ ಕಡಿವಾಣ ಹಾಕಬೇಕಾಗಿರುವುದು ಅನಿರ್ವಾವಾಗಿದೆ. ಕಳೆದ ಆಯವ್ಯಯ ಭಾಷಣದಲ್ಲಿ ನಾನು ಘೋಷಿಸಿದ್ದಂತೆ ಸರ್ಕಾರಿ ಸಿಬ್ಬಂದಿಯಲ್ಲಿ

ಶೇ.5ರಷ್ಟು ಕಡಿತ ಮಾಡಿದ್ದೇನೆ. ಈ ಕ್ರಮದಿಂದ ಒಟ್ಟು 20,000 ಅನಗತ್ಯ ಹುದ್ದೆಗಳನ್ನು ರದ್ದುಪಡಿಸಲಾಗಿದೆ. ಈ ಹುದ್ದೆಗಳ ರದ್ದತಿಯಿಂದ ಸರ್ಕಾರದ ಪರಿಣಾಮಕಾರಿ ಆಡಳಿತಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ಎಚ್ಚರ ವಹಿಸಲಾಗಿದೆ. ಇದೇ ಮಾದರಿಯಲ್ಲಿ ಅನಗತ್ಯವಾದ ಮತ್ತು ಪುನರಾವರ್ತನೆಗೊಳ್ಳುವ ಯೋಜನೆಗಳನ್ನು ರದ್ದುಗೊಳಿಸಲು ಮತ್ತು ಬೇರೆ ಬೇರೆ ವಲಯದಲ್ಲಿರುವ ಒಂದೇ ಮಾದರಿಯ ಯೋಜನೆಗಳನ್ನು ಒಗ್ಗೂಡಿಸಿ ಒಂದೇ ಯೋಜನೆಯನ್ನಾಗಿ ರೂಪಿಸಲು ಸಹ ನಿರ್ಧರಿಸಿದ್ದೇವೆ. 1997-98ರಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ತನ್ನ 143 ಯೋಜನೆಗಳನ್ನು ಒಗ್ಗೂಡಿಸಿ 44 ಯೋಜನೆಗಳಿಗೆ ಇಳಿಸಿದೆ. ಈ ವರ್ಷ ನಾವು ವಿವಿಧ ಇಲಾಖೆಗಳಲ್ಲಿನ 53 ಯೋಜನೆಗಳನ್ನು ಒಗ್ಗೂಡಿಸಿ 34 ಯೋಜನೆಗಳಿಗೆ ಸೀಮಿತಗೊಳಿಸುತ್ತಿದ್ದೇವೆ. ಹಾಗೆಯೇ 16 ಯೋಜನೆಗಳನ್ನು ರದ್ದುಗೊಳಿಸುತ್ತಿದ್ದೇವೆ. 1999-2000ನೇ ಸಾಲಿನಲ್ಲಿ ಈ ಕಾರ್ಯ ಅಂತಿಮಗೊಳ್ಳಲಿದೆ. ನಾವು ದೂರವಾಣಿ ವೆಚ್ಚದಲ್ಲಿ ಶೇಕಡಾ 20ರಷ್ಟು ಮತ್ತು ಇಂಧನ ವೆಚ್ಚದಲ್ಲಿ ಶೇಕಡಾ 10ರಷ್ಟು ಕಡಿತ ಮಾಡಲು ನಿರ್ಧರಿಸಿದ್ದೇವೆ. ಸರ್ಕಾರಿ ವಾಹನಗಳ ಸಂಖ್ಯೆ ಕಡಿಮೆ ಮಾಡುವ ಮೂಲಕ ವಾಹನಗಳ ಮೇಲೆ ಮಾಡುವ ವೆಚ್ಚವನ್ನು ನಿಯಂತ್ರಿಸಲು ಸರ್ಕಾರ ಪರಿಶೀಲಿಸುತ್ತಿದೆ.

24. ಅನಗತ್ಯ ವೆಚ್ಚದ ಮೇಲೆ ಮತ್ತಷ್ಟು ನಿಯಂತ್ರಣ ತರುವ ಎರಡು ಮಸೂದೆಗಳನ್ನು ಸದನದ ಮುಂದೆ ತರಲು ಇಚ್ಛಿಸುತ್ತೇನೆ.

ದಿನಗೂಲಿ ನೌಕರರ ನೇಮಕಕ್ಕೆ ನಿಷೇಧ

25. ಸುಪ್ರಿಂ ಕೋರ್ಟ್‌ಗೆ ನೀಡಿದ ಭರವಸೆಯಂತೆ, 1-7-1984 ರಿಂದ ಹಿಂದಕ್ಕೆ ನೇಮಕವಾಗಿದ್ದ ಎಲ್ಲಾ ದಿನಗೂಲಿ ನೌಕರರನ್ನು ಸರ್ಕಾರ ಖಾಯಂಗೊಳಿಸಿದೆ. ಈಗಲೂ ಸರ್ಕಾರಿ ಆದೇಶ ಉಲ್ಲಂಘನೆ ಮಾಡಿ ಕೆಲವು ಪ್ರಾಧಿಕಾರಗಳು ನೇಮಕಾತಿ ಮತ್ತು ರೋಸ್ಟರ್ ಪದ್ಧತಿಗೆ ವ್ಯತಿರಿಕ್ತವಾಗಿ ದಿನಗೂಲಿ ನೌಕರರನ್ನು ನೇಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಕಾನೂನುಬಾಹಿರ ನೇಮಕಾತಿಯನ್ನು ತಡೆಯಲು ಸರ್ಕಾರವು ಶೀಘ್ರದಲ್ಲೇ ಶಾಸನವೊಂದನ್ನು ಮಂಡಿಸಲು ಯೋಜಿಸಿದೆ. ಸರ್ಕಾರ, ಸ್ಥಳೀಯ ಸಂಸ್ಥೆಗಳು ಶಾಸನಬದ್ಧ ಮಂಡಳಿಗಳು ಮತ್ತು ನಿಗಮ ಹಾಗೂ ಸಾರ್ವಜನಿಕ ಉದ್ದಿಮೆಗಳಲ್ಲಿನ ನೇಮಕಾತಿ ಪ್ರಾಧಿಕಾರಿಗಳ ಮೇಲೆ ಈ ಶಾಸನ ನಿಯಂತ್ರಣವನ್ನು ಹೇರುತ್ತದೆ. ಈ ಕಾಯ್ದೆಯಂತೆ, ಕಾನೂನುಬಾಹಿರ ನೇಮಕಾತಿ ಮಾಡಿಕೊಂಡವರನ್ನು ಸೇವೆಯಿಂದ ತೆಗೆದು ಹಾಕುವುದೇ ಕನಿಷ್ಠ ಶಿಕ್ಷೆಯಾಗಿರುತ್ತದೆ.

ಸರಕು ಖರೀದಿ ಮತ್ತು ಟೆಂಡರ್‌ನಲ್ಲಿ ಪಾರದರ್ಶಕತೆ

26. ಸರ್ಕಾರ, ಸ್ಥಳೀಯ ಸಂಸ್ಥೆಗಳು, ಶಾಸನ ಮಂಡಳಿಗಳು ಮತ್ತು ಸಾರ್ವಜನಿಕ ಉದ್ದಿಮೆಗಳು ಮಾಡುವ ಸರಕು ಖರೀದಿ ಅತ್ಯಂತ ಪಾರದರ್ಶಕ ಹಾಗೂ ಸ್ಪರ್ಧಾತ್ಮಕವಾಗಿ ಇರಬೇಕೆಂಬುದು ಸರ್ಕಾರದ ನಂಬಿಕೆಯಾಗಿದೆ. ಟೆಂಡರ್ ಪ್ರಕ್ರಿಯೆಯಲ್ಲಿ ಪ್ರಾಮಾಣಿಕತೆ ಮತ್ತು ನಿಷ್ಪಕ್ಷಪಾತವನ್ನು ಪ್ರದರ್ಶಿಸಲು ಹಾಗೂ ಸರ್ಕಾರದ ಖರೀದಿಯಲ್ಲಿ ಸಾರ್ವಜನಿಕ ವಿಶ್ವಾಸ ಮೂಡಿಸಲು ಶೀಘ್ರದಲ್ಲೇ ನಾವು ''ಕರ್ನಾಟಕ ಟೆಂಡರ್ ಮತ್ತು ಸರಕು ಖರೀದಿ ಪಾರದರ್ಶಕತೆ ಕಾಯ್ದೆ'' ಅನ್ನು ತರಲಿದ್ದೇವೆ. ಈ ಕಾಯ್ದೆಯು ಟೆಂಡರ್ ನಮೂನೆಗಳು ಸುಲಭ ಲಭ್ಯತೆ ಹಾಗೂ ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ತರಲಿದೆ.

ಖಜಾನೆ ಗಣಕೀಕರಣ

27. ಸಾರ್ವಜನಿಕ ವೆಚ್ಚದ ಲೆಕ್ಕಪತ್ರ ವ್ಯವಸ್ಥೆ ಸುಧಾರಣೆಯಿಂದ ದೂರುಗಳ ಸಂಖ್ಯೆ ಕಡಿಮೆಯಾಗುತ್ತದೆ. ಸದ್ಯದ ವ್ಯವಸ್ಥೆಯಲ್ಲಿ ರಾಜ್ಯದ ಹಾಗೂ ಜಿಲ್ಲಾಪಂಚಾಯತ್‌ಗಳ ವೆಚ್ಚದ ಲೆಕ್ಕಪತ್ರಗಳನ್ನು ರಾಜ್ಯಾದ್ಯಂತ ಇರುವ 34,000 ಮಂದಿ ಡ್ರಾಯಿಂಗ್ ಮತ್ತು ಬಟವಾಡೆ ಅಧಿಕಾರಿಗಳು ನಿರ್ವಹಿಸುತ್ತಿದ್ದಾರೆ. ಈ ವೆಚ್ಚವು ರಾಜ್ಯದ 31 ಜಿಲ್ಲಾ ಖಜಾನೆಗಳು ಮತ್ತು 184 ಉಪ ಖಜಾನೆಗಳಲ್ಲಿ ದಾಖಲಾಗುತ್ತಿದೆ. ಇದೇ ವೆಚ್ಚವನ್ನು ಸಂಬಂಧಿಸಿದ ಇಲಾಖಾ ಮುಖ್ಯಸ್ಥರೂ ಸಂಕಲನಗೊಳಿಸಬೇಕು ಹಾಗೂ ಈ ಎರಡೂ ವೆಚ್ಚಗಳನ್ನು ನಿಯಮಿತವಾಗಿ ಸಮನ್ವಯಗೊಳಿಸಬೇಕು. ಲೆಕ್ಕಪತ್ರದ ಪ್ರಕ್ರಿಯೆ ಮತ್ತು ತಪಾಸಣೆ ವ್ಯವಸ್ಥೆಯ ಸುಧಾರಣೆಗೆ ನೆರವಾಗಲು ಮತ್ತು ತಪ್ಪು ವರದಿಗಳಿಗೆ ತಡೆಯೊಡ್ಡಲು ಮುಂದಿನ ಆರು ತಿಂಗಳಲ್ಲಿ ಸರ್ಕಾರದ ಖಜಾನೆ ವ್ಯವಸ್ಥೆಯನ್ನು ವಿ-ಸ್ಯಾಟ್ ತಂತ್ರಜ್ಞಾನ ಬಳಸಿ ಸಂಪೂರ್ಣವಾಗಿ ಗಣಕೀಕರಣಗೊಳಿಸಲಾಗುವುದು.

ಬ್ಯಾಂಕೇತರ ಹಣಕಾಸು ಸಂಸ್ಥೆಗಳು

28. ಕೆಲವು ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಸಾರ್ವಜನಿಕರ ಠೇವಣಿ ಹಣವನ್ನು ಮೋಸ ಮಾಡಿರುವ ವಿಷಯ ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಇಂತಹ ಸಂಸ್ಥೆಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು 'ಸೆಬಿ' ಸಂಸ್ಥೆಗಳು ನಿಯಂತ್ರಿಸುತ್ತವೆ. ಇದರ ಜೊತೆಗೆ ಸಾರ್ವಜನಿಕ ಠೇವಣಿ ಹಣ ರಕ್ಷಿಸಲು ರಾಜ್ಯ ಸರ್ಕಾರಗಳೂ ಸಹ ಕ್ರಮ ಕೈಗೊಳ್ಳಬೇಕೆಂದು ರಿಸರ್ವ್ ಬ್ಯಾಂಕ್ ಸಲಹೆ ನೀಡಿದೆ. ಸಾರ್ವಜನಿಕ ಠೇವಣಿ ಸಂಗ್ರಹಿಸುವ ಹಲವಾರು ನೋಂದಣಿಗೊಳ್ಳದ ಬ್ಯಾಂಕೇತರ ಸಂಸ್ಥೆಗಳು ನಮ್ಮಲ್ಲಿವೆ. ಇವುಗಳನ್ನು ನಿಯಂತ್ರಿಸಲು ಹಾಗೂ ಕರ್ನಾಟಕದ ಠೇವಣಿದಾರರ ಹಿತಾಸಕ್ತಿಯನ್ನು ಕಾಪಾಡಲು ''ಕರ್ನಾಟಕ ಬ್ಯಾಂಕೇತರ ಸಂಸ್ಥೆಗಳ ನಿಯಂತ್ರಣ ಕಾಯ್ದೆ'' ಅನ್ನು ಶೀಘ್ರದಲ್ಲೇ ತರಲಿಚ್ಛಿಸುತ್ತೇವೆ.

ರಾಜ್ಯದ ಆರ್ಥಿಕ ಸ್ಥಿತಿ

29. ಕಳೆದ ವರ್ಷ ರಾಜ್ಯದ ಆಂತರಿಕ ಉತ್ಪನ್ನ ಶೇ. 5.8ರಷ್ಟು ಬೆಳವಣಿಗೆಯಾಗಿದೆ. ಭಾರತ ಸರ್ಕಾರ ತನ್ನ ಬೆಳವಣಿಗೆಯನ್ನು ತಿಳಿಸಲು ಹೊಸ ವಿಧಾನವನ್ನು ಅಳವಡಿಸಿಗೊಂಡಿದೆ. ಈ ಹೊಸ ವಿಧಾನ ತೃತೀಯ ವಲಯದ ಬೆಳವಣಿಗೆಗೆ ಹೆಚ್ಚು ಒತ್ತು ನೀಡುತ್ತದೆ. ತೃತೀಯ ವಲಯದ ಸಂಯೋಜನೆ ಮತ್ತು ಇದಕ್ಕೆ ನೀಡಿರುವ ಪ್ರಾಧಾನ್ಯವನ್ನು ನಾವೀಗ ಮರು ಪರಿಶೀಲಿಸಬೇಕಾಗಿದೆ.

ರಾಜ್ಯದ ಹಣಕಾಸು

30. ನಾವು ವಿವೇಕಯುತ ಆರ್ಥಿಕ ನಿರ್ವಹಣಾ ನೀತಿಯನ್ನು ಅನುಸರಿಸಿಕೊಂಡು ಬರುತ್ತಿದ್ದೇವೆ. ರಾಜ್ಯದ ಅಭಿವೃದ್ಧಿಗಾಗಿ ನಾವು ಕೇವಲ ಸಂಪನ್ಮೂಲ ಸಂಗ್ರಹಣೆಯನ್ನಷ್ಟೇ ಮಾಡದೆ; ಅನಗತ್ಯ ವೆಚ್ಚ ನಿಯಂತ್ರಣವನ್ನು ಸಹ ಮಾಡುತ್ತಿದ್ದೇವೆ. ಆರ್ಥಿಕ ಹಿಂಜರಿತವಿಲ್ಲದಿದ್ದರೆ ನಮ್ಮ ರಾಜ್ಯದ ತೆರಿಗೆ ಆದಾಯ ಖಂಡಿತಾ ಹೆಚ್ಚಾಗುತ್ತಿತ್ತು. ಇದಲ್ಲದೆ ಕೇಂದ್ರದ ನಮ್ಮ ಪಾಲಿನ ತೆರಿಗೆ ನಿರೀಕ್ಷಿತ ಮಟ್ಟಕ್ಕಿಂತ 356 ಕೋಟಿ ರೂ. ಗಳಷ್ಟು ಕಡಿಮೆಯಾಯಿತು. ಇದರ ಜೊತೆಗೆ, ಸಾರ್ವಜನಿಕರ ಅನುಕೂಲಕ್ಕೆಂದು ಡೀಸೆಲ್ ಬೆಲೆ ಇಳಿಸಲು ನಾವು ಕಚ್ಚಾ ತೈಲದ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿದೆವು. ಇದು ನಮ್ಮ ತೆರಿಗೆ ಸಂಗ್ರಹದಲ್ಲಿ 200 ಕೋಟಿ ರೂ. ಗಳ ಕಡಿತಕ್ಕೆ ಕಾರಣವಾಯಿತು.

ಸರ್ಕಾರದ ಸಾಲ ಮತ್ತು ಖಾತರಿಗಳ ಮೇಲಿನ ಮಿತಿ.

31. ರಾಜ್ಯದ ಸಾಲ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿಟ್ಟಿದ್ದೇವೆ. ಅಲ್ಲದೆ, ಸಾಲದ ಜೊತೆಗೆ ಸರ್ಕಾರ ನೀಡುವ ಖಾತರಿಗಳೂ ಹೆಚ್ಚಾಗುತ್ತಿವೆ. ಈ ನಿಟ್ಟಿನಲ್ಲಿ ನಾನು ಭಾರತೀಯ ರಿಸರ್ವ್ ಬ್ಯಾಂಕ್‌ನ ಶಿಫಾರಸ್ಸಿನಂತೆ ಸರ್ಕಾರ ನೀಡುವ ಖಾತರಿಗಳ ಮೇಲೆ ಮಿತಿ ನಿಗದಿಪಡಿಸುವ ಶಾಸನವನ್ನು ಶೀಘ್ರದಲ್ಲೇ ತರಲು ಇಚ್ಛಿಸುತ್ತೇನೆ.

32. ಸರ್ಕಾರವು ಸ್ಥಳೀಯಸಂಸ್ಥೆಗಳು, ಸಹಕಾರ ಸಂಘಗಳು, ಶಾಸನ ಬದ್ಧ ಮಂಡಳಿಗಳು ಮತ್ತು ಸರ್ಕಾರಿ ಉದ್ದಿಮೆಗಳು ಪಡೆಯುವ ಸಾಲಕ್ಕೆ ಖಾತರಿಯನ್ನು ನೀಡಿದೆ. 1998ರ ಮಾರ್ಚ್‌ನಲ್ಲಿದ್ದಂತೆ ಸರ್ಕಾರ ಒಟ್ಟು 5413 ಕೋಟಿ ರೂ.ಗಳಿಗೆ ಖಾತರಿ ನೀಡಿದೆ. ಉದ್ದೇಶಿತ ಶಾಸನವು ಸರ್ಕಾರದ ಒಟ್ಟು ಖಾತರಿಗಳ ಮೊತ್ತವು ರಾಜ್ಯದ ರಾಜಸ್ವ ಆದಾಯದ ಶೇಕಡಾ 80ರಷ್ಟು ಮೊತ್ತವನ್ನು ಯಾವುದೇ ಸಮಯದಲ್ಲಿ ಮೀರದಂತೆ ನಿರ್ಬಂಧ ಹೇರುತ್ತದೆ. ಆದರೆ, ಕಾಲಮಿತಿಯಲ್ಲಿ ಪೂರ್ಣಗೊಳಿಸ ಬೇಕಿರುವ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಾಲ ಪಡೆಯಲು ಈ ಮಿತಿ ಅನ್ವಯವಾಗುವುದಿಲ್ಲ.

ವಾರ್ಷಿಕ ಯೋಜನೆ 1998-99

33. ಕಳೆದ ವರ್ಷ ಯೋಜನಾ ಗಾತ್ರವನ್ನು 5353ಕೋಟಿ ರೂ.ಗಳಿಗೆ ನಿಗದಿಪಡಿಸಲಾಗಿತ್ತು. ಆದರೆ ನಾವು 5131 ಕೋಟಿ ರೂ.ಗಳ ಯೋಜನಾ ಸಾಧನೆಯನ್ನು ಮಾಡಲಿದ್ದೇವೆ. ಇದು 222 ಕೋಟಿ ರೂ.ಗಳ ಕೊರತೆಯಾಗಿದೆ. ಈ ಮುಂಚೆಯೆ ನಾನು ಹೇಳಿದಂತೆ ಸಂಪನ್ಮೂಲ ಸಂಗ್ರಹಣೆಯಲ್ಲಿ ತೊಂದರೆಯಾದದ್ದರಿಂದ ಈ ಕೊರತೆ ಉಂಟಾಯಿತು. ಇಷ್ಟೆಲ್ಲದರ ನಡುವೆಯೂ ನಮ್ಮ 1997-98ರ ಯೋಜನಾ ಸಾಧನೆಗಿಂತ ಶೇಕಡಾ 16ರಷ್ಟು ಹೆಚ್ಚಳವಾಗಿರುವುದು ಗಮನಾರ್ಹ. ನಮ್ಮ ಸಂಪನ್ಮೂಲ ಸಂಗ್ರಹಣೆ; ತೆರಿಗೆ ಮತ್ತು ನಮ್ಮ ಸ್ಥಳೀಯ ಉತ್ಪನ್ನದ ಅನುಪಾತ; ವಿದೇಶಿ ನೆರವಿನ ಯೋಜನೆಗಳ ಹಣ ಬಳಕೆ ಮತ್ತು ನಮ್ಮ ಯೋಜನಾ ಸಾಧನೆಯ ಬಗ್ಗೆ ಕೇಂದ್ರ ಯೋಜನಾ ಆಯೋಗದ ಉಪಾಧ್ಯಕ್ಷರು ಇತ್ತೀಚೆಗೆ ನಡೆದ ರಾಷ್ಟ್ರೀಯ ಅಭಿವದ್ಧಿ ಮಂಡಳಿ ಸಭೆಯಲ್ಲಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ವಾರ್ಷಿಕ ಯೋಜನೆ 1999-2000

34. ಇತ್ತೀಚೆಗೆ ರಾಜ್ಯದ ಮುಖ್ಯಮಂತ್ರಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರ ನಡುವೆ ನಡೆದೆ ಸಭೆಯಲ್ಲಿ ಕರ್ನಾಟಕ ಯೋಜನಾ ಗಾತ್ರವನ್ನು 5800 ಕೋಟಿ ರೂ.ಗಳಿಗೆ ನಿಗದಿಪಡಿಸಲಾಗಿದೆ. ಆದರೆ ಇಲಾಖೆಗಳ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ಯೋಜನಾ ಗಾತ್ರವನ್ನು 5888 ಕೋಟಿ ರೂ.ಗಳಿಗೋ ಹೆಚ್ಚಿಸಲಾಗಿದೆ. ಕಳೆದ ವರ್ಷ ನಿಗದಿಯಾಗಿದ್ದ ಜಿಲ್ಲಾ ಯೋಜನಾ ಗಾತ್ರ 732 ಕೋಟಿ. ರೂ.ಗಳು. ಈಗ ಅದನ್ನು 792 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

35. ರಾಜ್ಯದ ಸ್ವಂತ ಸಂಪನ್ಮೂಲಗಳ ಜೊತೆಗೆ ರಾಜ್ಯದ ಯೋಜನೆಗೆ ಮಾರುಕಟ್ಟೆ ಎತ್ತುವಳಿಯ ಮೂಲಕ ಸಹ ಹಣಕಾಸಿನ ನೆರವು ಒದಗಿಸಬೇಕಾಗುತ್ತದೆ. ಈಗ ರಾಜ್ಯದ ಯೋಜನೆಗೆ ನಮ್ಮ ಸ್ವಂತ ಸಂಪನ್ಮೂಲದಿಂದ ಗರಿಷ್ಟ ಪ್ರಮಾಣದಲ್ಲಿ ಹಣ ಒದಗಿಸಿದ್ದೇವೆ. ರಾಜ್ಯದ ಮಾರುಕಟ್ಟೆ ಎತ್ತುವಳಿ ಪ್ರಮಾಣವನ್ನು ಕೇಂದ್ರ ಯೋಜನಾ ಆಯೋಗವು ನಿರ್ಧರಿಸುತ್ತದೆ. ದುರಾದೃಷ್ಟವೆಂದರೆ ರಾಜ್ಯಗಳಿಗೆ

ಮಾರುಕಟ್ಟೆ ಎತ್ತುವಳಿಯನ್ನು ನಿಗದಿಗೊಳಿಸಲು ಈಗ ಯಾವುದೇ ಒಂದು ನಿಗದಿತ ಮಾನದಂಡವೇ ಇಲ್ಲ. ಯೋಜನಾ ಆಯೋಗವು ನಮಗೆ ನಿಗದಿಗೊಳಿಸಿರುವ ಮಾರುಕಟ್ಟೆ ಎತ್ತುವಳಿ ಪ್ರಮಾಣ ಸಮರ್ಪಕವಾಗಿಲ್ಲ.

ಸಾರ್ವಜನಿಕ ಉದ್ದಿಮೆಗಳ ಬಂಡವಾಳ ಹಿಂದೆಗೆಯುವುದು.

36. ಈಗಿನ ಉದಾರೀಕರಣ ಯುಗದಲ್ಲಿ ಸಾರ್ವಜನಿಕ ಉದ್ದಿಮೆಗಳ ಸ್ಥಾಪನೆ ಅಥವಾ ಇವುಗಳನ್ನು ನಡೆಸುವುದರಲ್ಲಿ ಸರ್ಕಾರದ ಪಾತ್ರ ಸೀಮಿತಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ವಿವಿಧ ವಲಯಗಳಲ್ಲಿ ಖಾಸಗಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಸರ್ಕಾರವು ಎಲ್ಲ ಪ್ರಯತ್ನಗಳನ್ನು ನಡೆಸುತ್ತಿದೆ. ಇದರ ಜೊತೆಗೆ ಕರ್ನಾಟಕ ಸರ್ಕಾರವು ರಾಜ್ಯದ ಸಾರ್ವಜನಿಕ ಉದ್ದಿಮೆಗಳಲ್ಲಿರುವ ತನ್ನ ಷೇರು ಬಂಡವಾಳವನ್ನು ಹಿಂತೆಗೆದುಕೊಳ್ಳಲು ಬಯಸುತ್ತದೆ. ಈ ನಿಟ್ಟಿನಲ್ಲಿ ನಾವು ಪ್ರಯತ್ನ ನಡೆಸುತ್ತಿದ್ದರೂ ಆರ್ಥಿಕ ಹಿಂಜರಿತದ ಕಾರಣದಿಂದ ಉತ್ತಮ ಪ್ರತಿಕ್ರಿಯೆ ಕಂಡು ಬಂದಿಲ್ಲ. ಈ ಕಾರ್ಯಾಚರಣೆಯನ್ನು ನಾವು ಇನ್ನಷ್ಟು ಚುರುಗೊಳಿಸುತ್ತೇವೆ. ನಮ್ಮ ಅಗತ್ಯ, ಅನುಕೂಲಗಳನ್ನು ನೋಡಿಕೊಂಡು ಪರಸ್ಪರ ಹೊಂದಾಣಿಕೆ, ಪಾಲುಗಾರಿಕೆ ಮತ್ತು ಪೂರ್ಣ ಮಾರಾಟಗಳ ಮೂಲಕ ಸಾರ್ವಜನಿಕ ಉದ್ದಿಮೆಗಳನ್ನು ನಷ್ಟದಿಂದ ಪಾರು ಮಾಡಲು ಪ್ರಯತ್ನಿಸುತ್ತೇವೆ. ಬಂಡವಾಳ ಹಿಂತೆಗೆದುಕೊಳ್ಳುವಾಗ ಸಾರ್ವಜನಿಕ ಉದ್ದಿಮೆಗಳ ನೌಕರರ ಹಿತವನ್ನು ರಕ್ಷಿಸಲಾಗುವುದು.

'ಸ್ವಯಂ ನಿವೃತ್ತಿ ಯೋಜನಾ ' ನಿಧಿ

37. ಸಾರ್ವಜನಿಕ ಉದ್ದಿಮೆಗಳ ಬಂಡವಾಳ ವಾಪಸ್ ಪಡೆಯುವುದರಿಂದ ಬರುವ ಹಣವನ್ನು ಸ್ವಯಂ ನಿವೃತ್ತಿ ಯೋಜನಾ ನಿಧಿಯಲ್ಲಿ ಇರಿಸಲಾಗುವುದು. ಈ ನಿಧಿಯನ್ನು ಆರ್ಥಿಕ ಇಲಾಖೆ ನಿರ್ವಹಿಸತ್ತದೆ. ರಾಜ್ಯ ಸರ್ಕಾರವು ಈ ನಿಧಿಗೆ ಹತ್ತು ಕೋಟಿ ರೂಪಾಯಿಗಳನ್ನು ದೇಣಿಗೆಯಾಗಿ ನೀಡುತ್ತದೆ. ಈ ನಿಧಿಗೆ ಭಾರತ ಸರ್ಕಾರವು ಸಹ ಹತ್ತು ಕೋಟಿ ರೂ.ಗಳನ್ನು ನೀಡಬೇಕೆಂದು ಕೋರುತ್ತೇನೆ. ಆಯ್ದ ಸಾರ್ವಜನಿಕ ಉದ್ದಿಮೆಗಳಲ್ಲಿ 'ಸ್ವಯಂ ನಿವೃತ್ತಿ ಯೋಜನೆ ' ಗೆ ಈ ನಿಧಿಯನ್ನು ಬಳಸಿಕೊಳ್ಳಲಾಗುವುದು.

ಸಮಾಜ ಕಲ್ಯಾಣ

38. ನಮ್ಮ ಸರ್ಕಾರವು ದುರ್ಬಲ ವರ್ಗಗಳ ಕಲ್ಯಾಣಕ್ಕೆ ಹಾಗೂ ಅವರಿಗೆ ಸಾಮಾಜಿಕ ನ್ಯಾಯ ಒದಗಿಸಲು ಬದ್ಧವಾಗಿದೆ. ಈ ಆಯವ್ಯಯದಲ್ಲಿ ನಾವು ವಿಶೇಷ ಘಟಕ ಯೋಜನೆಗೆ 443 ಕೋಟಿ ರೂ.ಗಳನ್ನು ಮತ್ತು ಟ್ರೈಬಲ್ ಸಬ್ ಪ್ಲಾನ್‌ಗೆ 88 ಕೋಟಿ ರೂ.ಗಳನ್ನು ಒದಗಿಸಿದ್ದೇವೆ.

39. ಕಳೆದ ನಾಲ್ಕು ವರ್ಷಗಳಲ್ಲಿ ನಾವು 239 ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ನಿರ್ಮಿಸಿದ್ದೇವೆ. ಇದಕ್ಕೂ ಹಿಂದಿನ ನಾಲ್ಕು ವರ್ಷಗಳಿಗೆ ಹೋಲಿಸಿದರೆ ನಮ್ಮ ಸಾಧನೆ ಎರಡು ಪಟ್ಟು ಹೆಚ್ಚಾಗಿದೆ. ಈ ವರ್ಷ ನಾವು 30 ಮೆಟ್ರಿಕ್ ಪೂರ್ವ ಮತ್ತು 25 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ಆರಂಭಿಸಿದ್ದೇವೆ. ಮುಂದಿನ ವರ್ಷ 25 ಮೆಟ್ರಿಕ್ ಪೂರ್ವ ಮತ್ತು 25 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಇಚ್ಛಿಸಿದ್ದೇವೆ. ಇವುಗಳಲ್ಲಿ ಐದು ವಿದ್ಯಾರ್ಥಿನಿಲಯಗಳನ್ನು ಪರಿಶಿಷ್ಟ ಬುಡಕಟ್ಟಿನ ವಿದ್ಯಾರ್ಥಿಗಳಿಗೆ ಮೀಸಲಿಡಲಾಗುವುದು.

40. ''ಅಂಬೇಡ್ಕರ್ ಸಮಗ್ರ ಗ್ರಾಮೀಣ ಅಭಿವೃದ್ದಿ'' ಎಂಬ ಹೊಸ ಕಾರ್ಯಕ್ರಮದಡಿಯಲ್ಲಿ ಶೇಕಡಾ 50 ಕ್ಕಿಂತ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿರುವ ಎಲ್ಲಾ ಗ್ರಾಮಗಳನ್ನು 9ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಮಗ್ರವಾಗಿ ಅಭಿವೃದ್ಧಿಗೊಳಿಸಲಾಗುವುದು. ಇದಕ್ಕಾಗಿ ಆಯವ್ಯಯದಲ್ಲಿ 5ಕೋಟಿ ರೂ. ಒದಗಿಸಲಾಗಿದೆ.

41. ಕಳೆದ ವರ್ಷ ನಿರ್ಮಾಣವಾಗದೆ ಉಳಿದ ಬಾಕಿಯನ್ನೂ ಸೇರಿಸಿ 80,000 ಅಂಬೇಡ್ಕರ್ ವಸತಿಗಳನ್ನು 1999-2000ನೇ ಸಾಲಿನಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ.

42. ವಸತಿ ಶಾಲೆ ಇಲ್ಲದಿರುವ ಏಳು ಜಿಲ್ಲೆಗಳಲ್ಲಿ ಮುಂದಿನ ವರ್ಷ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ತೆರೆಯಲು ಸರ್ಕಾರ ಉದ್ದೇಶಿಸಿದೆ.

43. ಪ್ರತಿಷ್ಠಿತ ಸಂಸ್ಥೆಗಳಾದ ಐಐಟಿ; ಐಐಎಂ; ಐಐಎಸ್‌ಸಿಗಳಲ್ಲಿ ಪ್ರವೇಶ ಪಡೆಯುವ ಪರಿಶಿಷ್ಟ ಜಾತಿ-ಪಂಗಡಗಳ ವಿದ್ಯಾರ್ಥಿಗಳಿಗೆ ಅವರ ಫೀಸನ್ನು ಭರಿಸುವ ಸಲುವಾಗಿ ಒಂದು ಸಮಯದ ಶಿಷ್ಯವೇತನವಾಗಿ 25,000 ರೂ. ಗಳನ್ನು ನೀಡಲಾಗುವುದು. ಪರಿಶಿಷ್ಟ ಜಾತಿ-ಪಂಗಡದ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗ ಮಾಡಲು ಈ ನೂತನ ಯೋಜನೆಯಿಂದ ಪ್ರೇರಣೆ ಹಾಗೂ ನೆರವು ಸಿಗುತ್ತದೆ.

44. ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಪ್ರವೇಶ ಮತ್ತು ಶಿಷ್ಯವೇತನ ಪಡೆಯುವ ಪರಿಶಿಷ್ಟ ಜಾತಿ-ಪಂಗಡದ ವಿದ್ಯಾರ್ಥಿಗಳು ಪ್ರಯಾಣ ವೆಚ್ಚವನ್ನು ಭರಿಸಲು ತೊಂದರೆ ಅನುಭವಿಸುವುದನ್ನು ತಪ್ಪಿಸಲು ನಾವು ಹೊಸ ಯೋಜನೆಯೊಂದನ್ನು ಘೋಷಿಸುತ್ತಿದ್ದೇವೆ. ಇದರನ್ವಯ ಇಂತಹ ವಿದ್ಯಾರ್ಥಿಗಳಿಗೆ ವಿದೇಶಕ್ಕೆ ಹೋಗಲು ಒಂದು ಕಡೆಯ ವಿಮಾನ ವೆಚ್ಚವನ್ನು ಸರ್ಕಾರ ನೀಡುತ್ತದೆ.

45. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಹಣವನ್ನು ಒಂದೆಡೆ ಕ್ರೋಢೀಕರಿಸುತ್ತಿರುವ ಪದ್ಧತಿ ಮುಂದುವರಿಯಲಿದೆ. ಹಂಚಿಕೆಗೆ ಲಭ್ಯವಿರುವ ನಿಧಿಯಿಂದ ವರ್ಷಾರಂಭದಲ್ಲಿಯೇ 91 ಕೋಟಿ ರೂ. ಗಳನ್ನು ನಾವು ಕ್ರೋಢೀಕರಿಸಿ ಸಮಾಜ ಕಲ್ಯಾಣ ಇಲಾಖೆಗೆ ಒದಗಿಸಲಿದ್ದೇವೆ. ಉಳಿಕೆ ಹಣವನ್ನು ಆರ್ಥಿಕ ವರ್ಷದ ಮೊದಲನೆ ತ್ರೈಮಾಸಿಕದಲ್ಲಿ ಸಂಗ್ರಹಿಸಿ ನೀಡಲಾಗುವುದು.

46. ಬೆಂಗಳೂರಿನಲ್ಲಿ ನಿರ್ಮಾಣವಾಗುತ್ತಿರುವ ಅಂಬೇಡ್ಕರ್ ಭವನ 1999ರ ಏಪ್ರಿಲ್ 14 ರಂದು ಉದ್ಘಾಟನೆಗೊಳ್ಳಲಿದೆಯೆಂದು ತಿಳಿಸಲು ಹರ್ಷಿಸುತ್ತೇನೆ.

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿ ನಿಗಮ

47. ಪರಿಶಿಷ್ಟ ಜಾತಿ ಮತ್ತು ಪಂಗಡದವರ ಆರ್ಥಿಕ ಬಲವರ್ಧನೆಯಲ್ಲಿ ಈ ನಿಗಮ ಪ್ರಮುಖ ಪಾತ್ರ ವಹಿಸುತ್ತಿದೆ. ಈ ವರ್ಗಗಳ ಜನರ ಗುಣಾತ್ಮಕ ಬದಲಾವಣೆಗಾಗಿ ನಿಗಮದ ಕಾರ್ಯಕ್ರಮಗಳಲ್ಲಿ ಆಸ್ತಿ ನಿರ್ಮಾಣಕ್ಕೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. ಫಲಾನುಭವಿಗಳ ಸಾಲ ಸಾಮರ್ಥ್ಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ ಮುಂದಿನ ವರ್ಷ ಗಂಗಾ ಕಲ್ಯಾಣ ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ ಮುಂದಿನ ವರ್ಷ ಗಂಗಾ ಕಲ್ಯಾಣ ಕಾರ್ಯಕ್ರಮದಡಿ 1100 ಕೊಳವೆ ಬಾವಿಗಳನ್ನು ತೋಡಿಸಲು ಉದ್ದೇಶಿಸಲಾಗಿದೆ.

ಹಿಂದುಳಿದ ವರ್ಗಗಳ ಅಭಿವೃದ್ಧಿ

48. ಹಿಂದುಳಿದ ವರ್ಗಗಳ ಜೀವನಮಟ್ಟ ಸುಧಾರಣೆಯ ನಮ್ಮ ಪ್ರಯತ್ನ ಮುಂದುವರಿಯುತ್ತದೆ. ಹಿಂದುಳಿದ ವರ್ಗಗಳಿಗಾಗಿ ಮುಂದಿನ ವರ್ಷ ನಾವು 105 ಕೋಟಿ ರೂ. ಗಳನ್ನು ಒದಗಿಸಿದ್ದೇವೆ.

49. ಕಳೆದ ನಾಲ್ಕು ವರ್ಷಗಳಲ್ಲಿ ನಾವು 391 ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್‌ನಂತರದ ವಿದ್ಯಾರ್ಥಿ ನಿಲಯಗಳನ್ನು ಆರಂಭಿಸಿದ್ದೇವೆ. ಇದರ ಜೊತೆಗೆ 233 ಹಾಸ್ಟೆಲ್‌ಗಳ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಿದ್ದೇವೆ. ಇದಕ್ಕೂ ಹಿಂದಿನ ನಾಲ್ಕು ವರ್ಷಗಳಲ್ಲಿ ನಿರ್ಮಿಸಿದ್ದ 141 ಹಾಸ್ಟೆಲ್‌ಗಳಿಗೆ ಇದನ್ನು ಹೋಲಿಸಿದರೆ ನಮ್ಮ ಸಾಧನೆ ಗಣನೀಯವಾಗಿರುವುದು ಕಂಡುಬರುತ್ತದೆ. ಪ್ರಸ್ತುತ ವರ್ಷನಾವು 14 ವಸತಿ ಶಾಲೆಗಳನ್ನು ಆರಂಭಿಸಿದ್ದೇವೆ. 1998-99ರಲ್ಲಿ ಒಟ್ಟು 58 ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ನಿರ್ಮಾಣ ಪೂರ್ಣಗೊಳಿಸಿದ್ದೇವೆ. 47 ಹೊಸ ಮೆಟ್ರಿಕ್ ಪೂರ್ವಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಮಂಜೂರಾತಿ ನೀಡಲಾಗಿದೆ. ವಿಶ್ವವಿದ್ಯಾಲಯಗಳಲ್ಲಿನ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ತೆರೆಯಲಾಗುವ ಆರು ವಿದ್ಯಾರ್ಥಿ ನಿಲಯಗಳೂ ಇದರಲ್ಲಿ ಸೇರಿವೆ.

50. 'ಬೆಳ್ಳಿಬೆಳಕು' ಯೋಜನೆಡಿ 26 ಹಳ್ಳಿಗಳಲ್ಲಿನ 1200 ಕುಟುಂಬಗಳಿಗೆ ವಸತಿ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಲಾಗಿದೆ.

51. ಗ್ರಾಮೀಣ ಹೆಣ್ಣುಮಕ್ಕಳು ತಮ್ಮ ಕಾಲೇಜು ವ್ಯಾಸಂಗವನ್ನು ಮುಂದುವರಿಸಲು ಅನುಕೂಲವಾಗುವಂತೆ 10 ಮೆಟ್ರಿಕ್ ನಂತರದ ಮತ್ತು 15 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ತೆರೆಯಲಾಗುವುದು. ಹಿಂದುಳಿದ ಜಾತಿಗಳಿಗೆ ಸೇರಿದ ಮಕ್ಕಳಿಗಾಗಿ ಮೂರು ಹೊಸ ಆಶ್ರಮ ಶಾಲೆಗಳನ್ನು ಕೂಡ ತೆರೆಯಲಾಗುವುದು.

52. ಹಿಂದುಳಿದ ಜಾತಿಯವರ ಅಭಿವೃದ್ಧಿಗಾಗಿ ನೆರವು ನೀಡುತ್ತಿರುವ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕಾರ್ಯಶೀಲತೆ ಉತ್ತಮವಾಗಿದೆ. 1998-99ನೇ ಸಾಲಿನಲ್ಲಿ 22,000 ಮಂದಿಗೆ 15. 10 ಕೋಟಿ ರೂ.ಗಳ ಸಾಲವನ್ನು ವಿತರಿಸಲಾಗಿದೆ. ಗಂಗಾ ಕಲ್ಯಾಣ ಯೋಜನೆಯಡಿ 135 ಘಟಕಗಳಿಗೆ 2000 ಎಕರೆ ಜಮೀನಿಗೆ ನೀರುಣಿಸಲು 3.41 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

53. ಸಾಲ ಯೋಜನೆಯಡಿ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು 1999-2000ಸಾಲಿನಲ್ಲಿ 18,000 ಹಿಂದುಳಿದ ವರ್ಗಗಳ ಜನರಿಗೆ ನೆರವು ಒದಗಿಸಲು ಉದ್ದೇಶಿಸಿದೆ. ಜೊತೆಗೆ 2000 ನಿರುದ್ಯೋಗಿ ಯುವಕರಿಗೆ ವಿವಿಧ ಕೌಶಲ್ಯಗಳ ಅಭಿವೃದ್ಧಿ ತರಬೇತಿ ನೀಡಲಾಗುವುದು. ಗಂಗಾಕಲ್ಯಾಣ ಯೋಜನೆಯಡಿ 2000ಎಕರೆ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲಾಗುವುದು.

ಅಲ್ಪಸಂಖ್ಯಾತರ ಅಭಿವೃದ್ಧಿ

54. ಅಲ್ಪಸಂಖ್ಯಾತರ ಆಶೋತ್ತರಗಳಿಗೆ ನಮ್ಮ ಸರ್ಕಾರವು ಸದಾ ಸ್ಪಂದಿಸುತ್ತಿದೆ. ಸರ್ಕಾರದ ಎಲ್ಲಅಭಿವೃದ್ಧಿ ಇಲಾಖೆಗಳು ಅಲ್ಪಸಂಖ್ಯಾತರಿಗೆ ವಿವಿಧ ಸವಲತ್ತುಗಳನ್ನು ನೀಡಲು ಪ್ರಯತ್ನಿಸುತ್ತಿದೆ.

55. ಕರ್ನಾಟಕ ಅಲ್ಪಸಂಖ್ಯಾತರ ಆಯೋಗವು ಅಲ್ಪಸಂಖ್ಯಾತರ ಸರ್ವತೋಮುಖ ಅಭಿವೃದ್ಧಿಗಾಗಿ ಕಾರ್ಯಯೋಜನೆಯೊಂದನ್ನು ಸಿದ್ದಪಡಿಸಿದೆ. ಇದನ್ನು ವಿವಿಧ ಅಭಿವೃದ್ಧಿ ಇಲಾಖೆಗಳು ಈಗಾಗಲೇ ಕಾರ್ಯರೂಪಕ್ಕೆ ತರುತ್ತಿವೆ ಎಂದು ಹೇಳಲು ನಾನು ಸಂತೋಷಪಡುತ್ತೇನೆ. ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆ.

56. ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಮನ್ವಯಗೊಳಿಸಿ ಅನುಷ್ಠಾನಗೊಳಿಸಲು ಪ್ರತ್ಯೇಕವಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯವನ್ನು ಸ್ಥಾಪಿಸಿರುವ ವಿಷಯ ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಇದು ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ಎಲ್ಲ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತದೆ.

57. ಅಲ್ಪಸಂಖ್ಯಾತರಿಗಾಗಿ 1999-2000ನೇ ಸಾಲಿನಲ್ಲಿ ನಾಲ್ಕು ವಸತಿ ಶಾಲೆಗಳನ್ನು ಆರಂಭಿಸಲು ನಾವು ಉದ್ದೇಶಿಸಿದ್ದೇವೆ.

58. 1999-2000ನೇ ಸಾಲಿಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು 10,000 ಮಂದಿ ಫಲಾನುಭವಿಗಳಿಗೆ ನೆರವು ಉದ್ದೇಶಿಸಿದೆ. ಇದರಲ್ಲಿ ವೃತ್ತಿ ತರಬೇತಿ, ಕುಶಲಕರ್ಮಿಗಳಿಗೆ ಮತ್ತು ವಿಧವೆಯರಿಗೆ ಸಾಲ ನೀಡಿಕೆ ಮತ್ತು ನೀರಾವರಿ ಯೋಜನೆಗಳಿಗೆ ನೆರವು ನೀಡುವುದು ಸೇರಿದೆ.

59. ವಕ್ಫ್ ಮಂಡಳಿಗೆ ನೀಡುತ್ತಿರುವ ಅನುದಾನವನ್ನು 1999-2000ನೇ ಸಾಲಿಗೆ 7 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

ಕೇಂದ್ರ ಪರಿಹಾರ ಸಮಿತಿ

60. ಕೇಂದ್ರ ಪರಿಹಾರ ಸಮಿತಿಯು ಸಂಗ್ರಹಿಸಿರುವ ಭಿಕ್ಷುಕರ ತೆರಿಗೆಯಲ್ಲಿ 1999-2000ನೇ ಸಾಲಿನಲ್ಲಿ ನಾಲ್ಕು ಹೊಸ ಭಿಕ್ಷುಕರ ಪರಿಹಾರ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

61. ಮಹಿಳೆಯರನ್ನು ಕುರಿತ ಸರ್ಕಾರದ ನೀತಿಗಳು ಕಲ್ಯಾಣ ಕಾರ್ಯಕ್ರಮಗಳಿಗೆ ಒತ್ತು ನೀಡುವ ಬದಲಿಗೆ ಅವರನ್ನು ಸಶಕ್ತಗೊಳಿಸುವತ್ತ ಗಮನ ಹರಿಸಿವೆ. ಈ ಮೂಲಕ ಅವರಲ್ಲಿ ಆತ್ಮ ವಿಶ್ವಾಸ ಮೂಡಿಸುವ, ಅವರ ಶಕ್ತಿ ವರ್ಧಿಸುವ ಕಾರ್ಯಕ್ರಮಗಳಿಗೆ ಆದ್ಯತೆ ನೀಡುತ್ತಿವೆ. ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆಯಡಿಯಲ್ಲಿ ಫಲಾನುಭವಿಗಳು ಹಾಗೂ ಕಾರ್ಮಿಕರನ್ನು ಗುರಿಯಾಗಿಸಿಕೊಂಡ ಎಲ್ಲಾ ಕಾರ್ಯಕ್ರಮಗಳಲ್ಲಿ ಸಂಪನ್ಮೂಲದ 1/3 ಭಾಗವನ್ನು ಮಹಿಳೆಯರಿಗೆ ಮೀಸಲಿಡಬೇಕೆಂದು ರಾಜ್ಯ ಸರ್ಕಾರ ನಿಗದಿಗೊಳಿಸಿದೆ. ಇಲಾಖೆಯ ಇತರ ಕಾರ್ಯಕ್ರಮಗಳಾದ 'ನವಜೀವನ' 'ಸ್ವಶಕ್ತಿ' 'ನಮ್ಮ ಮಗಳು ನಮ್ಮ ಶಕ್ತಿ' ಮತ್ತು 'ವಿಕಸಿನಿ' ಇವು ಉದ್ಯಮಶೀಲ ಬಡ ಮಹಿಳೆಯರಿಗೆ ನೆರವು ನೀಡುತ್ತವೆ. ಹಾಗೂ ಅವರಲ್ಲಿ ಉದ್ಯಮಶೀಲತೆಯನ್ನು ರೂಢಿಸುತ್ತವೆ.

62. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ 1999-2000ನೇ ಸಾಲಿನಲ್ಲಿ 134 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

63. ಕಳೆದ ನಾಲ್ಕು ವರ್ಷಗಳಲ್ಲಿ ಮಕ್ಕಳ ವಿಶೇಷ ಪೌಷ್ಠಿಕ ಕಾರ್ಯಕ್ರಮಕ್ಕಾಗಿ ನಾವು 252 ಕೋಟಿ ರೂ.ಗಳನ್ನು ವೆಚ್ಚ ಮಾಡಿದ್ದೇವೆ. 1994-95ರಲ್ಲಿ ಇದ್ದ 148 ಸಮಗ್ರ ಶಿಶು ಅಭಿವೃದ್ದಿ ಕೇಂದ್ರಗಳ ಸಂಖ್ಯೆಯನ್ನು 185ಕ್ಕೆ ಹೆಚ್ಚಿಸಿದ್ದೇವೆ. ಮಕ್ಕಳಲ್ಲಿ ಅಪೌಷ್ಠಿಕತೆಯನ್ನು ನಿವಾರಿಸಲು ಇದು ನಮಗೆ ನೆರವಾಗಿದೆ. ಅಲ್ಲದೆ ಗ್ರಾಮೀಣ ಮಹಿಳೆಯರಲ್ಲಿ ಆರೋಗ್ಯ ಮತ್ತು ಪೌಷ್ಠಿಕತೆಯ ಬಗ್ಗೆ ಹೆಚ್ಚು ಅರಿವು ಮೂಡಿಸಿದೆ.

64. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮದ ಯಶಸ್ಸಿಗಾಗಿ ದುಡಿಯುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಶ್ರಮವನ್ನು ನಾನು ಇಲ್ಲಿ ಉಲ್ಲೇಖಿಸ ಬಯಸುತ್ತೇನೆ. ಈಗ ಅಂಗನವಾಡಿ ಕಾರ್ಯಕರ್ತರಿಗೆ ನೀಡುತ್ತಿರುವ ಮಾಸಿಕ ಗೌರವಧನದಲ್ಲಿ 150 ರೂ.ಗಳ ಏರಿಕೆಯನ್ನು, ಅಂಗನವಾಡಿ ಸಹಾಯಕಿಯರ ಗೌರವಧನದಲ್ಲಿ 75 ರೂ.ಗಳ ಏರಿಕೆಯನ್ನು ಘೋಷಿಸಲು ಹರ್ಷಿಸುತ್ತೇನೆ. ಇದರಿಂದ ವಾರ್ಷಿಕವಾಗಿ ಹೆಚ್ಚುವರಿ 10.8 ಕೋಟಿ ರೂ.ಗಳನ್ನು ನೀಡಬೇಕಾಗುತ್ತದೆ.

65. ನರ್ಸರಿ ಶಾಲೆಗಳಿಗೆ ಹೋಗುವ ಮಕ್ಕಳಲ್ಲಿ ಅಂಗವಿಕಲತೆ ಪತ್ತೆ ಹಚ್ಚುವ ಹಾಗೂ ತಡೆಗಟ್ಟುವ ಯೋಜನೆಯನ್ನು ಈ ವರ್ಷದಿಂದ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಕಿವುಡ ಹಾಗು ಕುರುಡರ ಸರ್ಕಾರಿ ಶಾಲೆಗಳಿಗೆ ನೀಡುವ ಸೌಲಭ್ಯಗಳನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ. ಇಲೆಕ್ಟ್ರಾನಿಕ್ ಹಾಗೂ ಕಂಪ್ಯೂಟರ್ ಉಪಕರಣ ನೀಡುವ ಮೂಲಕ ಮೈಸೂರಿನಲ್ಲಿರುವ ಬ್ರೈಲ್ ಮುದ್ರಣಾಲಯವನ್ನು ಆಧುನೀಕರಿಸಲಾಗುವುದು.

ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್

66. ಗ್ರಾಮೀಣ ಪ್ರದೇಶದ ಜನರ ಜೀವನಮಟ್ಟ ಸುಧಾರಿಸಲು ನಾವು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಆದರೂ ಈ ನಿಟ್ಟಿನಲ್ಲಿ ಮಾಡುವ ಕೆಲಸ ಇನ್ನೂ ಇದೆ. ಗ್ರಾಮೀಣ ಪ್ರದೇಶದ ಮೂಲ ಸವಲತ್ತುಗಳನ್ನು ಮೇಲ್ದರ್ಜೆಗೇರಿಸುವುದ ಮತ್ತು ನಾಗರೀಕ ಸೌಲಭ್ಯಗಳನ್ನು ಸುಧಾರಿಸುವುದು ನಮ್ಮ ಕಾರ್ಯಕ್ರಮಗಳ ಮೂಲ ಆಶಯವಾಗಿದ್ದರೂ ಉದ್ಯೋಗ ಸೃಷ್ಟಿ ಮತ್ತು ಆಸ್ತಿಗಳ ನಿರ್ಮಾಣಕ್ಕೂ ಕೂಡ ನಾವು ಹೆಚ್ಚು ಒತ್ತು ನೀಡುತ್ತಿದ್ದೇವೆ.

67. ಯಾವುದೇ ಜನವಸತಿ ಸುರಕ್ಷಿತ ಕುಡಿಯುವ ನೀರು ಮತ್ತು ಸ್ವಚ್ಛ ಪರಿಸರವನ್ನು ಬಯಸುತ್ತದೆ. ಈವರೆಗೆ ನಾವು 39,395 ಹಳ್ಳಿಗಳಿಗೆ ರಾಷ್ಟ್ರೀಯ ಮಾನದಂಡದ ರೀತ್ಯಾ ಪ್ರತಿ ವ್ಯಕ್ತಿಗೆ ಪ್ರತಿದಿನ 40 ಲೀಟರ್ ನೀರನ್ನು ಪೂರೈಸುತ್ತಿದ್ದೇವೆ. ಕಳೆದ ನಾಲ್ಕು ವರ್ಷಗಳಲ್ಲಿ ಗ್ರಾಮೀಣ ನೀರು ಸರಬರಾಜಿಗೆ ನಾವು ಪ್ರತಿವರ್ಷ ಸರಾಸರಿ 200 ಕೋಟಿ ರೂ.ಗಳನ್ನು ವೆಚ್ಚ ಮಾಡಿದ್ದೇವೆ. ಮುಂದಿನ ವರ್ಷ 500 ಕೋಟಿ ರೂ.ಗಳನ್ನು ವೆಚ್ಚ ಮಾಡಲು ಉದ್ದೇಶಿಸಿದ್ದೇವೆ. ಇದರಿಂದಾಗಿ ಕನಿಷ್ಟ 2000 ಕುಡಿಯುವ ನೀರು ಯೋಜನೆಗಳು ಮತ್ತು 2500 ಮಿನಿ ನೀರು ಸರಬರಾಜು ಯೋಜನೆಗಳು ಕಾರ್ಯಾರಂಭಗೊಳ್ಳಲಿವೆ. ಈ ನಮ್ಮ ಸಾಧನೆ ಹಿಂದಿನ ಯಾವುದೇ ವರ್ಷದ ಸರಾಸರಿ ಸಾಧನೆಗಿಂತ ಎರಡು ಪಟ್ಟು ಹೆಚ್ಚಾಗಿದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತದೆ.

68. ನೀರು ಸರಬರಾಜು ಯೋಜನೆಗಳ ನಿರ್ವಹಣೆಯ ಜವಾಬ್ದಾರಿಯನ್ನು ಸಂಬಂಧಿಸಿದ ಆಯಾ ಹಳ್ಳಿಗಳ ಜನರಿಗೇ ವಹಿಸಿಕೊಡಲು ನಾವು ಉದ್ದೇಶಿಸಿದ್ದೇವೆ. ಈ ಉದ್ದೇಶಕ್ಕಾಗಿ 'ನೀರು ಪಂಚಾಯತಿ'ಗಳನ್ನು ರಚಿಸಲಾಗುವುದು. ನೀರು ಬಳಕೆದಾರರ ಈ ಸಮಿತಿಗಳಿಗೆ ಅಗತ್ಯ ಸಂಪನ್ಮೂಲ ಮತ್ತು ಅಧಿಕಾರ ನೀಡಲಾಗುವುದು.

69. ಗ್ರಾಮೀಣ ನೈರ್ಮಲ್ಯ ಕಾರ್ಯಕ್ರಮಗಳಿಗೆ ಕೂಡ ನಾವು ಹೆಚ್ಚು ಹಣ ಒದಗಿಸುತ್ತಿದ್ದೇವೆ. ಮುಂಬರುವ ವರ್ಷದಲ್ಲಿ ಈ ಯೋಜನೆಯಡಿ ಮೂರು ಲಕ್ಷ ಶೌಚಾಲಯಗಳನ್ನು ನಿರ್ಮಿಸಲು 23 ಕೋಟಿ ರೂ.ಗಳನ್ನು ಒದಗಿಸಿದ್ದೇವೆ.

70. ಗ್ರಾಮೀಣಾಭಿವೃದ್ಧಿಯಲ್ಲಿ ನಮ್ಮ ನಿರಂತರ ಪ್ರಯತ್ನ ಮುಂದುವರಿಯುತ್ತಿದ್ದು 1999-2000ನೇ ವರ್ಷವನ್ನು ನಾವು 'ನೀರು ನೈರ್ಮಲ್ಯ ಸಂವತ್ಸರ' ಎಂದು ಘೋಷಿಸುತ್ತಿದ್ದೇವೆ.

71. ಹಳ್ಳಿಗಳಲ್ಲಿ ಕಸವನ್ನು ರಸ್ತೆ ಬದಿಯಲ್ಲೇ ಸುರಿಯುವ ದೃಶ್ಯವನ್ನು ನಾವು ನೀವೆಲ್ಲಾ ನೋಡಿದ್ದೇವೆ. ಇದಕ್ಕೆ ತಡೆ ಹಾಕಲು ನಾವು ''ಹಳ್ಳಿಯ ಹೊನ್ನು'' ಎಂಬ ಹೊಸ ಯೋಜನೆಯೊಂದನ್ನು ರೂಪಿಸಿದ್ದೇವೆ. ಇದರನ್ವಯ ಸರ್ಕಾರವು ಹಳ್ಳಿಗಳ ಪಕ್ಕದಲ್ಲಿನ ಜಮೀನನ್ನು ಸ್ವಾಧೀನಪಡಿಸಿಕೊಂಡು ಗ್ರಾಮ ಪಂಚಾಯಿತಿಗಳಿಗೆ ನೀಡುತ್ತದೆ. ಈ ಜಮೀನನ್ನು ಹಳ್ಳಿಯ ಜನರಿಗೆ ಕಾಂಪೋಸ್ಟ್ ಗುಂಡಿ ತೆಗೆದು ಕಸ ಸಂಗ್ರಹಿಸಿಕೊಳ್ಳಲು ಗುತ್ತಿಗೆ ಆಧಾರದ ಮೇಲೆ ನೀಡಲಾಗುವುದು. ಸರ್ಕಾರಿ ಜಮೀನು ಇಲ್ಲದ ಕಡೆ ಖಾಸಗೀ ಜಮೀನನ್ನೇ ಸರ್ಕಾರ ಸ್ವಾಧೀನಪಡಿಸಿಕೊಂಡು ಈ ಉದ್ದೇಶಕ್ಕಾಗಿ ನೀಡುತ್ತದೆ. ಈ ಯೋಜನೆಗಾಗಿ ಈ ವರ್ಷ ಮೂರು ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

72. ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಒದಗಿಸುವ ಪ್ರಮುಖ ಯೋಜನೆಗಳಾದ ಜವಾಹರ್ ರೋಜ್‌ಗಾರ್ ಯೋಜನೆ ಹಾಗೂ ಉದ್ಯೋಗ ಭರವಸೆ ಯೋಜನೆಯ ಜಾರಿ ಮುಂದುವರೆಯುತ್ತದೆ. 1998-99ನೇ ಸಾಲಿನಲ್ಲಿ 347 ಲಕ್ಷ ಮಾನವ ದಿನಗಳ ಉದ್ಯೋಗವನ್ನು 1998ರ ಡಿಸೆಂಬರ್ ಅಂತ್ಯದವರೆಗೆ ವಿವಿಧ ಉದ್ಯೋಗ ಯೋಜನೆಗಳಡಿಯಲ್ಲಿ ನೀಡಲಾಯಿತು. ಇದರಿಂದ 165 ಕೋಟಿ ರೂಪಾಯಿಗಳ ಮೂಲಭೂತ ಸೌಲಭ್ಯಗಳನ್ನು ಸೃಷ್ಟಿಸಲಾಯಿತು. ಉದ್ಯೋಗ ಭರವಸೆ ಯೋಜನೆಯಡಿ ಈ ವರ್ಷ 1000 ಅಂಗಡಿ ಮಳಿಗೆಯೊಳಗೊಂಡ ಬಸ್ ಶೆಲ್ಟರ್‌ಗಳನ್ನು ನಿರ್ಮಿಸಲಾಗುವುದು.

73. ಅಧಿಕಾರಿ ವಿಕೇಂದ್ರೀಕರಣದಲ್ಲಿ ಕರ್ನಾಟಕ ಪಾತ್ರ ಎಲ್ಲರಿಗೂ ತಿಳಿದಿದೆ. ಹಾಲಿ ಅಸ್ತಿತ್ವದಲ್ಲಿರುವ ಗ್ರಾಮ ಪಂಚಾಯತಿಗಳ ಪುನರ್ ಜೋಡಣೆಗೆ ಅನುವಾಗುವಂತೆ ಕರ್ನಾಟಕ ಪಂಚಾಯತ್‌ರಾಜ್ ಕಾಯಿದೆಗೆ ಸುಗ್ರೀವಾಜ್ಞೆಯ ಮೂಲಕ ರಾಜ್ಯ ಸರ್ಕಾರವು ತಿದ್ದುಪಡಿ ತಂದಿದೆ. ಕೆಳಹಂತದಲ್ಲಿರುವ ಗ್ರಾಮ ಪಂಚಾಯತ್‌ಗಳನ್ನು ಹೆಚ್ಚು ಶಕ್ತಿಯುತ ಮತ್ತು ಕಾರ್ಯಸಾಧುವನ್ನಾಗಿ ಮಾಡುವುದು ಹೆಚ್ಚು ತಿದ್ದುಪಡಿಯ ಉದ್ದೇಶವಾಗಿದೆ. ಗ್ರಾಮ ಪಂಚಾಯಿತಿಗಳಿಗೆ ಶಾಸನಬದ್ಧ ವಾರ್ಷಿಕ ಅನುದಾನವಾದ 56 ಕೋಟಿ ರೂ.ಗಳ ಜೊತೆಗೆ ಮುಂದಿನ ವರ್ಷ ಹೆಚ್ಚುವರಿಯಾಗಿ 5 ಕೋಟಿ ರೂ.ಗಳನ್ನು ನೀಡಲು ನಾನು ಉದ್ದೇಶಿಸಿದ್ದೇನೆ.

74. ರಾಜ್ಯ ಸರ್ಕಾರದಿಂದ, ಸ್ಥಳೀಯ ಸಂಸ್ಥೆಗಳಿಗೆ 2001-2006ನೇ ಇಸವಿಯವರೆಗೆ ಹಣ ವರ್ಗಾಯಿಸುವ ವಿಧಾನದ ಬಗ್ಗೆ ಸಲಹೆ ನೀಡಲು ಮೂರನೆ ರಾಜ್ಯ ಹಣಕಾಸು ಆಯೋಗವನ್ನು 1999-2000ನೇ ಸಾಲಿನಲ್ಲಿ ರಚಿಸಲಾಗುವುದು.

75. ಬಡತನ ರೇಖೆಯ ಕೆಳಗಿನ ಜನರನ್ನು ಲೆಕ್ಕ ಹಾಕುವುದರ ಬಗ್ಗೆ ಒಂದು ಅಂಶವನ್ನು ಪ್ರಸ್ತಾಪಿಸಲು ನಾನು ಬಯಸುತ್ತೇನೆ. ಈಗ ಕೇಂದ್ರ ಯೋಜನಾ ಆಯೋಗವು ಅನುಸರಿಸುತ್ತಿರುವ ವಿಧಾನದಿಂದ ಕರ್ನಾಟಕದಲ್ಲಿ ಕಡಿಮೆ ಕುಟುಂಬಗಳನ್ನು ಬಡತನದ ರೇಖೆಯ ಕೆಳಗಿವೆ ಎಂದು ಗುರುತಿಸಲಾಗುತ್ತಿದೆ.

ಗ್ರಾಮೀಣ ಅಭಿವೃದ್ಧಿ ಮತ್ತು ಇತರ ಕಾರ್ಯಕ್ರಮಗಳಡಿಯಲ್ಲಿ ಇದರಿಂದ ರಾಜ್ಯಕ್ಕೆ ಕಡಿಮೆ ನೆರವು ದಕ್ಕುತ್ತಿದೆ. ಆದ್ದರಿಂದ ಈ ವಿಧಾನವನ್ನು ಮರುಪರಿಶೀಲಿಸಬೇಕೆಂದು ನಾನು ಯೋಜನಾ ಆಯೋಗವನ್ನು ವಿನಂತಿಸುತ್ತೇನೆ.

ಕೃಷಿ

76. 1998-99ನೇ ಸಾಲಿನಲ್ಲಿ ನಾವು ಉತ್ತಮ ಬೆಳೆಯನ್ನು ನಿರೀಕ್ಷಿಸಿ 97.8 ಲಕ್ಷ ಟನ್ ಆಹಾರ ಧಾನ್ಯದ ಉತ್ಪಾದನೆಯ ಗುರಿ ಸಾಧಿಸುವ ಬಗ್ಗೆ ಭರವಸೆ ತಾಳಿದ್ದೆವು. ದುರಾದೃಷ್ಟವಶಾತ್ ಅತಿವೃಷ್ಟಿಯಿಂದಾಗಿ ರಾಜ್ಯದ ಅನೇಕ ಕಡೆ ಬೆಳೆ ಹಾಳಾಯಿತು. ಆದುದರಿಂದ ಆಹಾರ ಉತ್ಪಾದನೆಯ ಗುರಿ ಕಡಿಮೆಯಾಗಲಿದೆ. 1999-2000 ಸಾಲಿನಲ್ಲಿ ಆಹಾರ ಧಾನ್ಯ ಉತ್ಪಾದನೆ 101.62 ಲಕ್ಷ ಟನ್ ಆಗಬಹುದೆಂಬ ನಿರೀಕ್ಷೆಯಿದೆ.

77. ಒಟ್ಟು ರಾಷ್ಟ್ರೀಯ ಉತ್ಪನ್ನದಲ್ಲಿ ಕೃಷಿ ಸಲ್ಲಿಸುವ ಪಾಲು ಶೇ 30ರಷ್ಟು ಹಾಗೆಯೇ ನಮ್ಮ ಮಳೆಯಾಶ್ರಿತ ಕೃಷಿ ಭೂಮಿಯು ಹೆಚ್ಚಾಗಿದ್ದು ನಾವು ಲಭ್ಯ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಖುಷ್ಕಿ ಭೂಮಿಯ ಉತ್ಪನ್ನವನ್ನು ಹೆಚ್ಚಿಸಬೇಕಿರುವುದು ಇಂದಿನ ಅವಶ್ಯಕತೆ. ಈ ಗುರಿ ಸಾಧಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ. ರೈತರು ಕೊಳ್ಳುವ ಕೃಷಿ ಯಂತ್ರಗಳಿಗೆ ಸಹಾಯಧನ ನೀಡುವುದರ ಮೂಲಕ ಯಾಂತ್ರಿಕ ಕೃಷಿಗೆ ಹೆಚ್ಚು ಒತ್ತು ನೀಡಲಾಗಿದೆ. ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಒದಗಿಸುವುದು ನಮ್ಮ ಮತ್ತೊಂದು ಆದ್ಯತೆ.

78. ರೈತರ ಹಿತಾಸಕ್ತಿ ಕಾಪಾಡಲು ನಾವು ಬದ್ಧರಾಗಿದ್ದೇವೆ. ಅದರ ಸಂಕೇತವಾಗಿ ರೈತ ಸಮುದಾಯಕ್ಕೆ ಉತ್ತೇಜನ ನೀಡುವ ಸಲುವಾಗಿ ಆರಂಭಿಕವಾಗಿ 10 ಕೋಟಿ ರೂ. ಮೀಸಲಿರಿಸಿದ್ದೇವೆ. ಇದು ಗ್ರಾಮೀಣ ಪ್ರದೇಶದಲ್ಲಿ ಸಾಲ ಪಡೆಯಲು ನೆರವಾಗುವುದಲ್ಲದೆ ಗ್ರಾಮೀಣ ಪ್ರದೇಶದಲ್ಲಿ ಸಾಲ ಪಡೆದೆ ವಿಧಾನದಲ್ಲಿ ಸುಧಾರಣೆ ತರಲಿದೆ. ಈ ಯೋಜನೆಯ ವಿವರಗಳನ್ನು ನಂತರ ಪ್ರಕಟಿಸಲಾಗುವುದು.

79. ಮಾರುಕಟ್ಟೆಯ ದರಗಳ ಏರುಪೇರಿನಿಂದ ರೈತರಿಗೆ ಉತ್ತಮ ಬೆಲೆ ಸಿಗುವುದಿಲ್ಲ. ಇಂಥ ಅನಿಶ್ಚತತೆಯನ್ನು ಎದುರಿಸಲು ರೈತರಿಗೆ ಕೃಷಿ ಉತ್ಪನ್ನಗಳ ಸಂಸ್ಕರಣೆ ನೆರವಾಗುತ್ತದೆ. ಶೀಘ್ರದಲ್ಲೇ ನಾವು ಕೃಷಿ ಉತ್ಪನ್ನ ನೀತಿಯೊಂದನ್ನು ರೂಪಿಸಲಿದ್ದೇವೆ. ಇದು ಕೃಷಿ ಉತ್ಪನ್ನ ಸಂಸ್ಕರಣ ಕೈಗಾರಿಕೆಗಳಿಗೆ ನೆರವನ್ನೀಯುತ್ತದೆ. ಅಲ್ಲದೆ ನಾವು ರಾಜ್ಯದ ಉತ್ತರ ಹಾಗೂ ದಕ್ಷಿಣ ಭಾಗದಲ್ಲಿ ತಲಾ ಒಂದು ಕೃಷಿ ಉತ್ಪನ್ನ ಸಂಸ್ಕರಣ ಕೇಂದ್ರ ಸ್ಥಾಪಿಸಲು ಉದ್ದೇಶಿಸಿದ್ದೇವೆ.

80. ಪುಷ್ಪ ಕೃಷಿಯನ್ನು ಉತ್ತೇಜಿಸುವ ದೃಷ್ಟಿಯಿಂದ, ಕೃಷಿ ಉತ್ಪನ್ನ ರಫ್ತು ಅಭಿವೃದ್ಧಿ ಸಂಸ್ಥೆನೆರವಿನ ಮೂಲಕ ಪುಷ್ಪ ಹರಾಜು ಕೇಂದ್ರ ಸ್ಥಾಪಿಸಲು ನಾವು ಪರಿಶೀಲಿಸುತ್ತಿದ್ದೇವೆ.

ಪಶುಸಂಗೋಪನೆ

81. ಪಶುಸಂಗೋಪನೆಯು ನಮ್ಮ ರೈತರು ಮತ್ತು ಕೃಷಿ ಕಾರ್ಮಿಕರಿಗೆ ಹೆಚ್ಚುವರಿ ಆದಾಯವನ್ನು ಒದಗಿಸುತ್ತದೆ. ಸಕಾಲಿಕ ಪಶುವೈದ್ಯಕೀಯ ಸೇವೆ ಹಾಗೂ ಜಾನುವಾರು ನಿರ್ವಹಣೆಯ ತಿಳುವಳಿಕೆ, ಜಾನುವಾರು ಗುಣಮಟ್ಟ ಸುಧಾರಣೆಗೆ ಕಾರಣವಾಗುತ್ತದೆ. ರೈತ ಕುಟುಂಬಗಳಿಗೆ ಪಶುವೈದ್ಯ ಸೇವಾ ಸೌಲಭ್ಯ ಒದಗಿಸುವುದು ಸರ್ಕಾರದ ಪ್ರಯತ್ನವಾಗಿದೆ.

82. ರಾಜ್ಯದಲ್ಲಿ 3638 ವಿವಿಧ ಮಾದರಿಯ ಪಶುವೈದ್ಯಕೀಯ ಚಿಕಿತ್ಸಾಲಯಗಳಿವೆ, ಪ್ರಸ್ತುತ ವರ್ಷ ಗ್ರಾಮೀಣ ಪ್ರದೇಶದಲ್ಲಿ 100 ಪ್ರಾಥಮಿಕ ಪಶುವೈದ್ಯಕೀಯ ಸೇವಾ ಕೇಂದ್ರಗಳನ್ನು ಆರಂಭಿಸಲು 100 ಪ್ರಾಥಮಿಕ ಕೇಂದ್ರಗಳನ್ನು ಪಶು ಔಷಧಾಲಯಗಳನ್ನಾಗಿ ಮತ್ತು 50 ಪಶು ಔಷಧಾಲಯಗಳನ್ನು ಪಶು ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗುವುದು.

83. ಜಾನುವಾರಗಳಿಗೆ ತಗಲುವ ದೊಡ್ಡರೋಗದಿಂದ ರಾಜ್ಯ ಮುಕ್ತವಾಗಿದೆ. ಈ ವರ್ಷ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಕಾಲುಬಾಯಿ ರೋಗವನ್ನು ನಿರ್ಮೂಲನಗೊಳಿಸುವ ಪ್ರಾಯೋಗಿಕ ಕಾರ್ಯಕ್ರಮವೊಂದನ್ನು ಆರಂಭಿಸಿ ಬೆಂಗಳೂರಿನ ಸುತ್ತಮುತ್ತ 150 ಕಿ.ಮೀ. ವ್ಯಾಪ್ತಿಯ ಪ್ರದೇಶವನ್ನು 'ಕಾಲುಬಾಯಿ ರೋಗ ಮುಕ್ತ ವಲಯ'ವೆಂದು ಘೋಷಿಸಲಾಗುವುದು. ಇದಕ್ಕಾಗಿ 3.20 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ.

84. ರೈತರ ಮನೆ ಬಾಗಿಲಿಗೇ ತೆರಳಿ ಅವರ ಜಾನುವಾರುಗಳಿಗೆ ಕೃತಕ ಗರ್ಭಧಾರಣೆ ಮಾಡುವ ಕಾರ್ಯಕ್ರಮವನ್ನು ಕೇಂದ್ರಸರ್ಕಾರದ ಏಳುಕೋಟಿ ರೂ.ಗಳ ನೆರವಿನೊಡನೆ 1999-2000ನೇ ಸಾಲಿನಲ್ಲಿ ಆರಂಭಿಸಲಾಗುವುದು.

ತೋಟಗಾರಿಕೆ

85. ನಮ್ಮ ಆರ್ಥಿಕ ಅಭಿವೃದ್ಧಿಯಲ್ಲಿ ತೋಟಗಾರಿಕೆಯೂ ತುಂಬಾ ಮಹತ್ವದ ಪಾತ್ರವಹಿಸುತ್ತದೆ. ಉತ್ಪಾದನೆಯನ್ನು ವೃದ್ಧಿಸಲು 1999-2000ನೇ ಸಾಲಿನಲ್ಲಿ ಆಯ್ದ ನೂರು ತಾಲ್ಲೂಕುಗಳಲ್ಲಿ ಶೇ. 70ರ ಸಹಾಯಧನದಲ್ಲಿ 'ಹಸಿರು ಮನೆ'ಗಳ (ಗ್ರೀನ್ ಹೌಸ್) ಸ್ಥಾಪನೆ ಉತ್ತೇಜನ ನೀಡಲಾಗುವುದು. ಈ ಯೋಜನೆಯಲ್ಲಿ ಫಲಾನುಭವಿ ಶೇ. 30ರಷ್ಟು ವೆಚ್ಚವನ್ನು ಭರಿಸಬೇಕಾಗುತ್ತದೆ.

86. ತೆಂಗು ಅಭಿವೃದ್ಧಿ ಮಂಡಳಿಯ ನೆರವಿನಿಂದ 1999-2000ಸಾಲಿನಲ್ಲಿ ತೆಂಗಿನ ಮರಗಳನ್ನು ಕಾಡುವ ಕೀಟ ಹಾಗೂ ರೋಗಗಳ ಸಮಗ್ರ ನಿಯಂತ್ರಣ ಯೋಜನೆಯೊಂದನ್ನು ರೂಪಿಸಲಾಗಿದೆ. ಈ ಯೋಜನೆಯಡಿ ಸಸ್ಯ ಸಂರಕ್ಷಣಾ ರಾಸಾಯನಗಳನ್ನು, ಸಲಕರಣೆಗಳು ಮತ್ತು ಮಾನವ ಕೌಶಲ್ಯಗಳನ್ನು ಒದಗಿಸಲಾಗುವುದು. ತೆಂಗು ಅಭಿವೃದ್ಧಿ ಮಂಡಳಿಯ ಹಾಗೂ ತೋಟಗಾರಿಕೆ ಇಲಾಖೆಯ ಸಮಪಾಲಿನ ನೆರವಿನೊಡನೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

87. ತೋಟಗಾರಿಕೆಯಲ್ಲಿ ಸಾವಯವ ಕೃಷಿ ಮತ್ತು ಜೈವಿಕ ಗೊಬ್ಬರದ ಬಳಕೆಯನ್ನು ಪ್ರೋತ್ಸಾಹಿಸಲು ಹೊಸ ಯೋಜನೆಯನ್ನು ಆರಂಭಿಸಲು ನಾವು ಉದ್ದೇಶಿಸಿದ್ದೇವೆ.

ಶಿಕ್ಷಣ

88. ಶಿಕ್ಷಣ, ಪ್ರಗತಿಯ ಮೂಲ ಆಡಿಗಲ್ಲು ಎಂಬುದು ನಮ್ಮೆಲ್ಲರಿಗೂ ತಿಳಿದಿದೆ. ನಮ್ಮ ಸರ್ಕಾರ ಈ ನಿಟ್ಟಿನಲ್ಲಿ ಉತ್ತಮ ಕ್ರಮಗಳನ್ನು ಕೈಗೊಂಡಿದೆ ಎಂದು ತಿಳಿಸಲು ನನಗೆ ಹೆಮ್ಮೆಯೆನಿಸುತ್ತದೆ.

89. ಕಳೆದ ನಾಲ್ಕು ವರ್ಷಗಳಲ್ಲಿ ನಾವು 25791 ಪ್ರಾಥಮಿಕ ಶಾಲಾ ಕಟ್ಟಡಗಳನ್ನು ನಿರ್ಮಿಸಿದ್ದೇವೆ. 460 ಸೆಕೆಂಡರಿ ಶಾಲೆಗಳನ್ನು ಮಂಜೂರು ಮಾಡಿದ್ದೇವೆ. 86884 ಪ್ರಾಥಮಿಕ ಮತ್ತು 6538 ಸೆಕೆಂಡರಿ

ಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದೇವೆ. 1999-2000 ನೇ ಸಾಲಿನಲ್ಲಿ ಶಿಕ್ಷಕರ ನೇಮಕಾತಿಯಲ್ಲಿ ಇದೇ ವೇಗವನ್ನು ಉಳಿಸಿಕೊಳ್ಳಲು ಉದ್ದೇಶಿಸಲಾಗಿದ್ದು ಒಟ್ಟಾರೆ ಒಂದು ಲಕ್ಷಕ್ಕೂ ಮೀರಿ ಶಿಕ್ಷಕರ ನೇಮಕಾತಿ ಆಗುವ ನಿರೀಕ್ಷೆ ಇದೆ. ಇದರ ಜೊತೆಗೆ 72 ಪದವಿಪೂರ್ವ ಮತ್ತು ಪ್ರಥಮ ದರ್ಜೆ ಕಾಲೇಜುಗಳನ್ನು ಮಂಜೂರು ಮಾಡಿದ್ದೇವೆ. 1994-95ರಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ವೆಚ್ಚ ಮಾಡುತ್ತಿದ್ದ ಹಣ 1459 ಕೋಟಿ ರೂ.ಗಳು. ಇದು ಮುಂದಿನ ವರ್ಷದಲ್ಲಿ 3037 ಕೋಟಿ ರೂ.ಗಳಿಗೆ ಏರಲಿದೆ.

90. ವಿಶ್ವಬ್ಯಾಂಕ್ ನೆರವಿನ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ಈಗ ರಾಜ್ಯದ ಹದಿನಾರು ಜಿಲ್ಲೆಗಳಲ್ಲಿ ಸಂಪೂರ್ಣ ಕಾರ್ಯಾಚರಣೆಯಲ್ಲಿದೆ. ಈ ಯೋಜನೆಯಲ್ಲಿ ಹೆಚ್ಚು ಹಣವನ್ನು ವಿನಿಯೋಗಿಸುವ ಮೂಲಕ ಕರ್ನಾಟಕವು ರಾಷ್ಟ್ರದಲ್ಲಿಯೇ ಪ್ರಥಮ ಸ್ಥಾನದಲ್ಲಿದೆಯೆಂದು ಮಾನ್ಯ ಸದಸ್ಯರಿಗೆ ತಿಳಿಸಲು ನನಗೆ ಸಂತಸವಾಗುತ್ತಿದೆ. ಮುಂದಿನ ವರ್ಷ ಈ ಕಾರ್ಯಕ್ರಮಕ್ಕೆ 100ಕೋಟಿ ರೂ. ಗಳನ್ನು ವೆಚ್ಚ ಮಾಡಲಾಗುವುದು.

91. ಸಂಪೂರ್ಣ ಸಾಕ್ಷರತಾ ಕಾರ್ಯಕ್ರಮವು ಈಗ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ನಡೆದಿದೆ. ಮೂಲ ಶಿಕ್ಷಣ ಮತ್ತು ಸಾಕ್ಷರತೆಯಲ್ಲಿ ನಮ್ಮ ಪ್ರಯತ್ನಗಳ ಫಲವಾಗಿ ರಾಜ್ಯದ ಸಾಕ್ಷರತಾ ಪ್ರಮಾಣ 2000ನೇ ಇಸವಿಯ ವೇಳೆಗೆ ಶೇಕಡಾ 70 ರಷ್ಟನ್ನು ತಲುಪುವ ವಿಶ್ವಾಸ ನಮಗಿದೆ.

92. ಪ್ರಧಾನ ಮಂತ್ರಿಗಳ 'ಮಾಹಿತಿ ತಂತ್ರಜ್ಞಾನ' ಘಟಕವು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಂಪ್ಯೂಟರ್ ಸಾಕ್ಷರತೆಯನ್ನು ಸ್ಥಾಪಿಸಲು ಒಂದು ಯೋಜನೆಯನ್ನು ಶಿಫಾರಸ್ಸು ಮಾಡಿದೆ. ಈ ಯೋಜನೆಯನ್ನು 48 ಕೋಟಿ ರೂ.ಗಳ ವೆಚ್ಚದಲ್ಲಿ ರಾಜ್ಯ ಸರ್ಕಾರ ಕೈಗೆತ್ತಿಕೊಳ್ಳಲಾಗುವುದೆಂದು ಹೇಳಲು ನನಗೆ ಸಂತೋಷವಾಗುತ್ತಿದೆ. ವಲಯ ಶಿಕ್ಷಣಾಧಿಕಾರಿಗಳ ಕಚೇರಿಯನ್ನು ಕಂಪ್ಯೂಟರೀಕರಿಸುವ ಕಾರ್ಯಕ್ರಮವನ್ನು ಸಹ ಸರ್ಕಾರ ಹಂತ ಹಂತವಾಗಿ ಕೈಗೆತ್ತಿಕೊಳ್ಳಲಿದೆ.

93. ಶಿಕ್ಷಣ ಇಲಾಖೆಯು 20 ಮೊರಾರ್ಜಿ ದೇಸಾಯಿ ಶಾಲೆ ಮತ್ತು ಅಲ್ಪಸಂಖ್ಯಾತರಿಗೆ ಐದು ವಸತಿ ಶಾಲೆಗಳನ್ನು ನಡೆಸುತ್ತದೆ. ಸಮಾಜ ಕಲ್ಯಾಣ ಮತ್ತು ಹಿಂದುಳಿದ ಜಾತಿಗಳ ಇಲಾಖೆಗಳು ನಡೆಸುತ್ತಿರುವ ವಸತಿ ಶಾಲೆಗಳ ಜೊತೆಗೆ ಇವು ಹೆಚ್ಚುವರಿ ವಸತಿಶಾಲೆಗಳು. ಈ ಶಾಲೆಗಳಿಗೆ 9ನೇ ಯೋಜನಾ ಅವಧಿಯಲ್ಲಿ ಸುಭದ್ರ ಕಟ್ಟಡ ಮತ್ತು ಸುಸಜ್ಜಿತ ವಸತಿ ಮತ್ತು ಪ್ರಯೋಗಾಲಯ ಸೌಲಭ್ಯವನ್ನು ಒದಗಿಸಲಾಗುವುದು. ಈ ಉದ್ದೇಶಕ್ಕಾಗಿ ಈ ವರ್ಷ ನಾವು 7 ಕೋಟಿ ರೂ.ಗಳನ್ನು ಒದಗಿಸಿದ್ದೇವೆ.

94. ಒಂಬತ್ತನೆ ಯೋಜನಾ ಅವಧಿಯಲ್ಲಿ ನಾವು ಪ್ರತಿ ಜಿಲ್ಲೆಯಲ್ಲಿ ಕನಿಷ್ಟ ಒಂದು ಮೆಟ್ರಿಕ್‌ನಂತರದ ವಸತಿ ನಿಲಯಗಳನ್ನು ಹೆಣ್ಣು ಮಕ್ಕಳಿಗಾಗಿ ಆರಂಭಿಸಲು ಉದ್ದೇಶಿಸಿದ್ದೇವೆ. 1999-2000ನೇ ಸಾಲಿನಲ್ಲಿ ನಾವು ನಾಲ್ಕು ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರ ವಸತಿ ನಿಲಯಗಳನ್ನು ಹುಬ್ಬಳ್ಳಿ, ಗುಲ್ಬರ್ಗಾ, ದಾವಣಗೆರೆ ಮತ್ತು ಮಂಡ್ಯದಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದೇವೆ.

95. ಈಗಾಗಲೇ ಶೇ. 75ಕ್ಕೂ ಹೆಚ್ಚು ಕಾಮಗಾರಿ ಮುಗಿದಿರುವ ಸರ್ಕಾರಿ ಕಾಲೇಜು ಕಟ್ಟಡಗಳನ್ನು ಮುಂದಿನ ವರ್ಷ ಪೂರ್ಣಗೊಳಿಸಲು ಸರ್ಕಾರವು ಉದ್ದೇಶಿಸಿದೆ.

96. ಬಾಬು ಜಗಜೀವನರಾಯ್ ಹೆಸರಿನಲ್ಲಿ ಅಧ್ಯಯನ ಪೀಠವೊಂದನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗುವುದು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ

97. ಇಡೀ ಜನಸಮುದಾಯಕ್ಕೆ ಆರೋಗ್ಯ ಸೇವೆ ಒದಗಿಸುವುದು ನಿರಂತರ ಕಾರ್ಯವಾಗಿದೆ. 1991ರಿಂದ 1994ರವರೆಗೆ ಅರೆ ವೈದ್ಯಕೀಯ ಮತ್ತು ವೈದ್ಯಕೀಯ ತಂತ್ರಜ್ಞ ಸಿಬ್ಬಂದಿಯ ನೇಮಕವಾಗಿರಲಿಲ್ಲ. ನಮ್ಮ ಸರ್ಕಾರ ಕಳೆದ ನಾಲ್ಕು ವರ್ಷಗಳಲ್ಲಿ 2700 ವೈದ್ಯರುಗಳನ್ನು 4600 ಅರೆ ವೈದ್ಯಕೀಯ ಸಿಬ್ಬಂದಿಯನ್ನು ನೇಮಕಾತಿ ಮಾಡಿದೆ. ಇದೇ ಅವಧಿಯಲ್ಲಿ 400 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಉಪಕೇಂದ್ರಗಳನ್ನು ಮಂಜೂರು ಮಾಡಿದ್ದೇವೆ. ಭಾರತ ಸರ್ಕಾರವು ನಿಗದಿಪಡಿಸಿರುವ ಪ್ರಮಾಣಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಪ್ರಾಥಮಿಕ ಕೇಂದ್ರಗಳನ್ನು ನಾವು ತೆರೆದಿದ್ದೇವೆ ಎಂದು ಹೇಳಲು ನನಗೆ ಹೆಮ್ಮೆಯೆನಿಸುತ್ತದೆ.

98. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಣ ಹಂಚಿಕೆ 1994-95ರಲ್ಲಿ 469 ಕೋಟಿ ರೂ.ಗಳಾಗಿದ್ದು, 1999-2000ನೇ ಸಾಲಿನಲ್ಲಿ 1060 ಕೋಟಿ ರೂ.ಗಳಿಗೆ ಏರಿದೆ. ಇದರ ಫಲಶೃತಿ ಕೂಡ ಆಶಾದಾಯಕವಾಗಿದೆ. ಅಖಿಲ ಭಾರತ ಮಟ್ಟದಲ್ಲಿ ಶಿಶು ಮರಣ ಸಂಖ್ಯೆ ಪ್ರತಿ ಸಾವಿರಕ್ಕೆ 71 ಆಗಿದ್ದರೆ ಕರ್ನಾಟಕದ ಶಿಶುಮರಣ ಸಂಖ್ಯೆ ಕೇವಲ 53 ಆಗಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಕರ್ನಾಟಕದ ಶಿಶುಮರಣ ಸಂಖ್ಯೆ ಪ್ರತಿ ಸಾವಿರಕ್ಕೆ 62 ರಿಂದ 53ಕ್ಕೆ ಇಳಿದಿದೆ. ಇದೇ ಅವಧಿಯಲ್ಲಿ ಜನನ ಸಂಖ್ಯೆ ಪ್ರತಿ ಸಾವಿರಕ್ಕೆ 24.11 ರಿಂದ 22.7 ಕ್ಕೆ ಇಳಿದಿದೆ.

99. ಆರೋಗ್ಯ ಉಸ್ತುವಾರಿ ಹಾಗೂ ಮೌಲ್ಯ ಮಾಪನ ವ್ಯವಸ್ಥೆಯನ್ನು ಬಲಗೊಳಿಸಲು, ರಾಜ್ಯವು ಎಲ್ಲಾ ಸರ್ಕಾರಿ ಆಸ್ಪತ್ರೆಗಳ ಕಾರ್ಯನಿರ್ವಹಣೆಯನ್ನು ಪ್ರಸ್ತುತ ವರ್ಷವೇ ಗಣಕೀಕರಣಗೊಳಿಸಲು ಉದ್ದೇಶಿಸಿದೆ. ಆಸ್ಪತ್ರೆಗಳ ಮೇಲುಸ್ತುವಾರಿ ವೆಚ್ಚದಲ್ಲಿ ಕಡಿತ ಮಾಡಲು ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಕೀಯೇತರ ಸೇವೆಗಳನ್ನು ಖಾಸಗೀಕರಣಗೊಳಿಸುವುದಕ್ಕೆ ಒತ್ತು ನೀಡಲಾಗುವುದು.

100. 1997-98ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರ ಗರ್ಭಿಣಿಯರಿಗೆ ಹಾಗೂ ಅವರ ಮೊದಲ ಮಗುವಿನ ಆರೋಗ್ಯ ಮತ್ತು ಪೌಷ್ಟಿಕತೆಯ ಸುಧಾರಣೆಗೆ 500 ರೂಪಾಯಿಗಳ ವಿಶೇಷ ನೆರವು ನೀಡುವ ಯೋಜನೆಯನ್ನು ಸರ್ಕಾರ ರೂಪಿಸಿತು. ಈಗ ಸರ್ಕಾರವು ಈ ಸವಲತ್ತನ್ನು ಬಡತನದ ರೇಖೆಗಿಂತ ಕೆಳಗಿರುವ ಎಲ್ಲಾ ಗರ್ಭಿಣಿಯರಿಗೆ ಮತ್ತು ಅವರ ಮೊದಲ ಮಗುವಿಗೆ ವಿಸ್ತರಿಸಲು ಉದ್ದೇಶಿಸಿದೆ.

101. ಎ.ಎನ್.ಎಂ. ಬರುವವರೆಲ್ಲರೂ ಬಹುತೇಕ ಬಡಕುಟುಂಬದ ಮಹಿಳೆಯರೇ ಆಗಿರುತ್ತಾರೆ. ಪರಿಶಿಷ್ಟ ಜಾತಿ / ಜನಾಂಗಕ್ಕೆ ಸೇರಿದ ಎಲ್ಲಾ ಎ.ಎನ್.ಎಂ ತರಬೇತಿ ಪಡೆಯುವ ಮಹಿಳೆಯರಿಗೆ ಪ್ರತಿ ತಿಂಗಳು ನೀಡುವ ಸ್ಟೈಪಂಡ್‌ನ್ನು 1000ರೂ.ಗಳಿಗೆ ಈಗಾಗಲೇ ಏರಿಸಿದ್ದೇವೆ. ಈಗ ನಾವು ಇದನ್ನು ಇತರರಿಗೂ ತಿಂಗಳಿಗೆ 500 ರೂ.ಗಳಿಗೆ ಏರಿಸಲು ಉದ್ದೇಶಿಸಿದ್ದೇವೆ.

102. ಭಾರತೀಯ ವೈದ್ಯ ಪದ್ಧತಿಗೆ 1999-2000ನೇ ಸಾಲಿನಲ್ಲಿ ನಾವು 33.16 ರೂ.ಗಳನ್ನು ವೆಚ್ಚ ಮಾಡುತ್ತಿದ್ದೇವೆ. ರಾಷ್ಟ್ರೀಯ ಯುನಾನಿ ಸಂಸ್ಥೆಯು ನಮ್ಮ ರಾಜ್ಯದಲ್ಲಿ ಸ್ಥಾಪಿತವಾಗುತ್ತಿದೆಯೆಂದು ಈ ಸದನಕ್ಕೆ ತಿಳಿಸಲು ನಾನು ಇಚ್ಛಿಸುತ್ತೇನೆ. ಈಗಾಗಲೇ ರಾಷ್ಟ್ರೀಯ ಯುನಾನಿ ವೈದ್ಯ ಸಂಸ್ಥೆಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 50 ಎಕರೆ ಹಾಗೂ ಔಷಧವನ್ನು ಅಭಿವೃದ್ಧಿಗೆ 20 ಎಕರೆ ಸ್ಥಳವನ್ನು ಉಚಿತವಾಗಿ

ನೀಡಲು ಒಪ್ಪಿದ್ದೇವೆ. ಈ ಸಂಸ್ಥೆಯ ಸ್ಥಾಪನೆಗೆಂದು ಐದು ಕೋಟಿ ರೂ.ಗಳ ಆರಂಭಿಕ ಕೊಡುಗೆಯನ್ನು ನಾವು ನೀಡಲಿದ್ದೇವೆ. ಈ ಸಂಸ್ಥೆಯ ಹೊರರೋಗಿಗಳ ವಿಭಾಗ 1999-2000ನೇ ಸಾಲಿನಲ್ಲಿ ಕಾರ್ಯರಂಭಗೊಳ್ಳುವ ನಿರೀಕ್ಷೆಯಿದೆ.

103. ಮುಖ್ಯಮಂತ್ರಿಗಳ ವೈದ್ಯಕೀಯ ಪರಿಹಾರ ನಿಧಿಯು 20 ಕೋಟಿ ರೂ.ಗಳ ಆರಂಭಿಕ ನಿಧಿಯೊಡನೆ ಸ್ಥಾಪಿತವಾಗಿರುವುದು ಮಾನ್ಯ ಸದಸ್ಯರಿಗೆ ತಿಳಿದೇ ಇದೆ. 1998-99ರಲ್ಲಿ 2,500 ಮಂದಿ ಬಡ ರೋಗಿಗಳು ಈ ನಿಧಿಯಿಂದ ತಮ್ಮ ದುಬಾರಿ ಚಿಕಿತ್ಸೆಗಳಿಗೆ ನೆರವು ಪಡೆದಿದ್ದಾರೆ. ನಾವು ಈ ನಿಧಿಗೆ ಮತ್ತೆ ಐದು ಕೋಟಿ ರೂ.ಗಳ ಕೊಡುಗೆ ನೀಡುತ್ತಿದ್ದು ಕೇಂದ್ರದಿಂದ 5 ಕೋಟಿ ರೂ.ಗಳ ಪ್ರತಿಕೊಡುಗೆ ಈ ನಿಧಿಗೆ ದೊರೆಯಲಿದೆ. ಈ ನಿಧಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಕೂಡ ದೇಣಿಗೆಯನ್ನು ಪಡೆಯಲು ಪ್ರಯತ್ನಿಸುತ್ತೇವೆ.

ನೀರಾವರಿ

104. ನಮ್ಮ ರಾಜ್ಯದ ಪಾಲಿನ ನೀರಿನ ಹಕ್ಕನ್ನು ರಕ್ಷಿಸಿಕೊಳ್ಳಲು ನಾವು ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದೇವೆ. ನಮ್ಮ ಪಾಲಿನ ನೀರು ಬಳಸಿಕೊಳ್ಳಲು ಅಗತ್ಯವಾದ ಮೂಲ ಸವಲತ್ತುಗಳ ನಿರ್ಮಾಣಕ್ಕೆ ಅಗತ್ಯವಾದ ಹಣವನ್ನು ಒದಗಿಸಲಾಗುವುದು. ಈ ಪ್ರಯತ್ನಗಳಿಗೆ ಇನ್ನಷ್ಟು ಚಾಲನೆ ತುಂಬಲು ಸರ್ಕಾರವು ನಿರ್ಧರಿಸಿದ್ದು ನೀರಾವರಿ ಯೋಜನೆಗಳ ಅತೀ ತುರ್ತು ಆದ್ಯತೆಯನ್ನು ಘಟಕಗಳನ್ನು ಕೂಡಲೆ ಪೂರ್ಣಗೊಳಿಸುವಂತೆ ಅಧಿಕೃತ ಸಮಿತಿ ನೀಡಿರುವ ವರದಿಯನ್ನು ಒಪ್ಪಿಕೊಂಡಿದೆ.

105. ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗಾಗಿ ಕಳೆದ ನಾಲ್ಕು ವರ್ಷಗಳಲ್ಲಿ 7809 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದ್ದು 1.43 ಲಕ್ಷ ಎಕರೆ ನೀರಾವರಿ ಸಮರ್ಥ್ಯವನ್ನು ಸೃಜಿಸಲಾಗಿದೆ. 1999-2000ನೇ ಸಾಲಿಗೆ ನೀರಾವರಿಗಾಗಿ 2658 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

106. ಕೃಷ್ಣಾ ಮೇಲ್ದಂಡೆ ಯೋಜನೆ ಹೊರತುಪಡಿಸಿ ಕೃಷ್ಣಾ ಕಣಿವೆಯ ಇತರೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ನೀರಾವರಿ ನಿಗಮವನ್ನು 9-12-98ರಂದು ಅಸ್ತಿತ್ವಕ್ಕೆ ತರಲಾಗಿದೆ. 2000 ಇಸವಿ ಮಾರ್ಚ್ 2000ವೇಳೆಗೆ ನಿಗಮದ ಮೂಲಕ 600 ಕೋಟಿ ರೂ.ಸಂಗ್ರಹಿಸಲು ಉದ್ದೇಶಿಸಲಾಗಿದೆ.

107. ತುಂಗಾ ತಿರುವು ಯೋಜನೆಯನ್ನು ಶೀಘ್ರವಾಗಿ ತೆಗೆದುಕೊಳ್ಳಲು ಸರ್ಕಾರ ಉದ್ದೇಶಿಸಿದೆ. ಈಗಾಗಲೇ ಈ ಯೋಜನೆಗಾಗಿ ಸರ್ವೆ ಮತ್ತು ಅಂದಾಜುಗಳ ಕೆಲಸ ನಡೆಯುತ್ತಿದೆ.

108. ಇದರ ಜೊತೆಗೆ ಶೀಘ್ರವಾಗಿ ಫಲ ನೀಡುವ ಸಣ್ಣ ನೀರಾವರಿಗೆ ನಾವು ಹೆಚ್ಚು ಒತ್ತು ನೀಡುತ್ತಿದ್ದೇವೆ. 1998-99ರಲ್ಲಿ ನಾವು ಈ ಉದ್ದೇಶಕ್ಕಾಗಿ ಸಾಕಷ್ಟು ಹೆಚ್ಚು ಹಣ ನೀಡಿದ್ದೇವೆ. 1999-2000 ನೇ ಸಾಲಿನಲ್ಲಿ ಸಣ್ಣ ನೀರಾವರಿಗಾಗಿ 125.51 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು.

109. ಕಾವೇರಿ ಕಣಿವೆ ಯೋಜನೆಗಳಿಗಾಗಿ ಕಳೆದ ನಾಲ್ಕು ವರ್ಷಗಳಲ್ಲಿ 1059 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ. 1999-200ನೇ ಸಾಲಿಗೆ ನಾನು ಈ ಯೋಜನೆಗಳಿಗೆ 280 ರೂ.ಗಳನ್ನು ನೀಡುತ್ತಿದ್ದೇನೆ.

ಇಂಧನ

110. ವಿದ್ಯುತ್ ನಮ್ಮ ಆರ್ಥಿಕ ಅಭಿವೃದ್ಧಿಯ ಪ್ರಮುಖ ಅಂಶವಾಗಿದೆ. ಆದ್ದರಿಂದ ವಿದ್ಯುತ್ ಪರಿಸ್ಥಿತಿಯ ಸುಧಾರಣೆಗೆ ನಾವು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. 1998-99ರಲ್ಲಿ ರಾಜ್ಯದ ವಿದ್ಯುತ್ ಉತ್ಪಾದನೆ 15,969 ಮಿಲಿಯನ್ ಯೂನಿಟ್‌ಗಳಾಗಿತ್ತು. ಇದು 1999-2000ದಲ್ಲಿ 18,163 ಮಿಲಿಯನ್ ಯೂನಿಟ್‌ಗಳಿಗೆ ಏರುವ ನಿರೀಕ್ಷೆ ಇದೆ. ಆದರೂ ಬೇಡಿಕೆ ಮತ್ತು ಪೂರೈಕೆ ನಡುವೆ ಅಂತರ ಉಳಿಯಲಿದೆ.

111. 1998-99ರಲ್ಲಿ ನಮ್ಮ ವಿದ್ಯುತ್ ಉತ್ಪಾದನಾ ಸಾಮರ್ಥ್ಯಕ್ಕೆ KPC ಇಂದ 300 ಮೆಗಾವಾಟ್‌ನ್ನು ಸೇರಿಸಲಾಗಿದೆ. ಬಳ್ಳಾರಿ ಜಿಲ್ಲೆಯ ತೋರಣಗಲ್ಲಿನ ಬಳಿ ಇರುವ ಪ್ರಪ್ರಥಮ ಖಾಸಗಿ ವಿದ್ಯುತ್ ಉತ್ಪಾದನಾ ಘಟಕವು 260 ಮೆಗಾವಾಟ್ ವಿದ್ಯುತ್ ಉತ್ಪಾದಿಸಲಿದೆ. ಕೆ.ಪಿ.ಸಿ. 250 ಮೆಗಾವಾಟ್ ವಿದ್ಯುತ್ ಉತ್ಪಾದಿಸಲಿದೆ. ಕೆಪಿಸಿ 250 ಮೆಗಾವಾಟ್ ವಿದ್ಯುತ್‌ಉತ್ಪಾದನೆಯನ್ನು 1999-2000ನೇ ಸಾಲಿನಲ್ಲಿ ಸೇರಿಸಲಿದೆ.

112. ನಾವು 1000 ಮೆಗಾವಾಟ್ ಉತ್ಪಾದನೆಯ 4 ಹೊಸ ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಕೈಗೆತ್ತಿಕೊಳ್ಳಲಿದ್ದೇವೆ.

113. ಮುಂಬರುವ ವರ್ಷಗಳಲ್ಲಿ ಹೆಚ್ಚುವರಿಯಾಗಿ ಉತ್ಪಾದನೆಯಾಗಲಿರುವ ವಿದ್ಯುತ್‌ನ ಸಾಗಣೆ ಮತ್ತು ವಿತರಣೆಗಾಗಿ ನಮ್ಮ ವಿದ್ಯುತ್ ಜಾಲವನ್ನು ಮೇಲ್ದರ್ಜೆಗೇರಿಸಲು ಕೆ. ಇ. ಬಿ. ಗೆ ಹೆಚ್ಚು ಬಂಡವಾಳದ ಅಗತ್ಯವಿದೆ. 1999-200ನೇ ಇಸವಿಯಲ್ಲಿ ವಿದ್ಯುತ್ ವಲಯಕ್ಕೆ ಒಟ್ಟು 1572 ಕೋಟಿ ರೂ. ಗಳ ಬಂಡವಾಳ ಹೂಡಲಾಗುತ್ತಿದೆ.

114. ಪಂಪಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾರ್ಯಕ್ರಮವನ್ನು ಕೆ.ಇ.. ಬಿ. ಬಿರುಸುಗೊಳಿಸಿದೆ. 1998-99ನೇ ಸಾಲಿನಲ್ಲಿ ಇದು 40,000 ಪಂಪ್‌ಸೆಟ್‌ಗಳಿಗೆ ವಿದ್ಯುತ್, ಸಂಪರ್ಕ ಕಲ್ಪಿಸಿದ.

115. ನಿರಂತರವಾಗಿ ಏರುತ್ತಿರುವ ವಿದ್ಯುತ್ ಬೇಡಿಕೆಯ ಜೊತೆಗೆ ಸುಧಾರಿತ ಗುಣಮಟ್ಟದ ಸೇವೆಯನ್ನು ಗ್ರಾಹಕರಿಗೆ ನಾವು ನೀಡಬೇಕಾಗಿದೆ. ವಿದ್ಯುತ್ ವಲಯಕ್ಕೆ ಸಂಬಂಧಿಸಿದ ಈ ಅಂಶಗಳನ್ನೆಲ್ಲಾ ಸಮಗ್ರವಾಗಿ ಪರಿಶೀಲಿಸುವ ತುರ್ತು ಅಗತ್ಯವಿದೆ. ಈ ನಿಟ್ಟಿನಲ್ಲಿ ನಾವು ಈಗಾಗಲೇ ಸುಧಾರಣಾ ಮಸೂದೆಯನ್ನು ಅಂಗೀಕರಿಸಿದ್ದೇವೆ. ಇದರನ್ವಯ ರಾಜ್ಯ ನಿಯಂತ್ರಣ ಆಯೋಗವನ್ನು ನಾವು ರಚಿಸಬೇಕಾಗಿದೆ. ಇದು ವಿದ್ಯುತ್‌ನ ದರವನ್ನು ಪಾರದರ್ಶಕವಾಗಿ ಮತ್ತು ನಿಷ್ಪಕ್ಷಪಾತವಾಗಿ ನಿರ್ಧರಿಸುತ್ತದೆ. ವಿದ್ಯುತ್‌ನ ವಿತರಣೆ ಮತ್ತು ಸಾಗಣೆಗೆ ಅನುಕೂಲವಾಗುವಂತೆ ನಾವು ಕೆ. ಇ. ಬಿ. ಯನ್ನು ಪ್ರತ್ಯೇಕ ಸಂಸ್ಥೆ ಅಥವಾ ನಿಗಮವನ್ನಾಗಿ ರಚಿಸಬೇಕಾಗಿದೆ. ಇಂತಹ ಸುಧಾರಣೆಗಳು ಉತ್ತಮ ಆರ್ಥಿಕ ನಿರ್ವಹಣೆ ಮತ್ತು ದಕ್ಷತೆಯನ್ನು ತಂದು ಗ್ರಾಹಕರಿಗೆ ಇಳಿಸಿದ ದರದಲ್ಲಿ ವಿದ್ಯುತ್‌ನ್ನು ನೀಡುವ ನಿರೀಕ್ಷೆಯನ್ನು ನಾವು ಇಟ್ಟು ಕೊಂಡಿದ್ದೇವೆ.

116. ಸಾಂಪ್ರದಾಯಕವಲ್ಲದ ಮೂಲಗಳಿಂದ ಸಹ ವಿದ್ಯುತ್ ಉತ್ಪಾದನೆಯನ್ನು ನಾವು ಉತ್ತೇಜಿಸುತ್ತಿದ್ದೇವೆ. ಈ ಮೂಲಗಳಿಂದ 1999-2000ನೇ ಸಾಲಿನಲ್ಲಿ 114 ಮೆಗಾವಾಟ್ ವಿದ್ಯುತ್ ಉತ್ಪಾದನೆಯನ್ನು ನಿರೀಕ್ಷಿಸಿದ್ದೇವೆ.

ರಸ್ತೆ ಮತ್ತು ಸೇತುವೆಗಳು

117. ಕಳೆದ ನಾಲ್ಕು ವರ್ಷಗಳಲ್ಲಿ ನಾವು ರಸ್ತೆಗಳ ನಿರ್ಮಾಣ ಮತ್ತು ದುರಸ್ತಿಗಾಗಿ 1067 ಕೋಟಿ ರೂ.ಗಳನ್ನು ವೆಚ್ಚ ಮಾಡಿದ್ದೇವೆ. ಆದಾಗ್ಯೂ ನಮ್ಮ ರಸ್ತೆಗಳನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ನಾವು ಬಯಸುತ್ತೇವೆ. ಮಾಮೂಲಿ ವಿಧಾನದಲ್ಲಿ ರಸ್ತೆ ರಿಪೇರಿ ಮಾಡುವುದರಿಂದ ಗುಣಮಟ್ಟ ಉತ್ತಮಗೊಳ್ಳುವುದಿಲ್ಲ. ಆದ್ದರಿಂದ 1999-2000ನೇ ಸಾಲಿನಲ್ಲಿ ಹೊಸ ರಸ್ತೆಗಳ ನಿರ್ಮಾಣ ಮತ್ತು ಕೆಟ್ಟಿರುವ ಹಾಲಿ ರಸ್ತೆಗಳ ಪುನರ್ ನಿರ್ಮಾಣ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕಾಗುತ್ತದೆ. 1999-2000ನೇ ಸಾಲಿನಲ್ಲಿ ರಸ್ತೆಗಳಿಗಾಗಿ ಗರಿಷ್ಟ ಪ್ರಮಾಣದ 470 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

118. ಕರ್ನಾಟಕ ರಸ್ತೆ ಮತ್ತು ಸೇತುವೆಗಳ ನಿಗಮವನ್ನು ನಾವು ಹೊಸದಾಗಿ ಸ್ಥಾಪಿಸಲಿದ್ದು ಇದು ಮಾರುಕಟ್ಟೆಯಿಂದ ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲ ಸಂಗ್ರಹಿಸುತ್ತದೆ. ಈ ನಿಗಮವು ರಸ್ತೆ ನಿರ್ಮಾಣಕ್ಕೆ ಹೂಡಿದ ಬಂಡವಾಳಕ್ಕೆ ಪ್ರತಿಫಲ ಪಡೆಯುವ ಬಗ್ಗೆಯೂ ಪ್ರಯತ್ನಿಸುತ್ತದೆ. ಮುಂದಿನ ವರ್ಷ ಈ ನಿಗಮವು 100 ಕೋಟಿ ರೂ.ಗಳನ್ನು ಮಾರುಕಟ್ಟೆಯಲ್ಲಿ ಸಂಗ್ರಹಿಸಲಿದೆ.

119. ವಿಶ್ವ ಬ್ಯಾಂಕ್ ಸಾಲ ನೆರವಿನಿಂದ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ದಿಪಡಿಸಲು ಯೋಜಿಸಿದ್ದು ಮೊದಲ ಹಂತದಲ್ಲಿ 1000 ಕಿ.ಮೀ ರಸ್ತೆಯನ್ನು ಅಭಿವೃದ್ಧಿಪಡಿಸಲು ಕೈಗೆತ್ತಿಕೊಳ್ಳಲಾಗುವುದು.

120. ಈಗಿರುವ ರಸ್ತೆಗಳ ದುರಸ್ತಿಯು ಹೊಸ ರಸ್ತೆಗಳ ನಿರ್ಮಾಣದಷ್ಟೆ ಪ್ರಾಮುಖ್ಯವಾಗಿದೆ. 10ನೇ ಹಣಕಾಸು ಆಯೋಗವು ರಸ್ತೆ ದುರಸ್ತಿಗೆ ಸಂಬಂಧಿಸಿದಂತೆ ಕೆಲವು ಮಾನದಂಡಗಳನ್ನು ನಿಗದಿಪಡಿಸಿದೆ. 1999-2000ನೇ ಸಾಲಿಗೆ ನಾನು ರಸ್ತೆ ದುರಸ್ತಿಗಾಗಿ ಹೆಚ್ಚುವರಿಯಾಗಿ 42 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ. ಇದು ಪ್ರಸ್ತುತ ವರ್ಷ ರಸ್ತೆ ದುರಸ್ತಿಗಾಗಿ ನಿಗದಿಗೊಳಿಸಿರುವ ಮೊತ್ತಕ್ಕಿಂತ ಶೇಕಡಾ 25 ರಷ್ಟು ಹೆಚ್ಚಾಗಿರುತ್ತದೆ. ಈ ಎಲ್ಲ ಪ್ರಯತ್ನಗಳಿಂದಾಗಿ ರಸ್ತೆಗಳ ಸ್ಥಿತಿ ಬಹುಪಾಲು ಸುಧಾರಣೆಯಾಗುತ್ತದೆ ಎಂದು ನಾನು ನಂಬಿದ್ದೇನೆ.

ವಸತಿ

121. ವಸತಿಹೀನ ಬಡಜನರಿಗೆ ವಸತಿ ಒದಗಿಸುವುದು ನಮ್ಮ ಸರ್ಕಾರದ ಪ್ರಮುಖ ಕಾರ್ಯಕ್ರಮ. ವಸತಿ ವಲಯದಲ್ಲಿ ನಮ್ಮ ಸರ್ಕಾರವು ಗಣನೀಯ ಸಾಧನೆ ಮಾಡಿದೆ. ಕಳೆದ ನಾಲ್ಕು ವರ್ಷಗಳಲ್ಲಿ ನಾವು ಪ್ರತೀ ವರ್ಷ ಸರಿಸುಮಾರು ಒಂದು ಲಕ್ಷ ಮನೆಗಳನ್ನು ಕಟ್ಟಿದ್ದೇವೆ. ಇದೇ ಅವಧಿಯಲ್ಲಿ ನಾವು 3,21,100 ನಿವೇಶನಗಳನ್ನು ವಿತರಿಸಿದ್ದೇವೆ.

122. 1999-2000ನೇ ಸಾಲಿನಲ್ಲಿ ನಾವು 80,000 ನಿವೇಶನಗಳನ್ನು ವಿತರಿಸುವ ಹಾಗೂ 1,50,000 ಮನೆಗಳನ್ನು ಕಟ್ಟುವ ಉದ್ದೇಶ ಹೊಂದಿದ್ದೇವೆ. ನೆರಳಿನ ಭಾಗ್ಯ ಯೋಜನೆಯನ್ವಯ ಫಲಾನುಭವಿಗಳ ಸಂಖ್ಯೆಯನ್ನು ಪ್ರತಿ ತಾಲ್ಲೂಕಿಗೆ 100ರಿಂದ 150ಕ್ಕೆ ಹೆಚ್ಚಿಸಲು ಉದ್ದೇಶಿಸಿದ್ದೇವೆ.

ನಗರಾಭಿವೃದ್ಧಿ

123. ನಗರ ಪ್ರದೇಶದಲ್ಲಿ ವಾಸಿಸುವ ಜನರ ಸಂಖ್ಯೆ ಪ್ರಮಾಣ ಏರುತ್ತಿದ್ದು, ನಗರಗಳಲ್ಲಿ ಮೂಲಭೂತ ಸೌಲಭ್ಯ ಮತ್ತು ಕನಿಷ್ಠ ಅವಶ್ಯಕ ಸೇವೆಗಳನ್ನು ಸುಧಾರಿಸಲು ನಾವು ಪ್ರಯತ್ನ ಮಾಡಿದ್ದೇವೆ. ನಗರ ಸ್ಥಳೀಯ ಸಂಸ್ಥೆಗಳಿಗೆ ಲಭ್ಯವಿರುವ ಸಂಪನ್ಮೂಲಗಳು ಅವುಗಳ ಕಾರ್ಯ ನಿರ್ವಹಣೆಗೆ ಸಾಲುತ್ತಿಲ್ಲ. ಇದನ್ನು ಸುಧಾರಿಸಲು

ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತಂದು ಪ್ರತಿ ವರ್ಷ ಹೆಚ್ಚು ಹಣವನ್ನು ಒದಗಿಸುತ್ತಿದ್ದೇವೆ, 1998-99ರಲ್ಲಿ 347 ಕೋಟಿ ರೂ.ಗಳನ್ನು ಕೊಟ್ಟಿದ್ದರೆ, 1999-2000ನೇ ವರ್ಷಕ್ಕೆ 415 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇವೆ.

124. ನಾವು ವಿಶ್ವಬ್ಯಾಂಕ್ ನೆರವಿನಿಂದ ಕರ್ನಾಟಕ ಪುರಸಭೆ ಅಭಿವೃದ್ಧಿಯೋಜನೆಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದೇವೆ. ಈ ಯೋಜನೆಗೆ 150 ಮಿಲಿಯನ್ ಡಾಲರ್ ಅಂದರೆ ಸುಮಾರು 600 ಕೋಟಿ ರೂ.ಗಳ ನೆರವನ್ನು ನಿರೀಕ್ಷಿಸುತ್ತಿದ್ದೇವೆ. 19 ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳಿಗೆ ಮೊದಲ ಹಂತದಲ್ಲಿ ಈ ಯೋಜನೆಯಿಂದ ಪ್ರಯೋಜನವಾಗಿಲಿದೆ.

125. 1998-99ನೇ ಸಾಲಿನಲ್ಲಿ ಕೆಯುಡಬ್ಲುಎಸ್ ಡಿಬಿ 15 ನೂತನ ಕಾಮಗಾರಿಗಳನ್ನು 71 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೊಂಡಿದೆ. 1999-2000ನೇ ಸಾಲಿನಲ್ಲಿ 18 ಕಾಮಗಾರಿಗಳಿಗೆ 75 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು. 26 ಹೊಸ ಕಾಮಗಾರಿಗಳನ್ನು ಸಹ ಕೈ ಗೆತ್ತಿಕೊಳ್ಳಲಾಗುವುದು.

126. ರಾಜ್ಯದಲ್ಲಿನ ನಗರ ಪ್ರದೇಶದ ಎಲ್ಲ 214 ಸ್ಥಳೀಯ ಸಂಸ್ಥೆಗಳಲ್ಲಿ ಸ್ವರ್ಣಜಯಂತಿ ಷಹರಿ ರೋಜ್‌ಗಾರ್ ಎನ್ನುವ ನೂತನ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ನಗರ ಪ್ರದೇಶದ ನಿರುದ್ಯೋಗಿ ಯುವಕ ಯುವತಿಯರಿಗೆ ಈ ಯೋಜನೆ ನೆರವು ನೀಡಿ ಸ್ವಯಂ ಉದ್ಯೋಗದಲ್ಲಿ ತೊಡಗಲು ಪ್ರೇರೇಪಣೆ ನೀಡುತ್ತದೆ. ಈ ಯೋಜನೆ ಜೀವನಮಟ್ಟ ಸುಧಾರಿಸಲು ಸೇವಾ ಸೌಲಭ್ಯವನ್ನು ಒದಗಿಸುತ್ತದೆ.

ಬೆಂಗಳೂರು ನಗರ

127. ಬೆಂಗಳೂರು ನಗರದ ಏರುತ್ತಿರುವ ಬೇಡಿಕೆಗಳನ್ನು ಪೂರೈಸಲು ನಗರದ ಮೂಲ ಸೌಲಭ್ಯಗಳನ್ನು ಮೇಲ್ದರ್ಜೆಗೆ ಏರಿಸುವುದು ಅತ್ಯಗತ್ಯವಾಗಿದೆ. ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಒಳಚರಂಡಿ ಮಂಡಳಿ, ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಪ್ರಯತ್ನದ ಜೊತೆಗೆ ಸರ್ಕಾರ ಕೂಡ ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಿದೆ.

128. ನಾನು 1998-99ರಲ್ಲಿ ಪ್ರಸ್ತಾಪಿಸಿದಂತೆ ರಾಷ್ಟ್ರದಲ್ಲಿ ಮೊದಲ ಬಾರಿಗೆ ಮುನಿಸಿಪಲ್ ಬಾಂಡ್ ಮೂಲಕ 125 ಕೋಟಿ ರೂ.ಗಳನ್ನು ಸಂಗ್ರಹಿಸಲಾಗಿದೆ. ಈಗಾಗಲೇ ಈ ಹಣದಿಂದ ಬೆಂಗಳೂರು ನಗರದ ರಸ್ತೆಗಳು, ಒಳಚರಂಡಿ, ಬೀದಿ ದೀಪ ಮುಂತಾದ ಸುಧಾರಣೆ ಕಾರ್ಯಕ್ರಮಗಳು ಆರಂಭಗೊಂಡಿವೆ.

129. ಬೆಂಗಳೂರು ನಗರದ ಜನರಿಗೆ ಸಮರ್ಪಕ ಕುಡಿಯುವ ನೀರನ್ನು ಪೂರೈಸಲು ನಾವು ಸತತ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕಾಗಿ ಕಾವೇರಿ ನೀರು ಪೂರೈಕೆಯ 4ನೇ ಘಟ್ಟದ ಒಂದನೇ ಹಂತದ ಕಾಮಗಾರಿಯನ್ನು 1072 ಕೋಟಿ ರೂ.ಗಳ ವೆಚ್ಚದಲ್ಲಿ ಕೈ ಗೊಂಡಿದ್ದೇವೆ. 2001-02ನೇ ಸಾಲಿಗೆ ಈ ಕಾಮಗಾರಿ ಪೂರ್ಣಗೊಳ್ಳುವ ನೀರಿಕ್ಷೆ ಇದೆ.

130. ಕರ್ನಾಟಕ ನಗರ ಮೂಲ ಸೌಲಭ್ಯಗಳ ಅಭಿವೃದ್ಧಿ ಮತ್ತು ಹಣಕಾಸು ನಿಗಮವು 639 ಕೋಟಿ ರೂ.ಗಳ ವೆಚ್ಚದಲ್ಲಿ ಮೆಗಾಸಿಟಿ ಯೋಜನೆಯನ್ನು ರೂಪಿಸಿದೆ. ಇದರಲ್ಲಿ 40.93 ಕೋಟಿ ರೂ.ಗಳನ್ನು ಬೃಹತ್ ನೀರು ಪೂರೈಕೆಗೆ ಮೀಸಲಿಡಲಾಗಿದೆ. ಈ ಯೋಜನೆಯಲ್ಲಿ ಮೇಲು ಸೇತುವೆಗಳ ಕಾಮಗಾರಿಯನ್ನು ಸಹ ಕೈ ಗೆತ್ತಿಕೊಳ್ಳಲಾಗುವುದು.

131. ಬೆಂಗಳೂರು ಪರಿಸರ ಮಾಲಿನ್ಯವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ನಗರದ ಒಳಗೆ ಮತ್ತು ನಗರದ ಹೊರವಲಯದಲ್ಲಿ ಒಂದು ಲಕ್ಷ ಸಸಿಗಳನ್ನು ನೆಡುವ ಬೃಹತ್ ಕಾರ್ಯಕ್ರಮವನ್ನು 1999-2000ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾಗುವುದು.

ಕೈಗಾರಿಕೆ

132. ನಮ್ಮ ರಾಜ್ಯವು ಮೊದಲಿನಿಂದಲೂ ಕೈಗಾರಿಕಾ ಬೆಳವಣಿಗೆಗೆ ಆದ್ಯತೆ ನೀಡುತ್ತಲೇ ಬಂದಿದೆ. ರಾಜ್ಯಕ್ಕೆ ಹೊಸ ಉದ್ದಿಮೆಗಳನ್ನು ಆಕರ್ಷಿಸಲು ನಾವು ಮಾಡುತ್ತಿರುವ ಪ್ರಯತ್ನ ರಾಷ್ಟ್ರಾದ್ಯಂತ ಪ್ರಶಂಸೆಗೆ ಪಾತ್ರವಾಗಿದೆ. ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಗೆ ಉತ್ತಮ ವಾತಾವರಣ ನಿರ್ಮಾಣ ಮಾಡಿದುದರಿಂದ ಅನೇಕ ಖಾಸಗಿ ವಿದೇಶಿ ಸಂಸ್ಥೆಗಳು ರಾಜ್ಯದಲ್ಲಿ ಬಂಡವಾಳ ಹೂಡಲು ಮುಂದೆ ಬಂದಿವೆ. ಕಳೆದ ನಾಲ್ಕು ವರ್ಷಗಳಲ್ಲಿ ಖಾಸಗಿ ಸಂಸ್ಥೆಗಳಿಂದ 17,000 ಕೋಟಿ ರೂ. ಬಂಡವಾಳ ಹೂಡಿಕೆಯಾಗಿದೆ. ರಾಜ್ಯಕ್ಕೆ ಮಂಜೂರಾದ ನೇರ ವಿದೇಶೀ ಬಂಡವಾಳ 13,392 ಕೋಟಿ ರೂ.ಗಳು.

133. ಕಳೆದ ನಾಲ್ಕು ವರ್ಷಗಳಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು 12,167 ಎಕರೆಗಳನ್ನು ಕೈಗಾರಿಕಾ ನಿವೇಶನಗಳಿಗಾಗಿ ಅಭಿವೃದ್ಧಿಪಡಿಸಿದ್ದಾರೆ. ಇದೇ ಅವಧಿಯಲ್ಲಿ ಕರ್ನಾಟಕ ರಾಜ್ಯ ಹಣಕಾಸು ನಿಗಮ ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮವು 2478 ಕೋಟಿ ರೂ.ಗಳ ಸಾಲವನ್ನು ನೀಡಿದೆ. ವಿವಿಧ ಕ್ಷೇತ್ರಗಳಲ್ಲಿ ರಾಜ್ಯವು ಪ್ರಕಟಿಸಿದ ಕೆಲವು ನಿರ್ದಿಷ್ಟ ನೀತಿಗಳಿಂದ ಇದು ಸಾಧ್ಯವಾಗಿದೆ.

134. ಮುಕ್ತ ಆರ್ಥಿಕ ನೀತಿಯ ಹಿನ್ನೆಲೆಯಲ್ಲಿ ನಗರದ ಕುಶಲಕರ್ಮಿಗಳು ಎದುರಿಸುತ್ತಿರುವ ಸಮಸ್ಯೆ ನಿವಾರಿಸಲು 'ಕಾಯಕ ನಗರ' ಎನ್ನುವ ಹೊಸ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ವಸತಿ ಮತ್ತು ಕಾರ್ಯಾಗಾರಗಳನ್ನು ನಿರ್ಮಿಸಲಾಗುವುದು. ಈ ಕಾರ್ಯಕ್ರಮಕ್ಕೆ 2 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

135. ಕೈ ಮಗ್ಗ ವಲಯದ ಅಭಿವೃದ್ಧಿಗೆ ಮತ್ತು ಕೈ ಮಗ್ಗ ನೇಕಾರರ ಕಲ್ಯಾಣಕ್ಕೆ ರಾಜ್ಯ ಸರ್ಕಾರ ಬದ್ಧವಾಗಿದೆ. ಕೇಂದ್ರ ಸರ್ಕಾರವು ಮಾರ್ಚ್ 1998ರಲ್ಲಿ ಜನತಾ ಬಟ್ಟೆ ಯೋಜನೆಯನ್ನು ಹಿಂತೆಗೆದುಕೊಂಡಿದೆ. ದುರ್ಬಲವರ್ಗದವರಿಗೆ ಸೀರೆ ಮತ್ತು ಪಂಚೆಗಳನ್ನು ಅಗ್ಗದ ದರದಲ್ಲಿ ಒದಗಿಸಲು ಹಾಗೂ ಕೈ ಮಗ್ಗ ನೇಕಾರರಿಗೆ ಅದರಲ್ಲೂ ವಿಶೇಷವಾಗಿ ವಯಸ್ಸಾದ ಮತ್ತು ಮಹಿಳಾ ನೇಕಾರರಿಗೆ ನಿರಂತರವಾಗಿ ಕೆಲಸ ಒದಗಿಸಿ ಜೀವನೋಪಾಯಕ್ಕೆ ಅನುವು ಮಾಡಿಕೊಡುವ ದೃಷ್ಟಿಯಿಂದ, ಅಗ್ಗದರದ ಸಿರೆ ಮತ್ತು ಪಂಚೆ ಯೋಜನೆಯನ್ನು ರಾಜ್ಯ ಸರ್ಕಾರ ಮುಂದುವರೆಸಿರುವದಾಗಿ ತಿಳಿಸಲು ಹರ್ಷವೆನಿಸುತ್ತದೆ. ಎಲ್ಲಾ ಕ್ಷೇತ್ರಗಳಂತೆ ಆರ್ಥಿಕ ಹಿಂಜರಿಕೆಯು ಕೈ ಮಗ್ಗದ ವಲಯದ ಮೇಲೂ ತನ್ನ ಪ್ರಭಾವ ಬೀರಿದೆ. ಕೈ ಮಗ್ಗದ ನೇಕರರಿಗೆ ನೆರವು ಒದಗಿಸಿ ಕೈ ಮಗ್ಗ ಬಟ್ಟೆ ಮಾರಾಟಕ್ಕೆ ಉತ್ತೇಜನ ನೀಡುವ ದೃಷ್ಟಿಯಿಂದ ಒಟ್ಟು ರೂ. 8.00 ಕೋಟಿ ವೆಚ್ಚದಲ್ಲಿ ರಾಜ್ಯ ಸರ್ಕಾರ ವಿಶೇಷ ಯೋಜನೆಗೆ ಒಪ್ಪಿಗೆ ನೀಡಿದೆ. ಕೈಮಗ್ಗ ವಲಯಕ್ಕೆ ಇನ್ನೂ ಹೆಚ್ಚಿನ ಬೆಂಬಲ ಒದಗಿಸುವ ಪ್ರಸ್ತಾಪ ಪರಿಶೀಲನೆಯಲ್ಲಿದ್ದು, ಪ್ರಾಯೋಗಿಕವಾಗಿ ಸರ್ಕಾರಿ ನೌಕರರ ಒಂದು ವಾರದ ವೇತನವನ್ನು ಕೈ ಮಗ್ಗ ಬಟ್ಟೆ ಖರೀದಿಗೆ ವಿಶೇಷ ಕೂಪನ್ ರೂಪದಲ್ಲಿ ನೀಡಲು ಯೋಜಿಸಲಾಗಿದೆ.

ರೇಷ್ಮೆ

136. ನಮ್ಮ ರಾಜ್ಯದಲ್ಲಿ ಹಾಲಿ 1,47,000 ಹೆಕ್ಟೇರ್ ಹಿಪ್ಪು ನೇರಳೆ ಪ್ರದೇಶವಿರುತ್ತದೆ. 1999-2000ನೇ ಸಾಲಿನಲ್ಲಿ ಇನ್ನೂ 5,000 ಹೆಕ್ಟೇರ್ ಹಿಪ್ಪುನೇರಳೆ ಪ್ರದೇಶವನ್ನು ಹೆಚ್ಚಿಸಿ ಹೊಸ ತಳಿಗಳನ್ನು ಬೆಳೆಸಲಾಗುವುದು. ಪ್ರಸ್ತುತ ವರ್ಷ 9,350 ಮೆಟ್ರಿಕ್ ಟನ್ ಕಚ್ಚಾ ರೇಷ್ಮೆಯನ್ನು ಉತ್ಪಾದಿಸುತ್ತಿದ್ದು, ಮುಂದಿನ ವರ್ಷ ಇದನ್ನು 9,750 ಮೆಟ್ರಿಕ್ ಟನ್‌ಗೆ ಹೆಚ್ಚಿಸಲು ಉದ್ದೇಶಿಸಲಾಗಿದೆ. ಹಾಗೂ ಕ್ಷೇತ್ರವಾರು ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಕಚ್ಚಾ ರೇಷ್ಮೆಯ ಗುಣಮಟ್ಟವನ್ನು ಸುಧಾರಿಸಲು ವಿಶೇಷ ಒತ್ತನ್ನು ನೀಡಲಾಗುವುದು.

137. ಪ್ರಪ್ರಥಮವಾಗಿ ರಾಜ್ಯದಲ್ಲಿ ಕೇಂದ್ರ ಸರ್ಕಾರದ ಸಹಯೋಗದಿಂದ ಕೆಟೆಲಿಟಿಕ್ ಯೋಜನೆಯಡಿಯಲ್ಲಿ 15 ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಕಚ್ಚಾ ರೇಷ್ಮೆಯ ಗುಣಮಟ್ಟವನ್ನು ಸುಧಾರಿಸಲು 300 ಮಲ್ಟಿ ಎಂಡ್ ಘಟಕಗಳನ್ನು ಖಾಸಗಿ ನೂಲು ಬಿಚ್ಚಾಣಿಕೆದಾರರಿಗೆ ಹತ್ತು ವರ್ಷಗಳ ಅವಧಿಗೆ ಬಡ್ಡಿ ರಹಿತ ಸಾಲದ ಮುಖಾಂತರ ಬಂಡವಾಳವನ್ನು ಒದಗಿಸಲಾಗುವುದು. ಹೊಸದಾಗಿ ತಂದಿರುವ 12 ತಾಂತ್ರಿಕತೆಗಳನ್ನು ರೈತರ ಬಳಿ ಹೆಚ್ಚು ಹೆಚ್ಚು ಒಯ್ಯುವ ಕ್ರಮವನ್ನು ಕೈಗೊಳ್ಳಲಾಗುವುದು. ಹೊಸ ಹಿಪ್ಪುನೇರಳೆ ತಳಿಗಳಾದ ವಿ- 1, ಎಸ್ ತಳಿಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸಲು ಅಗತ್ಯ ಕ್ರಮವನ್ನು ಕೈಗೊಳ್ಳಲಾಗುವುದು. ಹೊಸ ರೇಷ್ಮೆ ತಳಿಗಳಾದ ಎಂಹೆಚ್, ಬಿಎಲ್, ಸಿಎಸ್‌ಆರ್ ಮತ್ತು ಎಸ್ ಎಲ್ ತಳಿಗಳ ಸಾಕಾಣಿಕೆಯನ್ನು ಹೆಚ್ಚು ಮಾಡುವ ಮೂಲಕ ಕಚ್ಚಾ ರೇಷ್ಮೆಯ ಗುಣಮಟ್ಟವನ್ನು ಸುಧಾರಿಸಲಾಗುವುದು. ಜಪಾನ್ ದೇಶದ ತಜ್ಞರ ನೆರವಿನಿಂದ ದ್ವಿತಳಿ ಸಾಕಾಣಿಕೆಯನ್ನು ಹೆಚ್ಚಿಸಲು ವಿಶೇಷ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಲಾಗುವುದು.

ಮೂಲಭೂತ ಸೌಲಭ್ಯ

138. ಖಾಸಗೀ ಬಂಡವಾಳವನ್ನು ಆಕರ್ಷಿಸಲು ನಾವು ಮೂಲಭೂತ ಸೌಲಭ್ಯ ನೀತಿಯನ್ನು ರೂಪಿಸಿದ್ದೇವೆ. ಈ ನೀತಿಯನ್ವಯ ಅನೇಕ ಯೋಜನೆಗಳಿಗೆ ತೆರಿಗೆ ಉತ್ತೇಜನ ಮತ್ತು ರಿಯಾಯಿತಿಗಳನ್ನು ಕರ್ನಾಟಕ ಸರ್ಕಾರವು ನೀಡುತ್ತಿದೆ. ಇದಲ್ಲದೆ, ಕೈಗಾರಿಕಾ ನೀತಿ, ಮಾಹಿತಿ ತಂತ್ರಜ್ಞಾನ ನೀತಿ, ಪ್ರವಾಸೋದ್ಯಮ ನೀತಿ ಮುಂತಾದವುಗಳಡಿಯಲ್ಲೂ ತೆರಿಗೆ ರಿಯಾಯಿತಿಗಳನ್ನು ನೀಡಲಾಗಿದೆ. ಸಂಬಂಧಿತ ಆಡಳಿತ ಇಲಾಖೆಗಳು ವಾಣಿಜ್ಯ ತೆರಿಗೆ ಇಲಾಖೆಗೆ ದೃಢೀಕರಣ ಪತ್ರವನ್ನು ನೀಡುತ್ತವೆ. ಯಾವುದೇ ದೃಢೀಕರಣದ ಬಗ್ಗೆ ಉಂಟಾಗಬಹುದಾದ ವಿವಾದವನ್ನು ಇತ್ಯರ್ಥಗೊಳಿಸಲು, ಮತ್ತು ಸ್ಪಷ್ಟೀಕರಣ ನೀಡಲು ಆರ್ಥಿಕ ಇಲಾಖೆಯಲ್ಲಿ ಸಮಿತಿಯೊಂದನ್ನು ರಚಿಸಲು ಉದ್ದೇಶಿಸಿದ್ದೇವೆ. ಯೋಜನೆಗಳ ತ್ವರಿತ ಜಾರಿಗೆ ಈ ಸಮನ್ವಯ ಸಮಿತಿ ನೆರವಾಗಲಿದೆ.

139. ಜಂಟೀ ವಲಯದಲ್ಲಿ ಬಂದರು, ವಿಮಾನ ನಿಲ್ದಾಣ ಮತ್ತು ರಸ್ತೆಗಳನ್ನು ಅಭಿವೃದ್ಧಿಪಡಿಸಲು ನಾವು ಬಯಸಿದ್ದೇವೆ. ಜಾಗತಿಕ ಬಿಡ್‌ಗಳನ್ನು ಈಗಾಗಲೇ ಆಹ್ವಾನಿಸಿ ತದಡಿ, ಬೆಳಿಕೆರೆ ಮತ್ತು ಹಳೇ ಮಂಗಳೂರು ಬಳಿ ಬಂದರುಗಳನ್ನು ಅಭಿವೃದ್ಧಿಪಡಿಸಲು ಸಂಸ್ಥೆಗಳ ಸಂಕ್ಷಿಪ್ತ ಪಟ್ಟಿಯನ್ನು ತಯಾರಿಸಿದ್ದೇವೆ. ಈಗಿನ ಆರ್ಥಿಕ ಕುಸಿತವು ಪುನಶ್ಚೇತನಗೊಂಡು ಮೂಲಭೂತ ಸೌಲಭ್ಯ ಅಭಿವೃದ್ಧಿಯಲ್ಲಿ ಭಾಗಿಯಾಗಲು ಖಾಸಗೀ ಸಂಸ್ಥೆಗಳು ಮುಂದೆ ಬರುತ್ತವೆ ಎನ್ನುವ ಭರವಸೆ ನನಗಿದೆ.

140. ಕರ್ನಾಟಕ ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮವನ್ನು ನೋಂದಾಯಿತ ಕಂಪನಿಯಾಗಿ ಮಾಡಲು ನಾವು ಕ್ರಮ ಕೈಗೊಂಡಿದ್ದೇವೆ. ಅದು ವಾಣಿಜ್ಯ ದೃಷ್ಟಿಯಿಂದ ಪ್ರತಿಫಲ ಕೊಡುವ ಮೂಲಭೂತ ಸೌಲಭ್ಯ ಯೋಜನೆಗಳಿಗೆ ಹಣಕಾಸು ನೆರವು ಒದಗಿಸುತ್ತದೆ. 1999-2000ನೇ ಸಾಲಿನಲ್ಲಿ ಈ ನಿಗಮಕ್ಕೆ 50 ಕೋಟಿ ರೂ.ಗಳ ಈಕ್ವಿಟಿಯನ್ನು ನೀಡಲಾಗುವುದು.

ಮಾಹಿತಿ ತಂತ್ರಜ್ಞಾನ

141. 1992ರಲ್ಲಿ ಕೇವಲ 5 ಕೋಟಿ ರೂ.ಗಳನ್ನು ಇದ್ದ ಸಾಫ್ಟ್‌ವೇರ್ ರಫ್ತು ಪ್ರಮಾಣ 1998ರಲ್ಲಿ 2500 ಕೋಟಿ ರೂ.ಗಳಿಗೆ ಏರಿತು. ಬೆಂಗಳೂರು ಭಾರತದಲ್ಲೇ ಏಕೆ ಇಡೀ ಏಷಿಯಾದಲ್ಲೇ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಅಗ್ರಸ್ಥಾನ ಪಡೆದಿದೆ. 267 ಕ್ಕೂ ಹೆಚ್ಚು ರಫ್ತು ಆಧಾರಿತ ಮಾಹಿತಿ ತಂತ್ರಜ್ಞಾನ ಘಟಕಗಳು ರಾಜ್ಯದಲ್ಲಿವೆ. ಬೆಂಗಳೂರನ್ನು ಮಾಹಿತಿ ತಂತ್ರಜ್ಞಾನದ ಪ್ರಮುಖ ಕೇಂದ್ರವೆಂದು ಬಿಂಬಿಸುವ ಯತ್ನವಾಗಿ ಕಳೆದ ರಾಜ್ಯೋತ್ಸವದ ದಿನ ಅಂದರೆ 1998ರ ನವೆಂಬರ್ 1 ರಂದು ಏರ್ಪಡಿಸಲಾಗಿದ್ದ ''ಬೆಂಗಳೂರು ಐ.ಟಿ.ಡಾಟ್ ಕಾಮ್ - 1998'' ಅನ್ನು ಯಶಸ್ವಿಯಾಗಿ ನಡೆಸಿದೆವು.

142. ಮಾಹಿತಿ ತಂತ್ರಜ್ಞಾನದ ಅಗತ್ಯ ಪೂರೈಸಲು ಸರ್ಕಾರವು ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯನ್ನು ಸ್ಥಾಪಿಸಿದೆ. ಇದು ಮಾಹಿತಿ ತಂತ್ರಜ್ಞಾನ ಉದ್ದಿಮೆಗಳಿಗೆ ತರಬೇತಿ ಪಡೆದ ಕುಶಲಿಗಳನ್ನು ಒದಗಿಸುತ್ತದೆ. ಈ ಸಂಸ್ಥೆಗೆ ಸರ್ಕಾರವು 10 ಕೋಟಿ ರೂ. ಆರ್ಥಿಕ ನೆರವು ಹಾಗೂ 100 ಎಕರೆ ಜಾಗವನ್ನು ನೀಡಲಿದೆ. ಮುಂದಿನ ಮೂರು ವರ್ಷಗಳಲ್ಲಿ ಇಲ್ಲ ಸುಸಜ್ಜಿತ ಕ್ಯಾಂಪಸ್ ರೂಪುಗೊಳ್ಳಲಿದೆ.

ಉದ್ಯೋಗ, ತರಬೇತಿ ಮತ್ತು ಕಾರ್ಮಿಕ

143. ರಾಜ್ಯದಲ್ಲಿ ಕೈಗಾರಿಕಾ ಸಂಬಂಧಗಳು ಒಟ್ಟಾರೆ ಸೌಹಾರ್ದಯುತವಾಗಿದೆ. ಬಹಳಷ್ಟು ಕೈಗಾರಿಕಾ ವಿವಾದಗಳನ್ನು ಸೌಹಾರ್ದತೆಯಿಂದ ಬಗೆಹರಿಸಲು ನಮಗೆ ಸಾಧ್ಯವಾಗಿದೆ. ಈ ಕೈಗಾರಿಕಾ ಸಂಬಂಧಗಳ ಶಾಂತಿಯುತ ವಾತಾವರಣ ನಮ್ಮ ರಾಜ್ಯಕ್ಕೆ ಹೆಚ್ಚು ಕೈಗಾರಿಕೆಗಳು ಬರುವಂತೆ ಉತ್ತೇಜಿಸಲಿದೆ.

144. ಕಳೆದ ಎರಡು ವರ್ಷಗಳಲ್ಲಿ ನಾವು 40 ಹೊಸ ಸರ್ಕಾರಿ ಐಟಿಐಗಳನ್ನು ಮಂಜೂರು ಮಾಡಿದ್ದೇವೆ. ಇವುಗಳಲ್ಲಿ 18 ಐಟಿಐಗಳು ಪ್ರಾರಂಭವಾಗಿದ್ದು, ಉಳಿದವುಗಳು ಮುಂದಿನ ವರ್ಷ ಆರಂಭವಾಗಲಿದೆ.

145. ಬಾಲ ಕಾರ್ಮಿಕ ನಿಷೇಧ ಕಾನೂನುಗಳನ್ನು ಸರ್ಕಾರ ಜಾರಿಗೊಳಿಸುತ್ತಿದೆ. ಈ ಬಾಲ ಕಾರ್ಮಿಕ ಪದ್ಧತಿ ಅಮಾನವೀಯವಾಗಿದ್ದು ಇದರಿಂದ ಅವರನ್ನು ವಿಮುಕ್ತಗೊಳಿಸಿ ಪುನರ್ ವಸತಿ ಕಲ್ಪಿಸಲು 1999-2000ನೇ ಸಾಲಿನಲ್ಲಿ ನಾನು 1 ಕೋಟಿ ರೂ.ಗಳನ್ನು ಒದಗಿಸಿದ್ದೇನೆ.

146. 1999-2000ನೇ ಸಾಲಿನಲ್ಲಿ ಬೆಳಗಾವಿಯಲ್ಲಿ 100 ಹಾಸಿಗೆ ಸಾಮರ್ಥ್ಯದ ಇಎಸ್ಐ ಆಸ್ಪತ್ರೆ ಕಾರ್ಯಾರಂಭ ಮಾಡಲಿದೆ. ದಾವಣಗೆರೆಯಲ್ಲಿರುವ ಆಸ್ಪತ್ರೆಯ ಸಾಮರ್ಥ್ಯವನ್ನು 50 ಹಾಸಿಗೆಯಿಂದ 75 ಹಾಸಿಗೆಗೆ ಹೆಚ್ಚಿಸಲಾಗುವುದು.

ಸಹಕಾರ

147. ರಾಜ್ಯದಲ್ಲಿ ಸಹಕಾರಿ ಆಂದೋಲನ ಬಲಪಡಿಸಲು ಕಳೆದ ಸಾಲಿನ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದಂತೆ ಹೊಸ ಸಹಕಾರ ನೀತಿಯನ್ನು ರೂಪಿಸಲಾಗಿದೆ. ಈ ನೀತಿಗೆ ಅನುಗುಣವಾಗಿ 'ಕರ್ನಾಟಕ ಸಹಕಾರ ಕಾಯಿದೆ' ಗೆ ತಿದ್ದುಪಡಿ ತರಲಾಗಿದೆ.

148. ಸರ್ಕಾರಿ ಆರ್ಥಿಕ ನೆರವು ಪಡೆಯದ ಸಹಕಾರ ಸಂಘಗಳಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡುವ ಸಲುವಾಗಿ 'ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆ' ಎಂಬ ಹೊಸ ಕಾಯಿದೆಯನ್ನು ವಿಧಾನ ಮಂಡಲದ ಎರಡೂ ಸದನಗಳಲ್ಲಿ ಅಂಗೀಕರಿಸಲಾಗಿದ್ದು ರಾಷ್ಟ್ರಪತಿಗಳ ಅಂಕಿತಕ್ಕಾಗಿ ಕಳುಹಿಕೊಡಲಾಗಿದೆ. ಕಳೆದ ನಾಲ್ಕು ವರ್ಷಗಳಲ್ಲಿ ನಾವು ಎಲ್. ಸಿ. ಡಿ. ಸಿ. (N.C.D.C) ಯಿಂದ 86 ಕೋಟಿ ರೂ. ನೆರವು ಪಡೆದಿದ್ದೇವೆ. ಇದು ಸಹಕಾರಿ ಕ್ಷೇತ್ರದ ಕೈಗಾರಿಕೆಗಳಿಗೆ ಹೆಚ್ಚಿನ ಬಲ ನೀಡಿತು. 1998-99 ನೇ ಸಾಲಿನಲ್ಲಿ ಸಹಕಾರಿ ಸಾಲ ಸಂಸ್ಥೆಗಳು 1200 ಕೋಟಿ ರೂ. ಸಾಲ ನೀಡಿವೆ. 1999-2000ನೇ ಸಾಲಿನಲ್ಲಿ 1500 ಕೋಟಿ ರೂ. ಸಾಲ ವಿತರಿಸಲು ಉದ್ದೇಶಿಸಿದ್ದೇವೆ.

149. ಸಹಕಾರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರ ಒಳಿತಿಗಾಗಿ 'ಸಹಕಾರ ಕಲ್ಯಾಣ ನಿಧಿ' ಸ್ಥಾಪಿಸಲಾಗಿದೆ.

150. ಮಾರುಕಟ್ಟೆಯಲ್ಲಿನ ಏರುಪೇರಿನಿಂದ ತನ್ನ ಉತ್ಪನ್ನವನ್ನು ಕಡಿಮೆ ಬೆಲೆಗೆ ಮಾರಿ ನಷ್ಟಕ್ಕೆ ಒಳಗಾಗುವ ಹತಾಶ ರೈತರ ಹಿತಾಸಕ್ತಿ ಕಾಪಾಡಲು ಕಳೆದ ವರ್ಷ ಹತ್ತು ಕೋಟಿ ರೂ. ಗಳ 'ಬೆಲೆ ಸ್ಥಿರತೆ ನಿಧಿ' ಯನ್ನು ಸ್ಥಾಪಿಸಲಾಗಿತ್ತು. 1999-2000ನೇ ಸಾಲಿಗೆ ಎಪಿಎಂಸಿಗಳಿಂದ ದೇಣಿಗೆ ಪಡೆದು ಇದನ್ನು 20 ಕೋಟಿ ರೂ. ಗಳಿಗೆ ಹೆಚ್ಚಿಸಲಾಗುವುದು.

151. ರಾಜ್ಯದಲ್ಲಿ ಹನ್ನೊಂದು ಹೊಸ ಸಹಕಾರಿ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಶೇ. 100 ರಷ್ಟು ಸಾಲ ನೆರವನ್ನು ಕೊಡುವಂತೆ ಎನ್. ಸಿ. ಡಿ. ಸಿ (N.C.D.C) ಯನ್ನು ಒಪ್ಪಿಸಲಾಗಿದೆ. ಈ ಕಾರ್ಖಾನೆಗಳು ಉತ್ಪಾದನೆ ಆರಂಭಿಸಿದ ಮೇಲೆ ಪ್ರತಿ ಮೆಟ್ರಿಕ್ ಟನ್‌ಗೆ 100 ರೂ. ನಂತೆ ಬಿಲ್ಲಿನಲ್ಲಿ ಮುರಿದು ಎನ್. ಸಿ. ಡಿ. ಸಿ. ಸಾಲವನ್ನು ಮರುಪಾವತಿ ಮಾಡಲಾಗುವುದು.

152. ಕರ್ನಾಟಕ ಉಗ್ರಾಣ ನಿಗಮವು ರಾಜ್ಯಾದ್ಯಂತ 100 ಉಗ್ರಾಣಗಳನ್ನು ಹೊಂದಿದ್ದು 4. 5 ಲಕ್ಷ ಮೆಟ್ರಿಕ್ ಟನ್ ಆಹಾರಧಾನ್ಯ ಸಂಗ್ರಹಿಸುವ ಸಾಮರ್ಥ್ಯವನ್ನು ಹೊಂದಿದೆ. ಈ ಸಾಮರ್ಥ್ಯವನ್ನು ಮುಂದಿನ ಎರಡು ವರ್ಷಗಳಲ್ಲಿ 42, 500 ಮೆಟ್ರಿಕ್ ಟನ್‌ಗಳಷ್ಟು ಹೆಚ್ಚಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ 7 ಕೋಟಿ ರೂ. ವಿನಿಯೋಗಿಸಲಾಗುವುದು.

ಅರಣ್ಯ

153. ಕರ್ನಾಟಕ ಒಟ್ಟು ವಿಸ್ತೀರ್ಣದಲ್ಲಿ ಶೇ. 20ರಷ್ಟು ಅರಣ್ಯ ಪ್ರದೇಶ ಇದೆ. ಅರಣ್ಯ ಇಲಾಖೆಯ ನಿರಂತರ ಕಾರ್ಯನಿರ್ವಹಣೆಯಿಂದ, ಕರ್ನಾಟಕದಲ್ಲಿ ಹಸಿರು ಪ್ರದೇಶ ವಿಸ್ತಾರವಾಗುತ್ತಿದೆ. 1991ರಿಂದ 1997ರವರೆಗೆ ನಾವು ರಾಜ್ಯದ ಅರಣ್ಯಕ್ಕೆ ಮರಗಳಿಂದ ಆವೃತ್ತವಾದ 204 ಚದರ ಕಿಲೋಮೀಟರ್‌ನಷ್ಟು ಅರಣ್ಯ ಪ್ರದೇಶವನ್ನು ಹೆಚ್ಚಿಸಿದ್ದೇವೆ. 1998-99ನೇ ಸಾಲಿನಲ್ಲಿ 91, 740 ಹೆಕ್ಟೇರು ಪ್ರದೇಶದಲ್ಲಿ ಅರಣ್ಯ ಪ್ಲಾಂಟೇಷನ್‌ಗಳನ್ನು ಬೆಳೆಸಲಾಗಿದೆ. 596 ಲಕ್ಷ ಸಸಿಗಳನ್ನು ವಿತರಿಸಲಾಗಿದೆ. ಪೂರ್ವ ಬಯಲು ಅರಣ್ಯೀಕರಣ ಮತ್ತು ಪರಿಸರ ಯೋಜನೆ ಎಂಬ ಹೊಸ ಯೋಜನೆಯೊಂದನ್ನು ಓಇಸಿಎಫ್ ನೆರವಿನೊಡನೆ 23 ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಡಿ 1999-2000ನೇ ಸಾಲಿನಲ್ಲಿ 102 ಕೋಟಿ ರೂ. ಗಳನ್ನು ವೆಚ್ಚ ಮಾಡಲು ಯೋಜಿಸಲಾಗಿದೆ.

ಪರಿಸರ ಮತ್ತು ಜೀವಿಸ್ಥಿತಿ

154. ಪರಿಸರ ಮೇಲಿನ ಆಘಾತವನ್ನು ತಪ್ಪಿಸಲು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯು ಪ್ರಯತ್ನಿಸುತ್ತಿದೆ. ಹೊಸ ಯೋಜನೆಗಳು ಮತ್ತು ಹಳೆಯ ಕೈಗಾರಿಕೆಗಳು ಪರಿಸರಕ್ಕೆ ಹಾನಿಯಾಗದಂತೆ ತಮ್ಮ ಮಾಲಿನ್ಯ ಮಟ್ಟವನ್ನು ನಿಯಂತ್ರಿಸಿಕೊಳ್ಳುವಂತೆ ಕಟ್ಟುನಿಟ್ಟಿನ ಉಸ್ತುವಾರಿ ನಡೆಸುತ್ತಿದೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿ, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಯಾವುದೇ ಕೈಗಾರಿಕಾ ಸಂಸ್ಥೆ ಮಲಿನತೆಯನ್ನು ಹರಡದಿರಲು ಅಥವಾ ಅದಕ್ಕೆ ಕಾರಣವಾಗುವಂತೆ ತಡೆಯಲು ಜನರ ಸಹಕಾರ ಅಗತ್ಯ ಆರೋಗ್ಯಕ್ಕೆ ಹಾನಿಯುಂಟು ಮಾಡುವ ತ್ಯಾಜ್ಯ ವಸ್ತುಗಳ ನಿರ್ವಹಣೆಗೆ ಜರ್ಮನ್ ಸರ್ಕಾರದ ನೆರವನ್ನು ಪಡೆಯಲು ಉದ್ದೇಶಿಸಲಾಗಿದೆ.

ಆಹಾರ ಮತ್ತು ನಾಗರೀಕ ಸರಬರಾಜು

155. ಈವರೆಗೆ ರಾಜ್ಯ ಸರ್ಕಾರವು 66 ಲಕ್ಷ ಹಸಿರು ಕಾರ್ಡುಗಳನ್ನು ವಿತರಿಸಿದೆ. ಇವುಗಳಲ್ಲಿ 28.75 ಲಕ್ಷ ಕುಟುಂಬಗಳಿಗೆ ಮಾತ್ರ ಭಾರತ ಸರಕಾರವು ಸಬ್ಸಿಡಿ ದರಗಳಲ್ಲಿ ಆಹಾರ ಧಾನ್ಯಗಳನ್ನು ಒದಗಿಸುತ್ತಿದೆ. ಉಳಿದ 37 ಲಕ್ಷಕ್ಕೂ ಮಿಗಿಲಾದ ಹಸಿರು ಕಾರ್ಡುದಾರರ ಕುಟುಂಬಗಳಿಗೆ ರಾಜ್ಯ ಸರ್ಕಾರವು ಸಹಾಯಧನ ನೀಡಿ ಆಹಾರ ಧಾನ್ಯಗಳನ್ನು ಪೂರೈಸುತ್ತಿದೆ. ಭಾರತ ಸರ್ಕಾರವು ಪಡಿತರ ಆಹಾರ ಪದಾರ್ಥದ ದರಗಳನ್ನು ಏರಿಸಿದ್ದರಿಂದ 1998-99ನೇ ಸಾಲಿನಲ್ಲಿ ರಾಜ್ಯ ಸರಕಾರದ ಮೇಲೆ ಹೊರೆಯಾಗಿದ್ದ 177 ಕೋಟಿ ರೂ.ಗಳ ಸಬ್ಸಿಡಿ 1999-2000ನೇ ಸಾಲಿನಲ್ಲಿ 304 ಕೋಟಿ ರೂ.ಗಳಿಗೆ ಏರಲಿದೆ.

ಸಾರಿಗೆ

156. ರಾಜ್ಯ ಸಂಚಾರ ಸಾಗಾಣಿಕೆ ಅಗತ್ಯಗಳಿಗೆ ಇಲ್ಲಿರುವ ರೈಲ್ವೇ ಜಾಲವು ಸಾಕಾಗುವುದಿಲ್ಲ. ಇದರಿಂದ ಸಹಜವಾಗಿ ರಾಜ್ಯದ ಆರ್ಥಿಕ ಬೆಳವಣಿಗೆಗೆ ರಸ್ತೆ ಸಾರಿಗೆಯೇ ಮಹತ್ತರ ಪಾತ್ರ ವಹಿಸಬೇಕಾಗಿದೆ.

157. ನಾವು ಕರ್ನಾಟಕ ರಾಜ್ಯ ರಸ್ತೆ ಸಾರಿಗ ಸಂಸ್ಥೆಯನ್ನು ಮೂರು ನಿಗಮಗಳಾಗಿ ವಿಭಜಿಸಿರುವುದು ಮಾನ್ಯ ಸದಸ್ಯರಿಗೆ ತಿಳಿದ ವಿಷಯವೇ ಆಗಿದೆ. ಈ ಮೂರು ನಿಗಮಗಳು 1998-99ರಲ್ಲಿ ತಮ್ಮ ಸಾರಿಗೆ ಸಮೂಹಕ್ಕೆ ಹೊಸದಾಗಿ 2138 ಬಸ್‌ಗಳನ್ನು ಸೇರಿಸಿಕೊಂಡಿವೆ. 1999-2000ನೇ ಸಾಲಿನಲ್ಲಿ 2327 ಹೊಸ ಬಸ್‌ಗಳನ್ನು ಸೇರಿಸಲು ಉದ್ದೇಶಿಸಲಾಗಿದೆ.

158. ರಾಜ್ಯದ ಸಾರಿಗೆ ವಾಹನಗಳಿಗೆ ನೀಡುವ ಪರ್ಮಿಟ್‌ಗಳನ್ನು ಹೆಚ್ಚಿಸಲು ನಾವು ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ ಕೇರಳ ಮತ್ತು ಗೋವಾ ಜೊತೆ ಪರಸ್ಪರ ಸಾರಿಗೆ ಒಪ್ಪಂದಗಳನ್ನು ಮಾಡಿಕೊಂಡಿದ್ದೇವೆ. ಇದು ರಾಜ್ಯಗಳ ನಡುವೆ ಸಾರ್ವಜನಿಕರಿಗೆ ಸೇವೆಗಳನ್ನು ಹೆಚ್ಚಿಸಲು ನೆರವಾಗುತ್ತದೆ.

159. ಸಾರಿಗೆ ವಿವಾದಗಳಿಗೆ ಸಂಬಂಧಿಸಿದ ಮೊಕದ್ದಮೆಗಳು ತತ್‌ಕ್ಷಣವೇ ಇತ್ಯರ್ಥವಾಗುವಂತೆ ಮಾಡಲು ತಾಲ್ಲೂಕು ಮಟ್ಟದಲ್ಲಿ ಸಾರಿಗೆ ಅದಾಲತ್‌ಗಳನ್ನು ಆರಂಭಿಸಿದ್ದೇವೆ.

160. ಬೆಂಗಳೂರಿನ ಐದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಕಂಪ್ಯೂಟರೀಕೃತ ಲ್ಯಾಮಿನೇಟ್ ಮಾಡಿದ ಡ್ರೈವಿಂಗ್ ಲೈಸನ್ಸ್‌ಗಳನ್ನು 1999 ಜನವರಿಯಿಂದ ನೀಡಲು ಆರಂಭಿಸಲಾಗಿದೆ.

1999-2000ನೇ ಸಾಲಿನಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಗಳು ಮತ್ತು ಸಾರಿಗೆ ಆಯುಕ್ತರ ಕಚೇರಿಯನ್ನು ಗಣಕೀಕರಣಗೊಳಿಸಲು ಉದ್ದೇಶಿಸಲಾಗಿದೆ.

ವಾರ್ತಾ ಮತ್ತು ಪ್ರಚಾರ

161. ಕರ್ನಾಟಕ ಕಲೆ, ಸಂಸ್ಕೃತಿಯ ರಾಯಭಾರಿಯಾಗಿ ಬೆಳೆದು ಬರುತ್ತಿರುವ ಕನ್ನಡ ಚಲನಚಿತ್ರ ರಂಗವನ್ನು ಪೋಷಿಸುವ ಸಲುವಾಗಿ ಕರ್ನಾಟಕ ಸರ್ಕಾರ ಚಲನಚಿತ್ರ ನೀತಿಯನ್ನು ಘೋಷಿಸಿದೆ. ಈ ನೀತಿಯಲ್ಲಿ ಅಳವಡಿಸಲಾಗಿರುವ ಕಾರ್ಯಕ್ರಮಗಳು ಈಗಾಗಲೇ ಚಲನಚಿತ್ರ ರಂಗದಲ್ಲಿ ಫಲ ನೀಡಲು ಆರಂಭಿಸಿದ್ದು ಉತ್ಕೃಷ್ಟವಾದ ಚಿತ್ರಗಳು ತೆರೆ ಕಾಣುತ್ತಿವೆ.

162. ಕನ್ನಡ ಚಲನಚಿತ್ರಗಳ ಗುಣಮಟ್ಟವನ್ನು ಹೆಚ್ಚಿಸುವ ಹಾಗೂ ಪ್ರೋತ್ಸಾಹಿಸುವ ದೃಷ್ಟಿಯಿಂದ ಉತ್ತಮ ಹಾಗೂ ಗುಣಾತ್ಮಕ ಚಲನಚಿತ್ರಗಳಿಗೆ ಹೆಚ್ಚಿನ ಸಹಾಯಧನ ನೀಡಲು ಆದೇಶ ಹೊರಡಿಸಲಾಗಿದೆ. ಇಂತಹ ಚಿತ್ರಗಳ ಗುಣಮಟ್ಟವನ್ನು ವಿಮರ್ಶಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಸಲುವಾಗಿ ಖ್ಯಾತ ಚಲನಚಿತ್ರ ಹಾಗೂ ರಂಗ ನಿರ್ದೇಶಕ ಬಿ. ವಿ. ಕಾರಂತ ಅವರ ಅಧ್ಯಕ್ಷತೆಯಲ್ಲಿ ಒಂಭತ್ತು ಮಂದಿ ಸದಸ್ಯರ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿ ಶಿಫಾರಸ್ಸು ಮಾಡಿದ ಇಪ್ಪತ್ತು ಚಿತ್ರಗಳಿಗೆ ಪ್ರತಿ ವರ್ಷ ತಲಾ 10 ಲಕ್ಷರೂ. ಸಹಾಯಧನ ನೀಡಲಾಗುವುದು. ಸರ್ಕಾರದ ಈ ನಿರ್ಧಾರದಿಂದ ಉತ್ಕೃಷ್ಟ ಕನ್ನಡ ಚಲನಚಿತ್ರಗಳು ನಿರ್ಮಾಣಗೊಳ್ಳುವ ಆಶಯವಿದೆ.

163. ರಾಷ್ಟ್ರಮಟ್ಟದಲ್ಲಿ ಪುರಸ್ಕಾರ ಪಡೆದ ಕನ್ನಡ ಚಿತ್ರಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದಲೂ ವಿಶೇಷ ಪ್ರೋತ್ಸಾಹ ಧನ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಸ್ವರ್ಣಕಮಲ ಪ್ರಶಸ್ತಿ ಪಡೆದ ಕನ್ನಡ ಚಿತ್ರಕ್ಕೆ 15 ಲಕ್ಷರೂ., ಅತ್ಯುತ್ತಮ ಪರಿಸರ ಚಿತ್ರಕ್ಕೆ 3ಲಕ್ಷರೂ., ಅತ್ಯುತ್ತಮ ಪ್ರಾದೇಶಿಕ ಭಾಷಾ ಚಿತ್ರಕ್ಕೆ 2.5ಲಕ್ಷರೂ. ಹಾಗೂ ರಾಷ್ಟ್ರ ಪ್ರಶಸ್ತಿ ಪಡೆದ ಇನ್ನಿತರ ಚಿತ್ರಗಳಿಗೆ ಕೇಂದ್ರ ಸರ್ಕಾರ ನೀಡುವಷ್ಟೇಮೊತ್ತದ ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ಪ್ರವಾಸೋದ್ಯಮ ಹಾಗೂ ಯುವಜನ ಸೇವೆ

164. ರಾಜ್ಯದಲ್ಲಿ ಇರುವ ಅನೇಕ ಪ್ರವಾಸಿ ತಾಣಗಳಿಂದಾಗಿ, ಪ್ರವಾಸೋದ್ಯಮ ಉದ್ಯೋಗವನ್ನು ಸೃಜಿಸುವ ಹಾಗೂ ಆದಾಯವನ್ನು ತರುವ ವಲಯವಾಗಿದೆ. ರಾಜ್ಯ ಸರ್ಕಾರಿ ಸ್ವಾಮ್ಯದ ಕಂಪೆನಿಯಾದ ಜಂಗಲ್ ಲಾಡ್ಜ್‌ಸ್ ಮತ್ತು ರಿಸಾರ್ಟ್ ಅತ್ಯುತ್ತಮ ಗುಣಮಟ್ಟ ಕಾಪಾಡಿಕೊಂಡು ಬರುತ್ತಿರುವ ವಿಶ್ವದ ಮೊದಲ ಐದು ವನ್ಯಧಾಮ ತಾಣ ಸಂಸ್ಥೆಗಳಲ್ಲಿ ಸೇರಿದೆ. ಇಡೀ ರಾಷ್ಟ್ರದಲ್ಲಿ 'ಅತ್ಯುತ್ತಮ ಪರಿಸರ ಪರ ವಿಹಾರಧಾಮ' ಎಂಬ ಕಾರಣಕ್ಕೆ ಭಾರತ ಸರ್ಕಾರವು ಈ ಸಂಸ್ಥೆಗೆ ''ರಾಷ್ಟ್ರೀಯ ಪ್ರವಾಸೋದ್ಯಮ ಪ್ರಶಸ್ತಿ'' ನೀಡಿದೆ.

165. ಕುಂಬಳಗೋಡಿನ ಯುವಜನ ತರಬೇತಿ ಕೇಂದ್ರವನ್ನು ಒಂದು ಪ್ರಮುಖ ಯುವಜನ ತರಬೇತಿ ಕೇಂದ್ರವನ್ನಾಗಿ ಮಾಡಲು ಉದ್ದೇಶಿಸಲಾಗಿದೆ. ಮೈಸೂರಿನಲ್ಲಿ ಪ್ರಾದೇಶಿಕ ಯುವಜನ ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗುವುದು.

ಕನ್ನಡ ಮತ್ತು ಸಂಸ್ಕೃತಿ

166. ನಾವು ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿ 73 ರಂಗಮಂದಿರ ನಿರ್ಮಿಸಿದ್ದೇವೆ. ಇನ್ನೂ 92 ರಂಗಮಂದಿರಗಳು ನಿರ್ಮಾಣದ ವಿವಿಧ ಹಂತಗಳಲ್ಲಿವೆ. ಇನ್ನು ಮುಂದೆ ನಾವು ಜಿಲ್ಲಾ ಸಭಾಂಗಣ ಹಾಗೂ ಬಯಲು ರಂಗಮಂದಿಗಳ ನಿರ್ಮಾಣ ಕೈಗೆತ್ತಿಕೊಳ್ಳಲಿದ್ದೇವೆ. ಬೆಂಗಳೂರಿನಲ್ಲಿ ಆಧುನಿಕ ಕಲಾ ಗ್ಯಾಲರಿಯನ್ನು ಸ್ಥಾಪಿಸಲಾಗುವುದು. ಮುಂಬಯಿ ಮತ್ತು ದೆಹಲಿಯ ನಂತರ ಬೆಂಗಳೂರಿನಲ್ಲಿ ಮೂರನೆಯ ಕಲಾಗ್ಯಾಲರಿ ಸ್ಥಾಪನೆಯಾಗುತ್ತಿದೆ. ಸುಲಭವಾಗಿ ಲಭ್ಯವಿಲ್ಲದ ಅಪರೂಪದ ಸಮಕಾಲಿನ ಸಾಹಿತ್ಯ ಪುಸ್ತಕಗಳನ್ನು ಮುದ್ರಿಸಿ ರಿಯಾಯಿತಿ ದರದಲ್ಲಿ ವಿತರಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಮೈಸೂರಿನಲ್ಲಿರುವ ರಂಗಾಯಣ ನಾಟಕ ಸಂಸ್ಥೆಯನ್ನು ಅನುದಾನ ಸಂಹಿತಿಗೆ ಒಳಪಡಿಸಲಾಗಿದೆ.

ಸಂಸದೀಯ ವ್ಯವಹಾರ

167. ಸರ್ಕಾರವು ಡಾ|| ರಾಮಮನೋಹರ ಲೋಹಿಯಾ ಸಂಸದೀಯ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಲು ಉದ್ದೇಶಿಸಿದೆ. ಈ ಸಂಸ್ಥೆಯು ಹೊಸದಾಗಿ ಚುನಾಯಿತರಾದ ಜನಪ್ರತಿನಿಧಿಗಳಿಗೆ ಸಂಸದೀಯ ಮತ್ತು ಆಡಳಿತ ರಂಗಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ತರಬೇತಿ ನೀಡುತ್ತದೆ. ಇದಕ್ಕಾಗಿ ಆರಂಭಿಕವಾಗಿ 10ಲಕ್ಷ ರೂ. ಗಳನ್ನು ಒದಗಿಸಲಾಗಿದೆ.

ಗೃಹ

168. ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಎರಡು ಘಟನೆಗಳನ್ನು ಬಿಟ್ಟರೆ ಉಳಿದಂತೆ ಕಾನೂನು ಮತ್ತು ಸುವ್ಯವಸ್ಥೆ ತೃಪ್ತಿಕರವಾಗಿತ್ತು. ಅಪರಾಧ ಪ್ರಮಾಣವನ್ನು ಕಡಿಮೆಗೊಳಿಸಲು ಪೋಲೀಸ್ ವ್ಯವಸ್ಥೆ ಶ್ರಮಿಸಿದೆ. ಕೋಮು ಸೌಹಾರ್ದತೆ ಹಾಗೂ ಶಾಂತಿಯನ್ನು ಕಾಪಾಡಲು ಸಹಕರಿಸಿದ ಎಲ್ಲ ಜನತೆಯನ್ನು ಅಭಿನಂದಿಸುತ್ತೇನೆ. ಮುಂದೆಯೂ ಸಹ ಇದೇ ರೀತಿಯ ಸಹಕಾರವನ್ನು ಕೋರುತ್ತೇನೆ.

169. ಪೋಲೀಸ್ ಪಡೆಯ ಚಾಲನೆ ಮತ್ತು ಕಾರ್ಯದಕ್ಷತೆಯನ್ನು ಹೆಚ್ಚಿಸಲು ವ್ಯಾಪಕ ಕಂಪ್ಯೂಟರೀಕರಣ ಒಳಗೊಂಡಂತೆ ಅಗತ್ಯವಾದ ಆಧುನೀಕರಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಬೆಂಗಳೂರು ನಗರದ ಪೋಲೀಸ್ ವ್ಯವಸ್ಥೆಯನ್ನು ಶೀಘ್ರವಾಗಿ ಸಂಪೂರ್ಣವಾಗಿ ಕಂಪ್ಯೂಟರೀಕರಣ ಮಾಡಲಾಗುವುದು.

ಕಂದಾಯ

170. ಕಂದಾಯ ಇಲಾಖೆಯಲ್ಲಿ ಆಡಳಿತವನ್ನು ಹೆಚ್ಚು ಪಾರದರ್ಶಕ ಮಾಡಲು ಹಾಗೂ ಜನತೆಗೆ ಕಂದಾಯ ದಾಖಲಾತಿಗಳನ್ನು ಶೀಘ್ರವಾಗಿ ನೀಡಲು ವ್ಯಾಪಕವಾಗಿ ಕಂಪ್ಯೂಟರೀಕರಣ ಮಾಡಲಾಗುವುದು. ರಾಜ್ಯದಲ್ಲಿರುವ ವಿವಿಧ ಕಂದಾಯ ಇಲಾಖಾ ಕಛೇರಿಗಳನ್ನು ಕಂಪ್ಯೂಟರ್ ಜಾಲದ ವ್ಯವಸ್ಥೆಯಿಂದ ಒಗ್ಗೂಡಿಸಲಾಗುವುದು.

171. ಹೊಸದಾಗಿ ರಚಿತವಾದ 7 ಜಿಲ್ಲೆಗಳಲ್ಲಿ ಸರ್ಕಾರಿ ಕಟ್ಟಡಗಳ ನಿರ್ಮಾಣಕ್ಕಾಗಿ 7 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

ವಾಣಿಜ್ಯ ತೆರಿಗೆಗಳು

172. ರಾಜ್ಯದ ತೆರಿಗೆ ಆದಾಯದಲ್ಲಿ ವಾಣಿಜ್ಯ ತೆರಿಗೆಯು ಒಂದು ಪ್ರಮುಖ ಆದಾಯವಾಗಿದ್ದು ಒಟ್ಟು ಆದಾಯದ ಸಿಂಹ ಪಾಲು, ವಾಣಿಜ್ಯ ತೆರಿಗೆಯಿಂದಲೇ ಬರುತ್ತದೆ. ಈ ಸದನದ ಮುಂದೆ ಮಂಡಿಸಿದ ಕಳೆದ ನಾಲ್ಕು ಆಯವ್ಯಯ ಪತ್ರಗಳಲ್ಲಿ ರಾಜ್ಯದ ತೆರಿಗೆ ನೀತಿಯನ್ನು ಸಾಧ್ಯವಾದಷ್ಟು ಸರಳೀಕೃತಗೊಳಿಸಿದ್ದೇನೆ. ತೆರಿಗೆ ಸ್ವರೂಪವನ್ನು ಸರಳ, ಪಾರದರ್ಶಕ, ಸುಲಭ ಮತ್ತು ವ್ಯಾಪಾರಕ್ಕೆ ಪೂರಕವಾಗುವಂತೆ ಮಾಡಲು ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದೇನೆ.

ಮಾರಾಟ ತೆರಿಗೆ

173. ನಾನು ಹಿಂದಿನ ವರ್ಷಗಳ ಆಯವ್ಯಯ ಪತ್ರವನ್ನು ಮಂಡಿಸುವಾಗ ನಮ್ಮ ರಾಜ್ಯವು ಮೌಲ್ಯವರ್ಧಿತ ತೆರಿಗೆಯಡಿಗೆ ಸಾಗುತ್ತಿದೆ ಎಂದು ತಿಳಿಸಿದ್ದೆ. ಈ ನಿಟ್ಟಿನಲ್ಲಿ ನಾನು ಹಂತ ಹಂತವಾಗಿ ತೆರಿಗೆ ದರಗಳನ್ನು 21 ದರಗಳಿಂದ 3 ದರಗಳಿಗೆ ಇಳಿಸಿರುತ್ತೇನೆ. ನಾವು ಈಗಾಗಲೇ ವಾಣಿಜ್ಯ ತೆರಿಗೆ ಇಲಾಖೆಯ ಹೆಚ್ಚಿನ ಭಾಗವನ್ನು ಗಣಕೀಕೃತಗೊಳಿಸುವ ಕ್ರಮವನ್ನು ತೆಗೆದುಕೊಂಡಿದ್ದೇವೆ. ಹಾಗೆಯೇ ವ್ಯಾಪಾರಸ್ಥರ, ಉದ್ಯಮಿದಾರರ ಹಾಗೂ ತೆರಿಗೆ ಸಲಹೆದಾರರನ್ನು ಒಳಗೊಂಡ ರಾಜ್ಯಮಟ್ಟದ ಸಲಹಾ ಸಮಿತಿಯನ್ನು ರಚಿಸಿದ್ದು, ಅವರ ಸಲಹೆಗಳನ್ನು ಅವಲೋಕಿಸಿರುತ್ತೇನೆ.

174. ತೆರಿಗೆಯ ಕ್ಯಾಸ್ಕೇಡಿಂಗ್ ಪರಿಣಾಮವನ್ನು ಕಡಿಮೆಗೊಳಿಸಲು, ತೆರಿಗೆಯಿಂದ ವ್ಯಾಪಾರದಆಯ್ಕೆಯ ಮೇಲೆ(Choiced of Economic Agents)ಅನಗತ್ಯ ಪ್ರಭಾವ ತಗ್ಗಿಸಲು ನಮ್ಮ ಪ್ರಯತ್ನವನ್ನು ಮುಂದುವರಿಸಬೇಕಾಗಿದೆ. ವ್ಯಾಪಾರಿ ವರ್ಗವು ಮತ್ತು ಉದ್ಯಮಿಗಳು ನಮ್ಮ ಪ್ರವೇಶ ತೆರಿಗೆ ಮತ್ತು ವಹಿವಾಟು ತೆರಿಗೆ ನೀತಿಯ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯದ ಬಗ್ಗೆ ನನಗೆ ಮನವರಿಕೆಯಾಗಿದೆ. ಆರ್ಥಿಕ ಮತ್ತು ಸಾಮಾಜಿಕ ಅಧ್ಯಯನ ಸಂಸ್ಥೆಗೆ (ISEC) ರಾಜ್ಯದ ಉತ್ಪಾದನೆ ಮತ್ತು ವ್ಯಾಪಾರದ ಮೇಲೆ ಪ್ರವೇಶ ತೆರಿಗೆ ಮತ್ತು ವಹಿವಾಟು ತೆರಿಗೆಯ ಪರಿಣಾಮವನ್ನು ಅಭ್ಯಸಿಸಲು ವಹಿಸಲಿದ್ದೇವೆ. ನಮ್ಮ ಪಕ್ಕದ ರಾಜ್ಯಗಳ ಜೊತೆಗೆ ಹೋಲಿಸಿದಾಗ ನಮ್ಮ ರಾಜ್ಯದ ತಲಾವಾರು ತೆರಿಗೆ ಕಡಿಮೆಯಾಗಿರುವುದು ಕಂಡು ಬರುತ್ತದೆ. ಉದ್ಯಮಗಳಿಗೆ ಉತ್ತೇಜನ ನೀಡುವ ನೀತಿಯಲ್ಲಿ ರಾಜ್ಯ ರಾಜ್ಯಗಳ ಮಧ್ಯೆ ಆಗುತ್ತಿರುವ ಸಮರದಿಂದ ರಾಜ್ಯದ ತೆರಿಗೆ ''ಬಯೋಯನ್ಸಿ'' ಮೇಲೆ ಅಪಾರ ಪರಿಣಾಮ ಉಂಟಾಗಿದ್ದು, ರಾಜ್ಯಕ್ಕೆ ಸಂಗ್ರಹವಾಗುವ ಸಂಪನ್ಮೂಲಗಳ ಮೇಲೆ ಪರಿಣಾಮ ಬೀರಲಿದೆ. ಇದರ ಜೊತೆಗೆ ರಾಜ್ಯ ರಾಜ್ಯಗಳ ಮಧ್ಯೆ ಪ್ರಾರಂಭವಾಗಿರುವ ತೆರಿಗೆ ದರಗಳ ಸ್ಪರ್ಧೆಯು ವ್ಯಾಪಾರ ಮತ್ತು ಉದ್ಯಮಿಗಳಿಗೆ ಅವರ ವ್ಯಾಪಾರವನ್ನು ಯಾವ ರಾಜ್ಯದಲ್ಲಿ ಸ್ಥಾಪಿಸಬೇಕು ಎಂಬುದರ ಬಗ್ಗೆ ಅವರಲ್ಲಿಯೇ ಜಿಜ್ಞಾಸೆ ಉಂಟು ಮಾಡಿದೆ. ಈಗಿನ ಪರಿಸ್ಥಿತಿಯಲ್ಲಿ ಮತ್ತೆ ಹೊಸದಾಗಿ ತೆರಿಗೆ ವಿಧಿಸಲು ಇರುವ ಅವಕಾಶ ತುಂಬ ಕಡಿಮೆ. ನಾನು ಕಳೆದ ನಾಲ್ಕು ವರ್ಷಗಳಲ್ಲಿ ತೆರಿಗೆ ಪದ್ಧತಿಯಲ್ಲಿ ಮಾಡಿರುವ ಸುಧಾರಣೆಗಳು ತಾವಾಗಿಯೇ ತೆರಿಗೆ ಕೊಡುವ ವಾತಾವರಣವನ್ನು ಸೃಷ್ಟಿ ಮಾಡಿದೆ. ವಿಶ್ವಔದ್ಯಮಿಕ ಹಿಂಜರಿತದ ಈ ಪರಿಸ್ಥಿತಿಯಲ್ಲಿ ಪ್ರಗತಿಪರ ಕ್ರಮಗಳನ್ನು ಮುಂದುವರೆಸುತ್ತಾ ಅನೇಕ ಸುಧಾರಣಾ ಕ್ರಮಗಳನ್ನು ಸೂಚಿಸುತ್ತಿದ್ದೇನೆ. ಈ ಕ್ರಮಗಳಿಂದ ವ್ಯಾಪಾರ ಮತ್ತು ಉದ್ದಿಮೆಗಳು ಹೆಚ್ಚಾಗಿ ತೆರಿಗೆ ಕಾನೂನು ಪಾಲನೆಯನ್ನು ಮಾಡುತ್ತಾರೆಂದು ನಂಬಿದ್ದೇನೆ. ಇದರಿಂದ ರಾಜ್ಯಸ್ವದ ಸಂಗ್ರಹಣೆ ಈ ವರ್ಷ ಹೆಚ್ಚುತ್ತದೆಂಬ ವಿಶ್ವಾಸವು ಸಹ ನನಗಿದೆ.

175. ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳ ಕಾರ್ಯವೈಖರಿಯ ಗುಣಮಟ್ಟವನ್ನು ಹೆಚ್ಚಿಸಲು ಹಾಗೂ ಮೌಲ್ಯವರ್ಧಿತ ತೆರಿಗೆಯನ್ನು ತರುವ ದಿಸೆಯಲ್ಲಿ ಸರ್ಕಾರವು ಸಾಗುತ್ತಿರುವುದನ್ನು ಗಮನಿಸಿ ಹಲವಾರು ಕಾರ್ಯಾಗಾರಗಳನ್ನು ಮತ್ತು ವಿಚಾರಗೋಷ್ಠಿಗಳನ್ನು ಏರ್ಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ವಹಿವಾಟು ತೆರಿಗೆ

176. ಈಗಾಗಲೇ ಹೇಳಿರುವಂತೆ ಉದ್ಯಮ ಮತ್ತು ವ್ಯಾಪಾರಿ ವೃಂದವು ಮೇಲಿಂದ ಮೇಲೆ ವಹಿವಾಟು ತೆರಿಗೆಯನ್ನು ತೆಗೆದುಹಾಕಲು ಒತ್ತಾಯಿಸುತ್ತಿವೆ. ಈ ಹೊರೆಯನ್ನು ಕಡಿಮೆ ಮಾಡಲು ಈ ಕೆಳಕಂಡಂತೆ ಹಂತ ಹಂತವಾಗಿ ಈ ತೆರಿಗೆಯನ್ನು ಹಾಕುವ ಬಗ್ಗೆ ಒಂದು ಯೋಜನೆಯನ್ನು ತಮ್ಮ ಮುಂದಿಡುತ್ತಿದ್ದೇನೆ.

(ಅ) ವ್ಯಾಪಾರಸ್ಥರ ಒಟ್ಟು ವಹಿವಾಟು ರೂ. 5ಲಕ್ಷಗಳವರೆಗೆ ಈಗಿರುವ ತೆರಿಗೆ ವಿನಾಯಿತಿಯನ್ನು ಮುಂದುವರೆಸುವುದು.

(ಆ) ಯಾವ ವರ್ತಕರ ಒಟ್ಟು ವಹಿವಾಟು ರೂ. 5ಲಕ್ಷಕ್ಕೂ ಹೆಚ್ಚಾಗಿದ್ದು ಆದರೆ ರೂ. 500ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ. ಮೊದಲ ಐದು ಲಕ್ಷ ಬಿಟ್ಟು ಮಿಕ್ಕ ವಹಿವಾಟಿಗೆ ಶೇಕಡ 1 ರಷ್ಟು ವಹಿವಾಟು ತೆರಿಗೆಯನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ.

(ಇ) ಯಾವ ವರ್ತಕರ ಒಟ್ಟು ವಹಿವಾಟು ರೂ. 500 ಲಕ್ಷಕ್ಕಿಂತ ಹೆಚ್ಚಾಗಿದ್ದು ಆದರೆ ರೂ. 1000 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ, ರೂ 500 ಲಕ್ಷಕ್ಕೆ ಮೀರಿದ ವಹಿವಾಟು ಮೇಲೆ ಶೇಕಡ 2 ರಷ್ಟು ವಹಿವಾಟು ತೆರಿಗೆಯನ್ನು ವಿಧಿಸಲು ಹಾಗೂ ಮೊದಲಿನ 5 ಲಕ್ಷಕ್ಕೆ ರಿಯಾಯಿತಿ ಕೊಟ್ಟು ಉಳಿದ ವಹಿವಾಟಿನ ಮೇಲೆ ಕೇವಲ ಶೇಕಡ 1 ರಷ್ಟು ವಹಿವಾಟು ತೆರಿಗೆಯನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ.

(ಈ) ರೂ. 1000 ಲಕ್ಷಕ್ಕಿಂತ ಹೆಚ್ಚು ವಹಿವಾಟು ಇರುವ ವ್ಯಾಪರಸ್ಥರ ವಹಿವಾಟು ತೆರಿಗೆಯಲ್ಲಿ ಬದಲಾವಣೆ ಇರುವುದಿಲ್ಲ.

(ಉ) ಈಗಿರುವ 2ನೇ ಮತ್ತು ಇನ್ನಿತರ ಮಾರಾಟದ ಮೇಲಿರುವ ಶೇಕಡಾ 1 ರಷ್ಟು ವಹಿವಾಟು ತೆರಿಗೆಯನ್ನು ಮುಂದುವರೆಸಬಯಸುತ್ತೇನೆ.

ಪರಿಶೀಲನೆ ರಹಿತ ಒಪ್ಪಿಗೆ

177. 1997-98 ಕರನಿರ್ಧಾರಣೆ ವರ್ಷದವರೆಗೆ ಇರುವ ಕರನಿರ್ಧಾರಣಾ ಕಡತಗಳ ಬಾಕಿಯನ್ನು ಕಡಿಮೆ ಮಾಡಲು ಮತ್ತು ಸಣ್ಣ ವ್ಯಾಪಾರಸ್ಥರಿಗೆ ಅನುಕೂಲವಾಗುವಂತೆ ಮಾಡಲು ಒಂದು ಹೊಸ ಯೋಜನೆಯನ್ನು ರೂಪಿಸಿದ್ದು ಇದರ ಪ್ರಕಾರ ಒಟ್ಟು ವಹಿವಾಟು ಮಿತಿಯು ವರ್ಷಕ್ಕೆ ರೂ. 7.5ಲಕ್ಷ ಮೀರದೆ ಇದ್ದಲ್ಲಿ ಹಾಗೂ ಹಿಂದಿನ ಕರನಿರ್ಧಾರಣೆಯಾಗಿರುವ ವರ್ಷಕ್ಕೆ ಹೋಲಿಸಿದಾಗ ಶೇಕಡಾ 15ರಷ್ಟು ಪ್ರತಿ ವರ್ಷ ಕರದ ಬೆಳವಣಿಗೆ ಕೊಟ್ಟಂತಹ ವರ್ತಕರ ಪ್ರಕರಣದಲ್ಲಿ, ವಾರ್ಷಿಕ ವಹಿವಾಟು ನಮೂದೆಯನ್ನು

ಅವರು ಕೊಟ್ಟಂತೆ ಒಪ್ಪಿಕೊಳ್ಳಲಾಗುವುದು. ಹಾಗೂ ವರ್ತಕರು ಸ್ವಯಂಪ್ರೇರಿತರಾಗಿ ಈ ಮಟ್ಟಕ್ಕೆ ತಾವಾಗಿಯೇ ಒಪ್ಪಬಹುದು. ಈ ಯೋಜನೆಯು ಅಧಿಕೃತ ನಮೂನೆಗಳನ್ನು ಉಪಯೋಗಿಸದಿರುವಂತಹ ವರ್ತಕರಿಗೆ ಅನ್ವಯ. ಇದಕ್ಕಾಗಿ ಈಗಿರುವ ಪರಿಶೀಲನೆ ರಹಿತ ಕರನಿರ್ಧರಣೆ ಪದ್ಧತಿಯಲ್ಲಿರುವ ಕೆಲವು ನಿಯಮಗಳನ್ನು ಸಡಿಲಿಸಲು ಇಚ್ಛಿಸಿದ್ದೇನೆ. ಈ ಯೋಜನೆಯು ವ್ಯಾಪಾರಸ್ಥರಿಗೆ ಮತ್ತು ರಾಜ್ಯಕ್ಕೆ ಲಾಭಕರವಾಗಲಿದೆ.

ಸಣ್ಣ ಕೈಗಾರಿಕೆಗಳು

178. ರಾಜ್ಯದಲ್ಲಿ ಒಟ್ಟು ಎರಡು ಲಕ್ಷಕ್ಕೂ ಮೇಲ್ಪಟ್ಟು ಸಣ್ಣ ಉದ್ಯಮಗಳಿವೆ. ಈಗಿರುವ ವ್ಯಾಪಾರ, ಉದ್ದಿಮೆಗಳ ಹಿಂಜರಿತದಿಂದ ಅವು ಅನೇಕ ಕಷ್ಟಗಳನ್ನು ಎದುರಿಸುತ್ತಿವೆ. ಬೃಹತ್ ಉದ್ಯಮಗಳಿಗೆ ಬೇಕಾಗಿರುವ ಇಂಟರ್ ಮೀಡಿಯೇಟ್ ಸರಕುಗಳು ಉತ್ಪಾದಿಸುತ್ತಿರುವ ಸಣ್ಣ ಉದ್ಯಮಗಳ ಉತ್ಪಾದನೆಗಳು ತೆರಿಗೆಗೆ ಒಳಪಡುವುದರಿಂದ, ಸರಕುಗಳು ಇನ್ನೂ ಹೆಚ್ಚು ದುಬಾರಿಯಾಗುತ್ತವೆ. ಈ ಸಣ್ಣ ಉದ್ಯಮಗಳು ಉತ್ಪಾದನೆಗಳು ಈ ವಿಷಯ ಪರಿಸ್ಥಿತಿಯನ್ನು ಎದುರಿಸಿ, ಪೈಪೋಟಿ ಮಾಡಲು, ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸಲು ಸಮರ್ಥವಾಗಿರುವ ಈ ಉದ್ದಿಮೆಗಳಿಗೆ ಕೆಳಕಂಡ ಪರಿಹಾರಗಳನ್ನು ನೀಡಲು ಇಚ್ಛಿಸುತ್ತೇನೆ.

(ಅ) ಸಣ್ಣ ಕೈಗಾರಿಕೆಗಳ ಉತ್ಪಾದನೆಗೆ ಬೇಕಾಗಿರುವ ಕಚ್ಚಾವಸ್ತುಗಳ ಮೇಲಿನ ತೆರಿಗೆ ದರ ಶೇಕಡ 2ಕ್ಕೆ ಇಳಿತ.

(ಆ) ಹತ್ತು ಲಕ್ಷಕ್ಕಿಂತ ಕಡಿಮೆ ವಹಿವಾಟು ಹೊಂದಿರುವ ಸಣ್ಣ ಉದ್ಯಮಗಳಿಗೆ ವಹಿವಾಟು ತೆರಿಗೆಯಿಂದ ವಿನಾಯಿತಿ. ಹತ್ತು ಲಕ್ಷಕ್ಕಿಂತ ಹೆಚ್ಚು ವಹಿವಾಟು ಇರುವ ಸಣ್ಣ ಉದ್ಯಮಗಳಿಗೂ ಕೂಡ ಪ್ರಥಮ ಹತ್ತು ಲಕ್ಷಕ್ಕೆ ವಿನಾಯಿತಿ ಇರುವುದು.

(ಇ) ಅನೇಕ ಉದ್ಯಮಗಳಿಗೆ ಅವು ವಿಸ್ತರಣೆ, ವೈವಿಧ್ಯತೆ ಮತ್ತು ಆಧುನೀಕತೆಯಿಂದ ಉತ್ಪಾದಿಸುವ ಹೆಚ್ಚಿನ ಉತ್ಪಾದನೆಗಳು ಮೇಲೆ ಕೊಡತಕ್ಕಂತಹ ತೆರಿಗೆಗಳ ಮೇಲೆ ಈಗಾಗಲೇ ವಿನಾಯಿತಿ ನೀಡಲಾಗಿದೆ. ಆದರೆ ಅಂತಹ ಅನೇಕ ಸಣ್ಣ ಉದ್ಯಮಗಳು ಕೊಡಬೇಕಾದ ತೆರಿಗೆ ಪ್ರಮಾಣವನ್ನು ನಿರ್ಧರಿಸುವುದು ಕಷ್ಟಕರವಾಗುತ್ತಿತ್ತು. ಇದರಿಂದ ಅನೇಕ ಸಣ್ಣ ಕೈಗಾರಿಕೆಗಳು ಕೊಡುವ ತೆರಿಗೆ ಬಾಕಿಯ ಪ್ರಮಾಣದಲ್ಲಿ ಹೆಚ್ಚಳ ಉಂಟಾಗಿದೆ. ಆದ್ದರಿಂದ ನಾನು ಈ ಸಣ್ಣ ಕೈಗಾರಿಕೆಗಳ 31-3-98ರವರೆಗೆ ಇರುವ ಬಾಕಿ ತೆರಿಗೆಯನ್ನು 24 ಮಾಸಿಕ ಕಂತಿನಲ್ಲಿ ಕೊಡಲು, ಅನುಮತಿ ನೀಡಲು ನಿರ್ಧರಿಸಿದ್ದೇನೆ. ಇಂತಹ ಪ್ರಕರಣಗಳಲ್ಲಿ ದಂಡ ಮತ್ತು ಬಡ್ಡಿ ಹಣ ಕೊಡಬೇಕಾಗಿದ್ದಲ್ಲಿ ಅದನ್ನು ಕೂಡ ಮನ್ನಾ ಮಾಡಲು ನಿರ್ಧರಿಸಿದ್ದೇನೆ.

(ಈ) ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಸರ್ಕಾರ ಹಲವಾರು ಉತ್ತೇಜನ ಕೊಟ್ಟಿದೆ. ಅವರಿಗೆ ಈ ಉತ್ತೇಜನಗಳ ಉಪಯೋಗ ಹಾಗೂ ಅದಕ್ಕೆ ಬೇಕಾದ ಕಾರ್ಯ ವಿಧಾನ ತಿಳಿಯಲು ನೆರವು ನೀಡಬೇಕಾಗಿದೆ. ನಾನು ಅವರ ಸಮಸ್ಯೆಗಳನ್ನು ಪರಿಹರಿಸಲು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ, ಸಲಹಾ ಕೇಂದ್ರವನ್ನು ರಚಿಸಲು ತೀರ್ಮಾನಿಸಿದ್ದೇನೆ.

ರಫ್ತು ಮಾಡುವ ಸರಕುಗಳ ಉದ್ಯಮಗಳು

179. ರಫ್ತಿಗಾಗಿ ಸರಕುಗಳನ್ನು ತಯಾರು ಮಾಡುವ ಉದ್ಯಮಗಳಿಗೆ ಪ್ರೋತ್ಸಾಹಿಸಲು ಕಚ್ಚಾ ವಸ್ತುಗಳ ತೆರಿಗೆ ವಿನಾಯಿತಿ ಮತ್ತು ಕ್ಯಾಪಿಟಲ್ ವಸ್ತುಗಳ ಖರೀದಿ ಮೇಲಿನ ತೆರಿಗೆ ಹಿಂದಿರುಗಿಸುವಿಕೆ ಮುಂತಾದವನ್ನು ಅಳವಡಿಸಲಾಗಿದೆ. ಆದರೆ, ಸರ್ಕಾರದಿಂದ ಕೊಡಲಾಗಿರುವ ಈ ವಿನಾಯಿತಿಗಳನ್ನು ಪಡೆಯುವುದರಲ್ಲಿ ಈ ಘಟಕಗಳು ಕೆಲವು ಅನಾನುಕೂಲಗಳನ್ನು ಎದುರಿಸುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ನಾನು ಈ ನ್ಯೂನತೆಯನ್ನು ಪರಿಹಾರ ಮಾಡಲು ಅವಶ್ಯಕವಾಗಿರುವ ಅಧಿಸೂಚನೆಗಳು ಮತ್ತು ಸರ್ಕಾರಿ ಆದೇಶಗಳನ್ನು ಹೊರಡಿಸಲು ನಿರ್ಧರಿಸಿದ್ದೇನೆ:-

(ಅ) ಖರೀದಿ ಹಂತದ ಮೇಲೆ ಇರುವ ತೆರಿಗೆಯನ್ನು ಕೂಡ ಹಿಂತಿರುಗಿಸಲು ಅನುಮತಿ ನೀಡಲಾಗುವುದು.

(ಆ) ರಾಜ್ಯದಲ್ಲಿಯೇ ಖರೀದಿಸುವ ಕಚ್ಚಾ ಪದಾರ್ಥಗಳ ಮೇಲೆ ಪ್ರವೇಶ ತೆರಿಗೆ ವಿನಾಯಿತಿ ನೀಡಲಾಗುವುದು.

ಸಿದ್ಧಪಡಿಸಿದ ಉಡುಪುಗಳು

180. ಬೆಂಗಳೂರಿನಿಂದ ರಫ್ತಾಗುವ ಸಿದ್ಧಪಡಿಸಿದ ಉಡುಪುಗಳು ಸಾಕಷ್ಟು ಪ್ರಮಾಣದ ವಿದೇಶಿ ವಿನಿಮಯವನ್ನು ತರುತ್ತಿದೆ. ಈ ಘಟಕಗಳಲ್ಲಿ ಸಾವಿರಾರು ಜನ ಕೆಲಸ ಮಾಡುತ್ತಿದ್ದು, ಅವರಲ್ಲಿ ಹೆಚ್ಚಾಗಿ ಸ್ತ್ರೀ ಕಾರ್ಮಿಕರಿರುತ್ತಾರೆ. ಈ ಉದ್ಯಮಕ್ಕೆ ಸಹಾಯವಾಗಲು ನಾನು ಅಪ್ಪೆರಲ್ ಎಕ್ಸ್‌ಪೋರ್ಟ್ ಪ್ರೋಮೋಶನ್ ಕೌನ್ಸಿಲ್/ ಭಾರತ ಸರ್ಕಾರ ಇವರಿಂದ ಉತ್ಪಾದಕರಿಗೆ ನೀಡುವ 'ಕೋಟಾ' ಮಾರಾಟದ ಮೇಲಿರುವ ಮಾರಾಟ ತೆರಿಗೆಗೆ ವಿನಾಯಿತಿ ನೀಡುತ್ತೇನೆ.

ಇನ್ನಿತರ ವಿಭಾಗಳಿಗೆ ನೀಡಿರುವ ಪರಿಹಾರ ಮತ್ತು ರಿಯಾಯಿತಿಗಳು

181. ವ್ಯಾಪಾರ ಮತ್ತು ಉದ್ಯಮಗಳ ಇನ್ನಿತರ ವಿಭಾಗಗಳ ಮೇಲಿನ ತೆರಿಗೆ ಹೊರೆಯನ್ನು ಕಡಿಮೆ ಮಾಡಲು ನಾನು ಈ ಕೆಳಕಂಡ ಪರಿಹಾರ ಮತ್ತು ರಿಯಾಯಿತಿಗಳನ್ನು ಘೋಷಿಸುತ್ತೇನೆ.

(ಅ) ತೆರಿಗೆ ದರಗಳಲ್ಲಿ ಇಳಿತ

1) ಹೋಟಲ್ ಉದ್ಯಮದ ಮೇಲೆ ನಮ್ಮ ರಾಜ್ಯದ ತೆರಿಗೆ ದರಗಳು ನೆರೆ ರಾಜ್ಯಗಳ ತೆರಿಗೆ ದರಗಳಿಂತ ಹೆಚ್ಚಾಗಿದೆಯೆಂದು ಮೇಲಿಂದ ಮೇಲೆ ಮನವಿಗಳು ಬಂದಿದೆ. ರಾಜಿ ಪದ್ಧತಿಗೆ ಈಗಿರುವ ವಹಿವಾಟು ಮಿತಿಯನ್ನು ಒಂದು ನೂರು ಲಕ್ಷಕ್ಕೆ ಏರಿಸಲು ನಾನು ನಿರ್ಧರಿಸಿದ್ದೇನೆ. ಈ ಪದ್ಧತಿಯು ಸಿಹಿ ತಿಂಡಿ ಅಂಗಡಿಗಳು ಮತ್ತು ಐಸ್ ಕ್ರೀಂ ಪಾರ್ಲರ್‌ಗಳಿಗೂ ಕೂಡ ಅನ್ವಯಿಸುವುದು. ರಾಜಿ ಪದ್ಧತಿಯಲ್ಲಿರುವ ತೆರಿಗೆ ದರವನ್ನು ಈಗಿರುವ ಶೇಕಡ 4 ರಿಂದ ಶೇಕಡ 2ಕ್ಕೆ ಇಳಿಸಲು ಇಚ್ಛಿಸಿದ್ದೇನೆ.

2) ರೈತರು, ಕಾಗದ ಮತ್ತು ಕೃತಕ ನೂಲಿನ ಉತ್ಪಾದನೆಗೆ ಬೇಕಾಗಿರುವ ಸರ್ವೆಮರ, ನೀಲಗಿರಿಮರ (ಕ್ಯಾಸುರಿನಾ, ಯುಕಲಿಪ್ಟಸ್) ಮತ್ತು ಬೇರೆ ಪಲ್ಪ್ ವುಡ್‌ಗಳನ್ನು ಬೆಳೆಯುತ್ತಾರೆ. ಈಗ ಕರ್ನಾಟಕದಲ್ಲಿರುವ ಹೆಚ್ಚಿನ ತೆರಿಗೆ ದರದಿಂದಾಗಿ ಕರ್ನಾಟಕ ರಾಜ್ಯದ

ಉದ್ಯಮಗಳು ಹೊರರಾಜ್ಯದಿಂದ ಈ ಸರಕುಗಳನ್ನು ಖರೀದಿಸುತ್ತಿದ್ದಾರೆ. ನಮ್ಮ ರಾಜ್ಯದ ರೈತರಿಗ ಹೆಚ್ಚಿನ ಆದಾಯ ಬರಲು ಅನುಕೂಲವಾಗುವಂತೆ ನಾನು ಇಂತಹ ಮರದ ಮೇಲಿರುವ ತೆರಿಗೆ ದರವನ್ನು ಶೇಕಡ 4ಕ್ಕೆ ಇಳಿಸಿದ್ದೇನೆ.

3) ಮಣ್ಣಿನ ಹೆಂಚು, ಮಣ್ಣಿನ ಅಲಂಕಾರಿಕ ಹೆಂಚು, ಉರುವಲು ಕಟ್ಟಿಗೆ, ಮೇಣ, ಪ್ಲಾಸ್ಟಿಕ್ ಚೀಲಗಳು, ಬ್ರಾಂಡ್ ರಹಿತ ಚಹಾ, ಚಲನಚಿತ್ರದ ಗುತ್ತಿಗೆ, ಕೇಂದ್ರೀಯ ವಿದ್ಯುತ್ ಸಂಶೋಧನಾ ಸಂಸ್ಥೆಯು ಪ್ರಾಮಾಣೀಕರಿಸಿದ ವಿದ್ಯುತ್ ಮಿತಿಗೊಳಿಸುವ ಎಲೆಕ್ಟ್ರಿಕ್ ಬಲಾಸ್ಟ್ ಮತ್ತು ಲ್ಯಾಂಪ್‌ಗಳ ಮೇಲಿನ ತೆರಿಗೆಯನ್ನು ಕಡಿತಗೊಳಿಸಲು ನಿರ್ಧರಿಸಿದ್ದೇನೆ.

4) ಮಣ್ಣಿನ ಹೆಂಚಿನ ಕಚ್ಚಾ ಸಾಮಗ್ರಿಗೆ ತೆರಿಗೆಯನ್ನು ಶೇಕಡ 3 ಕ್ಕೆ ಇಳಿಸಲಾಗಿದೆ.

5) ಬೀರ್ ತಯಾರಿಕೆಯು ಕರ್ನಾಟಕದ ಒಂದು ಪ್ರಮುಖ ಉದ್ಯಮ. 19995-96ರಿಂದ ಇದರ ಬಳಕೆ ಕಡಿಮೆಯಾಗಿದೆ. ಬೀರ್‌ನಲ್ಲಿ ಮದ್ಯಸಾರದ ಅಂಶ ಬಹಳ ಕಡಿಮೆ. ಮದ್ಯದ (ಹಾರ್ಡ್ ಲಿಕ್ಕರ್) ಆಕರ್ಷಣೆಯನ್ನು ಕಡಿಮೆ ಮಾಡಲು ಬೀರ್‌ನ ತೆರಿಗೆಯನ್ನು ಕಡಿಮೆ ಮಾಡಲು ಪ್ರಸ್ತಾಪಿಸುತ್ತೇನೆ.

(ವಿವರಗಳು ಅನುಬಂಧ 2ರಲ್ಲಿ)

ಬಿ) ವಿನಾಯಿತಿಗಳು

ಅ) ವ್ಯವಸಾಯ ನಮ್ಮ ರಾಜ್ಯದ ಬೆನ್ನೆಲುಬಾಗಿದೆ. ರೈತರಿಗೆ ಅನುಕೂಲ ಮಾಡಿಕೊಡಲು ರಸಗೊಬ್ಬರದ ಮೇಲಿನ ಮಾರಾಟ ತೆರಿಗೆಯನ್ನು ತೆಗೆದು ಹಾಕಿದ್ದೇನೆ. ಇದಲ್ಲದೆಮೈಲುತುತ್ತ (ಕಾಪರ್ ಸಲ್ಫೇಟ್) ಕ್ಕೆ ಈಗಿರುವ ಶೇಕಡ 4 ರಷ್ಟು ತೆರಿಗೆಯಿಂದ ವಿನಾಯತಿ ನೀಡಿದ್ದೇನೆ.

ಆ) ಏಪ್ರಿಲ್ 98ರ ಮೊದಲು ಅನೇಕ ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳು ಸಂಪೂರ್ಣ ತೆರಿಗೆ ವಿನಾಯಿತಿಯ ಸೌಲಭ್ಯ ಹೊಂದಿದ್ದವು. ಈ ಘಟಕಗಳ ಉತ್ಪಾದನೆಗೆ ಅನುಕೂಲವಾಗುವಂತೆ ನಾನು 1-4-1998 ರ ಮೊದಲು ಇದ್ದ ಸ್ಥಿತಿಗೆ ಹಿಂದಿರುಗಿಸಲು ನಿರ್ಧರಿಸಿದ್ದೇನೆ.

ಇ) ಯಾಂತ್ರೀಕೃತ ದೋಣಿಗಳನ್ನು, ಹೊರತುಪಡಿಸಿ, ಮೀನುಗಾರಿಕೆಗೆ ಬೇಕಾಗುವ ಮಂಜುಗಡ್ಡೆ, ಡೀಸಲ್ ಮತ್ತು ಇನ್ನಿತರ ವಸ್ತುಗಳಿಗೆ ತೆರಿಗೆ ವಿನಾಯಿತಿ ನೀಡಿದ್ದೇನೆ.

ಈ) ಹೆಚ್ಚುವರಿ ಅಬಕಾರಿ ಸುಂಕ (ವಿಶೇಷ ಪ್ರಾಮುಖ್ಯ ವಸ್ತುಗಳು) ಕಾಯ್ದೆ, 1957 ಇದರ ಪ್ರಥಮ ಅನುಸೂಚಿಯಲ್ಲಿ ಉಲ್ಲನ್ ಬ್ಲಾಂಕೆಟ್ ಮತ್ತು ಶಾಲುಗಳು ಇರದೆ ಇರುವುದರಿಂದ 1-4-92 ರಿಂದ ಅವುಗಳ ಮೇಲೆ ತೆರಿಗೆ ಬರುವುದು. ತೆರಿಗೆಯ ಪೂರ್ವಾನ್ವಯದಿಂದ ವ್ಯಾಪಾರಸ್ಥರಿಗೆ ತುಂಬ ತೊಂದರೆಯಾಗುವುದು. ಆದ್ದರಿಂದ ಈ ತೆರಿಗೆಯನ್ನು ಈ ವರ್ಷದಿಂದ ಜಾರಿಗೆ ಬರುವಂತೆ ಅನ್ವಯಗೊಳಿಸಲಾಗುವುದು.

ಉ) ತೆರಿಗೆಗೊಳಪಟ್ಟ ತೊಗಲು ಮತ್ತು ಚರ್ಮದಿಂದ ಉತ್ಪಾದಿಸಿ ಸಿದ್ಧಪಡಿಸಿದ ತೊಗಲು ಮತ್ತು ಚರ್ಮದ ಮೇಲೆ ತೆರಿಗೆ ವಿನಾಯಿತಿ ನೀಡಲು ಪ್ರಸ್ತಾಪಿಸುತ್ತೇನೆ.

ಊ) ಸಣ್ಣ ಉದ್ಯಮಗಳಿಂದ ಉತ್ಪಾದಿಸಲ್ಪಡುವ ಹಲ್ಲು ಪುಡಿಯ ಮೇಲಿನ ಮಾರಾಟ ತೆರಿಗೆ, ರೂ. 50ಕ್ಕಿಂತ ಕಡಿಮೆ ಮೌಲ್ಯದ ಆಟದ ಸಾಮಾನುಗಳು, ಬಟ್ಟೆಗಳ ಮೇಲಿನ ಡೈಯಿಂಗ್ ಮತ್ತು ಪ್ರಿಂಟಿಂಗ್ ಗುತ್ತಿಗೆ, ಪಠ್ಯಪುಸ್ತಕಗಳ ಮುದ್ರಣ ಗುತ್ತಿಗೆ, ಪ್ರಮಾಣೀಕೃತ ಬೀಜಗಳ ಉತ್ಪಾದನೆಗೆ ಖರೀದಿ ಮಾಡುವ ಬಿತ್ತನೆ ಬೀಜಗಳು, ಮೇಣದ ಬತ್ತಿಗಳು, ಅರಿಶಿಣ, ತುಪ್ಪ ಮಾಡುವ ಬೆಣ್ಣೆಗೆ, ಕೈ ಕ್ಯಾಲೆಂಡರ್‌ಗಳು, ಕರ್ನಾಟಕ ರಾಜ್ಯದಲ್ಲಿ ನೋಂದಣಿ ಹೊಂದಿ ಉಪಯೋಗಿಸಿದ ಮೋಟಾರು ವಾಹನಗಳು, ಹಗ್ಗ ತಯಾರಿಸಲು ಬೇಕಾಗುವ ತೆಂಗಿನ ನಾರು ಮತ್ತು ನಾನ್ ಕನ್ವೆನ್‌ಶಲ್ ಎನರ್ಜಿ ಡಿವೈಸಸ್, ಇವೆಲ್ಲಕ್ಕೂ ತೆರಿಗೆ ವಿನಾಯಿತಿ ನೀಡಲು ಪ್ರಸ್ತಾಪಿಸುತ್ತೇನೆ.

(ವಿವರಗಳು ಅನುಬಂಧ 3ರಲ್ಲಿ)

ಇತರ ಪರಿಹಾರಗಳು

ಅ) ಅನೇಕ ವಸ್ತುಗಳ ಮೇಲೆ ಈಗಾಗಲೇ ಮಾರಾಟ ತೆರಿಗೆ ವಿನಾಯಿತಿ ಇರುವುದು. ಅವುಗಳೆಂದರೆ, ಅಲ್ಯುಮಿನಿಯಂ ಪಾತ್ರೆಗಳು, ಸೀಮೆಎಣ್ಣೆ ಸ್ಟೌವ್, ಅವಲಕ್ಕಿ ಮತ್ತು ಮಂಡಕ್ಕಿ, ಹಗ್ಗದ ಉತ್ಪಾದನೆಗಳು, ಬ್ರೆಡ್ ಮತ್ತು ಬನ್, ಇಮಿಟೇಷನ್ ಆಭರಣಗಳು, ಫೀಡಿಂಗ್ ಬಾಟಲ್‌ಗಳು ಇತ್ಯಾದಿ. ಈ ವಿನಾಯಿತಿಯನ್ನು ಮುಂದುವರೆಸಲು ಪ್ರಸ್ತಾಪಿಸುತ್ತೇನೆ.

ಆ) ಕೃಷಿ ಅನುಪಯುಕ್ತ ಪದಾರ್ಥಗಳು, ಗೇರುಬೀಜ ಎಣ್ಣೆ, ಒಣಮೆಣಸಿನಕಾಯಿ, ಗ್ಲೂಕೋಸ್ ಇವುಗಳ ಮೇಲಿನ ತೆರಿಗೆಯನ್ನು ಅಧಿಸೂಚನೆಯ ಮುಖಾಂತರ ಕಡಿಮೆಗೊಳಿಸಲಾಗಿದೆ. ಇದನ್ನು ಮುಂದುವರೆಸಲು ಪ್ರಸ್ತಾಪಿಸುತ್ತೇನೆ.

ಇ) ಕಂಪ್ಯೂಟರ್ಸ್, ಖಾದ್ಯ ತೈಲ, ಲಾಟರಿ ಟಿಕೆಟ್ಟುಗಳು, ಹಪ್ಪಳ, ಚಲನಚಿತ್ರದ ಲೀಸ್, ಇವೆಲ್ಲಕ್ಕೂ ವಹಿವಾಟು ತೆರಿಗೆ ವಿನಾಯಿತಿ ನೀಡಿರುವ ಅಧಿಸೂಚನೆಗಳನ್ನು ಮುಂದುವರೆಸಲು ಪ್ರಸ್ತಾಪಿಸುತ್ತೇನೆ. ರಸಗೊಬ್ಬರದ ವಹಿವಾಟು ಒಂದು ಸಾವಿರ ಲಕ್ಷಕ್ಕಿಂತ ಕಡಿಮೆ ಇರದ ವ್ಯಾಪಾರಿಗಳ ಮೇಲಿನ ವಹಿವಾಟು ತೆರಿಗೆಯನ್ನು ಶೇಕಡ 2 ಕ್ಕೆ ಇಳಿಸಲು ಪ್ರಸ್ತಾಪಿಸುತ್ತೇನೆ. ಹಾಗೂ ರಾಸಾಯನಿಕ ಗೊಬ್ಬರದ ಮೇಲಿನ ಎರಡನೆಯ ಮತ್ತು ಮುಂದಿನ ಹಂತಗಳ ಮಾರಾಟದ ಮೇಲೆ ಇರುವ ವಹಿವಾಟು ತೆರಿಗೆ ವಿನಾಯಿತಿಯು ಮುಂದುವರೆಯುವುದು. ಅವಲಕ್ಕಿ, ಹಸಿರು ಮತ್ತು ಒಣಹುಲ್ಲಿನ ಮೇಲಿರುವ ವಹಿವಾಟು ತೆರಿಗೆಗೆ ವಿನಾಯಿತಿ ನೀಡಲಾಗಿದೆ.

(ಅನುಬಂಧ-4 ಹೊಸ ವಿನಾಯಿತಿ)

ಈ) ಊದುಬತ್ತಿ, ರೀಚಾರ್ಜಬಲ್ ಲ್ಯಾನ್‌ಟರ್ನ್ ಇತ್ಯಾದಿಗಳ ಮೇಲೆ ಕೇಂದ್ರ ಮಾರಾಟ ತೆರಿಗೆಯನ್ನು ಅಧಿಸೂಚನೆಗಳಿಂದ ಕಡಿತಗೊಳಿಸಲಾಗಿದೆ, ವಿಶ್ವ ಯೋಜನೆಯಡಿ ಉತ್ಪಾದಿಸುವ ವಸ್ತುಗಳಿಗೆ ಕರ್ನಾಟಕ ಮಾರಾಟ ತೆರಿಗೆ ನೀಡಿದ ಕಾಫಿ ಬೀಜಗಳು, ಒಣಮೆಣಸಿನಕಾಯಿ, ಪೆನ್ಸಿಲ್‌ಗಳ ಮೇಲೆ ಸಂಪೂರ್ಣ ವಿನಾಯಿತಿ ಇದೆ, ನಾನು ಅವನ್ನು

ಮುಂದುವರೆಸಲು ಪ್ರಸ್ತಾಪಿಸುತ್ತೇನೆ. ಸೀಮೆಎಣ್ಣೆ ಬತ್ತಿ ಸ್ಟೌವ್ ಮೇಲಿರುವ ಕೇಂದ್ರ ಮಾರಾಟ ತೆರಿಗೆಯ ವಿನಾಯಿತಿಯನ್ನು ಪ್ರಸ್ತಾಪಿಸುತ್ತೇನೆ. (ಅನುಬಂಧ- 5 ಹೊಸ ವಿನಾಯಿತಿ)

ಉ) ಹಿಂದಿನ ಮುಂಗಡ ಪತ್ರದಲ್ಲಿ ನಾನು ಹತ್ತಿಯ ಮೇಲಿನ ಮಾರಾಟ ತೆರಿಗೆಯನ್ನು ಪ್ರಥಮ ಹಂತದ ಮಾರಾಟದ ಮೇಲೆ ಬದಲಾಯಿಸಿದೆ. ವ್ಯಾಪಾರ ಸಂಸ್ಥೆಗಳ ಮನವಿಯ ಮೇರೆಗೆ ಹಿಂದಿನಂತೆ ಕೊನೆಯ ಹಂತದ ತೆರಿಗೆಗೆ ನಂತರ ಬದಲಾಯಿಸಿದ್ದೆ, ಈ ಕೊನೆಯ ಹಂತದ ಮೇಲಿರುವ ಮಾರಾಟ ತೆರಿಗೆಯನ್ನು ಮುಂದುವರೆಸಲು ನಾನು ಪ್ರಸ್ತಾಪಿಸುತ್ತೇನೆ.

ಊ) ಕರ್ನಾಟಕ ಮಾರಟ ತೆರಿಗೆ ಕಾಯ್ದೆಯಡಿ ನೋಂದಣಿ ಹೊಂದಲು ಅವಶ್ಯಕವಿಲ್ಲದ ಕಾಫಿ ಬೆಳೆಗಾರರಿಂದ ನಮೂನೆ - 39 ಬಿ ಯನ್ನು ಹಾಜರುಪಡಿಸಬೇಕು ಎಂದಿರುವ ನಿಯಮವನ್ನು ನಾನು ತೆಗೆದುಹಾಕಲು ಬಯಸುತ್ತೇನೆ.

ಆಡಳಿತ ಮತ್ತು ಶಾಸನಾತ್ಮಕ ಕ್ರಮಗಳು

182. ರಾಜಸ್ವ ಸಂಗ್ರಹಣೆಯನ್ನು ಉತ್ತಮಗೊಳಿಸಲು ಈ ಕೆಳಕಂಡ ಕ್ರಮಗಳನ್ನು ನಾನು ಪ್ರಸ್ತಾಪಿಸುತ್ತೇನೆ.

1) ಶಾಸನಾತ್ಮಕ ಕ್ರಮಗಳು

ಅ) ಸಾಮಾನ್ಯ ಸೂಚಿಯಂತೆ ಇಲ್ಲಿಯವರಿಗೆ ಕೆಲವು ವಸ್ತುಗಳ ಮೇಲೆ ತೆರಿಗೆ ವಿಧಿಸಲಾಗಿದ್ದು ಅವನ್ನು ಎರಡನೆಯ ಅನುಸೂಚಿಯಲ್ಲಿ ಕ್ರಮವಾಗಿ ತರಲು ಬಯಸಿದ್ದೇನೆ. (ಅನುಬಂಧ- 6 ರಂತೆ)

ಆ) ಬೀಡಿ ಎಲೆಗಳು, ಟಿಂಬರ್, ಗೋಡಂಬಿ ಮತ್ತು ಹುಣಸೆಹಣ್ಣು ಇವುಗಳನ್ನು ಕೃಷಿ ವಸ್ತುಗಳ ಪಟ್ಟಿಯಿಂದ ಹೊರತುಪಡಿಸಲಾಗುವುದು.

ಇ) ಮಾರಾಟ ಹಂತದ ಮೇಲೆ ತೆರಿಗೆ ಇರುವ ವಸ್ತುಗಳ, ಖರೀದಿ ವಹಿವಾಟಿನ ಮೇಲೆ ವಿಧಿಸಿರುವ ವಹಿವಾಟು ತೆರಿಗೆಗೆ ವಿನಾಯಿತಿ ನೀಡಲು ಅವಶ್ಯಕತೆ ತಿದ್ದುಪಡಿಗಳನ್ನು ತರುವುದು.

ಈ) ವ್ಯಾಪಾರಸ್ಥರಿಂದ ಕ.ಮಾ.ತೆ.ಕಾಯ್ದೆ, 1957 ನಿಯಮ 25- ಎ ಅಡಿ ಸಲ್ಲಿಸುವ ಅರ್ಜಿಗಳಲ್ಲಿ ತಪ್ಪುಗಳನ್ನು ಸರಿ ಪಡಿಸಲು ಕೋರಿದ್ದರೆ ಈ ಅರ್ಜಿಗಳ ವಿಲೇವಾರಿ ಮಾಡಲು ವೇಳಾಮಿತಿಯನ್ನು ವಿಧಿಸುವುದು.

ಉ) ಹೆಚ್ಚು ರಾಜಸ್ವವನ್ನು ಸಂಗ್ರಹಿಸುವ ಉದ್ದೇಶದಿಂದ ಬುಲಿಯನ್ ಮತ್ತು ಸ್ಪೇಸಿ ಮೇಲೆ ಕಡಿಮೆ ತೆರಿಗೆ ದರವನ್ನು ವಿಧಿಸಲಾಗಿತ್ತು. ಇದರಿಂದ ಹೆಚ್ಚಿನ ತೆರಿಗೆಯು ಸಂಗ್ರಹವಾದರೂ ಕೂಡ ಆಭರಣ ವ್ಯಾಪಾರದಲ್ಲಿ ಹೆಚ್ಚಿನ ಪ್ರಗತಿ ಕಂಡು ಬಂದಿರುವುದಿಲ್ಲ. ಆದ್ದರಿಂದ ಆಭರಣಗಳ ಅನಧಿಕೃತ ಮಾರಾಟವನ್ನು ಬುಲಿಯನ್ ಮತ್ತು ಸ್ಪೇಸಿಯ ಮಾರಾಟ ಎಂದು ತೋರಿಸುವುದನ್ನು ತಡೆಯುವ ಸಲುವಾಗಿ ಬುಲಿಯನ್ ಮತ್ತು ಸ್ಪೇಸಿಯ ಮೇಲೆ ಮಾತ್ರ ಬಹುಮುಖ ತೆರಿಗೆಯನ್ನು ನಾನು ವಿಧಿಸಲು ಪ್ರಸ್ತಾಪಿಸುತ್ತೇನೆ.

ಊ) ಕರ್ನಾಟಕ ಮಾರಾಟ ತೆರಿಗೆ ನಿಯಮ 19-ಎ ಮತ್ತು 19-ಎಎ ಯ ಪ್ರಕಾರ ಕಡಿತಗೊಳಿಸಿದ ತೆರಿಗೆಯನ್ನು ಸರ್ಕಾರಕ್ಕೆ ಸಲ್ಲಿಸದೆ ವಿಳಂಬ ಮಾಡಿದ ಪಕ್ಷದಲ್ಲಿ ನಿಯಮ 13(2) ರ ಪ್ರಕಾರ ದಂಡವನ್ನು ತೆರಲು ನಿಯಮಾವಳಿಯನ್ನು ತಿದ್ದುಪಡಿ ಮಾಡಲಾಗುತ್ತದೆ.

ಋ) ತಪಾಸಣೆ, ಮತ್ತು ಸರ್ವೆಯ ವೇಳೆ ಇರುವ ವಸ್ತುಗಳ ದಾಸ್ತಾನಿನ ಆಧಾರದ ಮೇಲೆ ನೋಂದಾಣಿ ಮಾಡಿಸಲು ಅನುಕೂಲವಾಗುವಂತೆ ನಿಯಮಗಳ ರಚನೆ.

ೠ) ಕರನಿರ್ಧರಣೆ ಮತ್ತು ಪರಿಷ್ಕರಣಾ ಆದೇಶಗಳಿಗೆ ಈಗಿರುವ ಎರಡು ವರ್ಷಗಳ ಮಿತಿಯನ್ನು, ಎಲ್ಲ ಕಾಯ್ದೆಗಳಡಿ ಮೂರು ವರ್ಷಕ್ಕೆ ಹೆಚ್ಚಿಸುವುದು.

ಎ) ಬ್ರ್ಯಾಂಡ್ ನೇಮ್ ಹೊಂದಿರುವ ವ್ಯಾಪಾರಸ್ಥರ ಅನುಮತಿಯಂತೆ ಕೆಲವು ವ್ಯಾಪಾರಸ್ಥರ ವಸ್ತುಗಳನ್ನು ಉತ್ಪಾದನೆ ಮಾಡುತ್ತಿದ್ದು ಯಾವ ವ್ಯಾಪಾರಸ್ಥರ ಟ್ರೇಡ್ ಮಾರ್ಕ್‌ನ್ನು ಟ್ರೇಡ್ ಅಂಡ್ ಮರ್ಚೆಂಟೈಸ್ ಆಕ್ಟ್, 1958ರ ಪ್ರಕಾರ ನೋಂದಣಿ ಮಾಡಿಕೊಂಡಿದ್ದರೆ ಅವರ ಮೇಲೆ ತೆರಿಗೆ ವಿಧಿಸಲಾಗುವುದು. ಕೆಲವು ವ್ಯಾಪಾರಸ್ಥರು ಈ ಬ್ರ್ಯಾಂಡ್ ಹೆಸರನ್ನು ನೋಂದಣಿ ಮಾಡಿಕೊಳ್ಳದೆ ತೆರಿಗೆಯನ್ನು ವಂಚಿಸುತ್ತಿದ್ದಾರೆ. ಈ ಸಮಸ್ಯೆಯನ್ನು ಬಗೆಹರಿಸಲು ಬೇಕಾದ ತಿದ್ದುಪಡಿಯನ್ನು ಕಾನೂನಿಗೆ ತರಲಾಗುತ್ತದೆ.

ಏ) ಗುತ್ತಿಗೆದಾರರು ಪರ ರಾಜ್ಯದಿಂದ, ಸಿ-ನಮೂನೆಯ ಸಹಾಯದಿಂದ ಖರೀದಿಸುತ್ತಿರುವುದರಿಂದ, ನಮ್ಮ ರಾಜ್ಯದ ಉತ್ಪಾದಕರಿಗೆ ತೊಂದರೆಯಾಗಿದೆ ಮತ್ತು ನಮ್ಮ ರಾಜಸ್ವಕ್ಕೆ ಧಕ್ಕೆ ಉಂಟಾಗಿದೆ. ಇದನ್ನು ತಪ್ಪಿಸಲು ಈ ಸೌಲಭ್ಯವನ್ನು ತೆಗೆಯಬಯಸಿದ್ದೇನೆ.

ತೆರಿಗೆ ವಂಚನೆಗೆ ತಡೆ ಒಡ್ಡಲು ಮತ್ತು ತೆರಿಗೆ ಕಾನೂನು ಅನುಸರಣೆ ಮಾಡಲು ನಾನು ಈ ಕೆಳಕಂಡ ಕ್ರಮಗಳನ್ನು ಪ್ರಸ್ತಾಪಿಸುತ್ತೇನೆ.

1) ಲೆಕ್ಕ ಪುಸ್ತಕಗಳನ್ನು ಪರಿಶೀಲನೆಗೆ ತರದಿದ್ದರೆ ದಂಡದ ಮೊತ್ತವನ್ನು ಐದು ಸಾವಿರಕ್ಕೆ ಹೆಚ್ಚಿಸುವುದು.

2) ತೆರಿಗೆ ಸರಿಯಾಗಿ ಕೊಡದಿದ್ದಲ್ಲಿ ಕನಿಷ್ಠ ದಂಡವನ್ನು ಐದು ಸಾವಿರಕ್ಕೆ ಹೆಚ್ಚಿಸಲು, ಗರಿಷ್ಠ ದಂಡವನ್ನು ಹತ್ತು ಸಾವಿರಕ್ಕೆ ಹೆಚ್ಚಿಸಲು, ಅಥವಾ ಆರು ತಿಂಗಳಿನಿಂದ ಒಂದು ವರ್ಷದವರೆಗೆ ಕಾರಾಗೃಹವಾಸ, ಅಥವಾ ಎರಡನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ.

3) ವಹಿವಾಟುನ್ನು ಬಚ್ಚಿಟ್ಟಲ್ಲಿ, ನಿಯಮ 12(4)ರ ಪ್ರಕಾರ ವಿಧಿಸಲಾಗುವ ದಂಡದ ಕನಿಷ್ಟ ಮೊತ್ತವನ್ನು ನಿಗದಿಗೊಳಿಸಲು ಕಾನೂನು ರಚನೆ.

4) ನಿಯಮ 12(ಬಿ) (4)ರಲ್ಲಿ ವಿಧಿಸುವ ಕನಿಷ್ಟ ದಂಡದ ಮೊತ್ತವನ್ನು ನಿಗದಿಗೊಳಿಸುವುದು.

ಬಿ) ಆಡಳಿತಾತ್ಮಕ ಕ್ರಮಗಳು

1) ಈಗ ಸಂಗ್ರಹವಾಗುತ್ತಲಿರುವ ವಾಣಿಜ್ಯ ತೆರಿಗೆ ಮೊತ್ತದಲ್ಲಿ ಸಿಂಹಪಾಲು ವಾಣಿಜ್ಯ ತೆರಿಗೆ ಉಪ ಆಯುಕ್ತರು (ಕರನಿರ್ಧರಣೆ) ಇವರಿಂದ ಬರುತ್ತಿದ್ದು ಅವರಿಗೆ ಕರನಿರ್ಧರಣಾ ಕಾರ್ಯ ಹೆಚ್ಚು ಹೊರೆಯಾಗಿದೆ. ಈಗಿರುವ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸಿ ಅವರ

ಸಾಮರ್ಥ್ಯ ಮತ್ತು ಪರಿಣಿತಿಯನ್ನು ಉತ್ತಮಗೊಳಿಸುವ ಅವಶ್ಯಕತೆ ಇದೆ. ಇದಕ್ಕಾಗಿ ಹೆಚ್ಚು ಕಾರ್ಯಾಲಯಗಳನ್ನು ರಚಿಸುವುದು ಮತ್ತು ಈಗಿರುವ ಕಾರ್ಯಲಯಗಳನ್ನು ಪುನರ್‌ನಿಯೋಜಿಸಬೇಕಾಗಿದೆ. ಇದಕ್ಕಾಗಿ ನಾನು ಉಪ ಆಯುಕ್ತರು(ಮನವಿ) ಇವರಿಗೆ ಕರನಿರ್ಧರಣಾ ಕಾರ್ಯ ವಹಿಸಿ ಅವರಿಗಿರುವ ಕಾರ್ಯವನ್ನು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಮನವಿ) ಅವರಿಗೆ ವರ್ಗಾಯಿಸಲು ಬಯಸಿದ್ದೇನೆ.

2) ವಿಲಾಸ ತೆರಿಗೆ ಮತ್ತು ಮನರಂಜನಾ ತೆರಿಗೆ ಅಡಿ ಸಂಗ್ರಹವಾಗುವ ಹೆಚ್ಚಿನ ತೆರಿಗೆ ಬೆಂಗಳೂರಿನಲ್ಲಿಯೇ ಆಗುತ್ತದೆ. ಈ ಸಂಗ್ರಹಣವನ್ನು ಹೆಚ್ಚಿಸಲು ಪ್ರತ್ಯೇಕ ವಿಲಾಸ ತೆರಿಗೆ ಅಧಿಕಾರಿಗಳು ಮತ್ತು ಮನರಂಜನಾ ತೆರಿಗೆ ಅಧಿಕಾರಿಗಳನ್ನು ಬೆಂಗಳೂರಿನಲ್ಲಿ ಈಗಿರುವ ಕಛೇರಿಗಳಿಂದಲೇ ರಚಿಸಲು ಬಯಸಿದ್ದೇನೆ.

3) ಕೆಲವು ಕಂಪನಿಗಳಿಂದ ಬರಬೇಕಾಗಿರುವ ತೆರಿಗೆಯನ್ನು ನಿಯಮಿತವಾಗಿ ಸಂಗ್ರಹಿಸಲು ಅನುಕೂಲವಾಗುವಂತೆ ನಿಯಮ 19-ಎ ಹಾಗೂ 19-ಎಎಯಲ್ಲಿ ಕರ ಕಡಿತವನ್ನು ಮಾಡುತ್ತಿರುವ ಕಂಪನಿಗಳನ್ನು ಹೊರತುಪಡಿಸಲು ವಾಣಿಜ್ಯ ತೆರಿಗೆ ಆಯುಕ್ತರಿಗೆ ಅನುಮತಿ ನೀಡಲಾಗುವುದು.

4) ಹಳೆಯ ಬಾಕಿ ಮತ್ತು ನ್ಯಾಯಾಲಯದಲ್ಲಿ ವಿವಾದದಲ್ಲಿರುವ ತೆರಿಗೆಯನ್ನು ಕಡಿಮೆ ಮಾಡಲು, 1996-97 ಸಾಲಿನವರೆಗಿನ ಕರನಿರ್ಧಾರಣೆಯಾಗಿದ್ದಲ್ಲಿ ಮತು ಆ ಬಾಕಿ ಕರವನ್ನು ಪಾವತಿಸಿದವರಿಗೆ ಅವರ ಮೇಲೆ ನಿಯಮ 12(ಬಿ)(4) ರ ದಂಡವನ್ನು ಮನ್ನಾ ಮಾಡಲು ಬಯಸುತ್ತೇನೆ ಹಾಗೂ ನಿಯಮ 13(2) ರ ಪ್ರಕಾರ ವಿಧಿಸಲಾಗುವ ಬಡ್ಡಿಯನ್ನು ಶೇಕಡ 50 ರಷ್ಟು ಸಹ ಕಡಿಮೆ ಮಾಡಲು ಬಯಸುತ್ತೇನೆ. ಈ ಕ್ರಮ 30-6-99 ರ ವರೆಗೆ ಜಾರಿಯಲ್ಲಿರುವುದು.

5) ಅಡ್ಡ ಪರಿಶೀಲನೆಯನ್ನು ಹೆಚ್ಚು ಅರ್ಥಪೂರ್ಣವಾಗಿಸಲು ಈಗಿರುವ ಎಲ್ಲಾ ಮಾರಾಟ ತೆರಿಗೆ ಶೋಧನಾ ಠಾಣೆಗಳನ್ನು ಗಣಕೀಕೃತಗೊಳಿಸಲಾಗುವುದು.

ಮನರಂಜನಾ ತೆರಿಗೆ

ಅ) ಕೇಬಲ್ ಟಿ.ವಿ. ಆಪರೇಟರುಗಳಿಗೆ ಅನುಕೂಲವಾಗುವಂತೆ ರಾಜಿ ಪದ್ಧತಿಯನ್ನು ಈ ಹಿಂದೆ ತರಲಾಗಿದೆ. ಈ ಯೋಜನೆಯ ಬಗ್ಗೆ ತಿಳುವಳಿಕೆ ಇಲ್ಲದ ಪ್ರಯುಕ್ತ ಅನೇಕ ಆಪರೇಟರುಗಳು ನಿಗದಿತ ವೇಳೆಯಲ್ಲಿ ಅರ್ಜಿ ಸಲ್ಲಿಸಲಿಲ್ಲ. ಅಂತಹವರಿಗಾಗಿ ಈ ಪದ್ಧತಿ ಉಪಯೋಗ ಪಡೆಯಲು 30-6-99ರ ವರೆಗೆ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿದೆ.

ಆ) ಮನರಂಜನಾ ತೆರಿಗೆ 1997ರವರೆಗೆ ಚಲನಚಿತ್ರಕ್ಕೆ ಮತ್ತು ಕುದುರೆ ಜೂಜಿಗೆ ಮಾತ್ರ ಸೀಮಿತವಾಗಿತ್ತು. ನಂತರ ಇತರ ಮನರಂಜನೆಗಳಿಗೆ ಹಾಗೂ ಕ್ರೀಡೆಗಳಿಗೆ ಅನ್ವಯವಾಯ್ತು. ಆದರೆ ಇತರ ಮನರಂಜನೆಗಳಿಗೆ ಮತ್ತು ಕ್ರೀಡೆಗಳಿಗೆ ವಿನಾಯಿತಿ ನೀಡುವ ನಿಯಮಗಳಿಗೆ ತಿದ್ದುಪಡಿ ಮಾಡಲಾಗಿರಲಿಲ್ಲ. ಅದನ್ನು ತರಲು ಕ್ರಮ ತೆಗೆದುಕೊಳ್ಳಲಾಗುವುದು.

ವಿಲಾಸ ತೆರಿಗೆ

183. ದಿನದ ಬಾಡಿಗೆ ಐದು ಸಾವಿರಕ್ಕಿಂತ ಹೆಚ್ಚಿರುವ ಕಲ್ಯಾಣ ಮಂಟಪಗಳು ಮತ್ತು ಮದುವೆ ಹಾಲ್‌ಗಳು ವಿಲಾಸ ತೆರಿಗೆಗೆ ಒಳಪಡುತ್ತವೆ. 1-4-99ರಿಂದ ಈ ಮಿತಿಯನ್ನು ರೂ. ಹತ್ತು ಸಾವಿರಕ್ಕೆ ಹೆಚ್ಚಿಸಲು ತೀರ್ಮಾನಿಸಿದ್ದೇನೆ. ಇಂತಹ ಸ್ಥಳಗಳಲ್ಲಿ ನಡೆಸುವ ಇತರೆ ಕಾರ್ಯಕ್ರಮಗಳಿಗೂ ಈ ತೆರಿಗೆ ಅನ್ವಯವಾಗುವುದು.

ಜೂಜು ತೆರಿಗೆ

184. ರೇಸ್ ಕೋರ್ಸ್‌ನಲ್ಲಿ ಕುದುರೆಗಳ ಮೇಲೆ ಪಣ ಹೂಡುವ ಹಣದ ಮೇಲೆ ಜೂಜೂ ತೆರಿಗೆಯನ್ನು ವಿಧಿಸಲಾಗುತ್ತದೆ. ಕರ್ನಾಟಕದಲ್ಲಿರುವ ಎರಡು ಕ್ಲಬ್‌ಗಳ ಮೇಲೆ ಟೋಟಲೈಜೇಟರ್ ಟ್ಯಾಕ್ಸ್‌ನ್ನು ವಿಧಿಸಲಾಗುತ್ತದೆ. ಬೆಂಗಳೂರು ಟರ್ಫ್ ಕ್ಲಬ್ಬಿಗೆ ರೂ. 700 ಲಕ್ಷಕ್ಕೆ ನಿಗದಿಗೊಳಿಸಲು, ಮೈಸೂರು ರೇಸ್ ಕ್ಲಬ್ಬಿಗೆ ರೂ. 25 ಲಕ್ಷ ನಿಗದಿಗೊಳಿಸಲು ಉದ್ದೇಶಿಸುತ್ತೇನೆ. ಅದೇ ರೀತಿಯಾಗಿ ನಾನು ಬೆಂಗಳೂರು ಟರ್ಫ್ ಕ್ಲಬ್ಬಿಗೆ ಕ್ಲಬ್ ಆವರಣದ ಹೊರಗಡೆ ಟೋಟಲೈಜೇಟರ್ ಜೂಜ್‌ನ ಪಣವನ್ನು ಒಪ್ಪಿಕೊಳ್ಳಲು ಕೌಂಟರ್‌ಗಳನ್ನು ತೆಗೆಯಲು ಅನುಮತಿ ನೀಡಲು ಬಯಸುತ್ತೇನೆ.

ಪ್ರವೇಶ ತೆರಿಗೆ

ಅ) ಪ್ರವೇಶ ತೆರಿಗೆ ಅಧಿನಿಯಮದ ಅಡಿಯಲ್ಲಿ, ವ್ಯಾಪಾರಸ್ಥರು ಪ್ರವೇಶ ತೆರಿಗೆ ಕೊಡಬೇಕಾಗಿರುತ್ತದೆ. ಆದರೆ ಕೆಲವರು ತೆರಿಗೆ ಕಡಿಮೆ ಅಥವಾ ವಿನಾಯಿತಿ ಇರುವ ಪರರಾಜ್ಯಗಳಿಂದ, ಬಳಕೆಗೆ, ಉಪಯೋಗಕ್ಕೆ ಅಥವಾ ಮಾರಾಟಕ್ಕೆ ಸರಕುಗಳನ್ನು ತರುತ್ತಿದ್ದು ಆದರಿಂದ ರಾಜ್ಯದ ರಾಜಸ್ವಕ್ಕೆ ನಷ್ಟ ಉಂಟಾಗುತ್ತಲಿದೆ. ಅದನ್ನು ಸರಿಪಡಿಸಲು ನಾನು ಅಂತಹವರ ಮೇಲೆ ತೆರಿಗೆ ವಿಧಿಸಲು, ಕರ್ನಾಟಕ ಪ್ರವೇಶ ತೆರಿಗೆ ಅಧಿನಿಯಮದ ಅಡಿಯಲ್ಲಿ ಸೂಕ್ತ ತಿದ್ದುಪಡಿ ತರಲು ಬಯಸುತ್ತೇನೆ.

ಆ) ಹೆಚ್.ಡಿ.ಪಿ.ಇ. ಫಾಬ್ರಿಕ್ ಉತ್ಪಾದನೆಗೆ ಉಪಯೋಗಿಸಲ್ಪಡುವ ಕಚ್ಚಾ ವಸ್ತುವಾದ ಪ್ಲಾಸ್ಟಿಕ್ ಗ್ರಾನ್ಯುಲಗಳ ಮೇಲಿನ ಪ್ರವೇಶ ತೆರಿಗೆಯನ್ನು ಪ್ಲಾಸ್ಟಿಕ್ ಚೀಲಗಳ ಉತ್ಪಾದನೆಗೆ ಉಪಯೋಗಿಸಿದಾಗ ಮನ್ನಾ ಮಾಡಲಾಗಿದೆ.

ಇ) ಗಾಳಿಯಂತ್ರಗಳ ಬಿಡಿಭಾಗಗಳ ಮೇಲಿನ ಪ್ರವೇಶ ತೆರಿಗೆಗೆ ವಿನಾಯಿತಿ ನೀಡಲು ಪ್ರಸ್ತಾಪಿಸುತ್ತೇನೆ.

ಕೃಷಿ ವರಮಾನ ತೆರಿಗೆ

ಅ) ಈಗಿರುವ ಅಧಿನಿಯಮ 66(2)ರ ಪ್ರವಿಸೋ ಪ್ರಕಾರ ಕಾಫಿ ಬೆಳೆಗಾರರು ಪ್ರತಿ ಎಕರೆಗೆ 600ಕೆಜಿಗಿಂತ ಹೆಚ್ಚು ಬೆಳೆಯುವ ಕಾಫಿ ಬೆಳೆಯ ಮೇಲೆ ಪ್ರತಿ ಟನ್ನಿಗೆ ರೂ.400 ರಂತೆ ಕೊಡಬೇಕಾಗಿರುವ ತೆರಿಗೆಯನ್ನು ಮನ್ನಾ ಮಾಡುತ್ತೇನೆ.

ತತ್ಸಂಬಂಧಿತ ತಿದ್ದುಪಡಿಗಳು

185. ಮೇಲೆ ಹೇಳಿದ ಕ್ರಮಗಳನ್ನು ಅನುಷ್ಠಾನಗೊಳಿಸಲು ಹಲವಾರು ತೆರಿಗೆ ಕಾಯ್ದೆಗಳಿಗೆ ತಿದ್ದುಪಡಿ ತರಬೇಕಾಗುತ್ತದೆ. ಈ ತಿದ್ದುಪಡಿ ಮತ್ತು ಇತರ ಬದಲಾವಣೆಗಳ ವಿವರಗಳನ್ನು ಸದನದ ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸಲಾಗುವುದು.

ಅಬಕಾರಿ

186. 1998-99ನೇ ಸಾಲಿನಲ್ಲಿ ಸರ್ಕಾರವು ಸಾರಾಯಿಯ ರಿಟೇಲ್ ಮಾರಾಟದ ಹಕ್ಕನ್ನು ಹರಾಜಿನ ಮೂಲಕ ಗುತ್ತಿಗೆ ನೀಡಲು ನಿರ್ಧಾರ ಕೈಗೊಂಡಿತ್ತು. ಈ ನಿರ್ಧಾರವು ಸರ್ಕಾರಕ್ಕೆ ಸುಮಾರು 70 ಕೋಟಿ ರೂ.ಗಳ ಹೆಚ್ಚುವರಿ ಆದಾಯವನ್ನು ತಂದಿತು. ರಾಜ್ಯ ಹೈಕೋರ್ಟಿನಲ್ಲಿ ಸಲ್ಲಿಸಿದ್ದ ಅರ್ಜಿಯು ವಿಲೇವಾರಿಯಾಗಿದೆ ಹಾಗಾಗಿ ಸರ್ಕಾರವು ತನ್ನ ಸಾರಾಯಿ ಹರಾಜಿನ ಪದ್ಧತಿಯನ್ನು ಮುಂದುವರಿಸಲು ನಿರ್ಧರಿಸಿದೆ.

187. ನೆರೆಹೊರೆಯ ರಾಜ್ಯಗಳ ಪರವಾನಗಿ ಶುಲ್ಕವನ್ನು ಪರಿಗಣಿಸಿ ನಮ್ಮ ರಾಜ್ಯದಲ್ಲೂ ಕೂಡ ಡಿಸ್ಟಿಲರಿ, ಬ್ರೀವರೀಸ್, ಸಗಟು, ರಿಟೇಲ್, ಬಾರ್ ಆರ್.ವಿ.ಬಿ. ಮತ್ತಿತರ ಸನ್ನದುಗಳ ಮೇಲಿನ ಪರವಾನಗಿ ಶುಲ್ಕವನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಸಂಬಂಧಿಸಿದ ವಿವರಗಳನ್ನು ಅನುಬಂಧ-7ರಲ್ಲಿ ನೀಡಲಾಗಿದೆ. ಇದರ ಜೊತೆಗೆ ಸಾರಾಯಿ ಮೇಲಿನ ಶುಲ್ಕವನ್ನು ತಲಾ ಬಲ್ಕ್ ಲೀಟರ್ 13.85 ರೂ.ಗಳಿಂದ 17 ರೂ.ಗಳಿಗೆ ಏರಿಸಲು ಪ್ರಸ್ತಾಪಿಸಲಾಗಿದೆ. ಈ ಎರಡೂ ಪ್ರಸ್ತಾವಗಳನ್ನು ಮುಂದಿನ ಅಬಕಾರಿ ವರ್ಷದಿಂದ ಜಾರಿಗೊಳಿಸಲಾಗುವುದು. ಸ್ವದೇಶಿ ಮದ್ಯ ಹಾಗೂ ಫೆನ್ನಿ ಮೇಲಿನ ಲೀಟರ್ ಫೀಯನ್ನು ಪ್ರತಿ ಬಲ್ಕ್ ಲೀಟರ್‌ಗೆ 10 ರೂ.ಗಳಿಂದ 20 ರೂ.ಗಳಿಗೆ ಏರಿಸಲು ಪ್ರಸ್ತಾಪಿಸುತ್ತಿದ್ದೇನೆ.

188. ಬೀರ್‌ನ ಮೇಲಿನ ಆಮದು ಶುಲ್ಕವನ್ನು ಪ್ರತಿ ಬಲ್ಕ್ ಲೀಟರ್‌ಗೆ 1 ರೂ.ನಿಂದ 3 ರೂ.ಗೆ ಏರಿಸಲಾಗುವುದು. ಹೆಚ್ಚು ಆಲ್ಕೋಹಾಲ್ ಅಂಶವುಳ್ಳ ಮದ್ಯಕ್ಕೆ ಬದಲಾಗಿ ಕಡಿಮೆ ಆಲ್ಕೋಹಾಲ್ ಅಂಶವುಳ್ಳ ಪಾನೀಯಗಳ ಸೇವನೆಯನ್ನು ಉತ್ತೇಜಿಸಲು ಬೀರ್ ಮೇಲಿನ ಅಬಕಾರಿ ಶುಲ್ಕವನ್ನು ಪ್ರತಿ ಬಲ್ಕ್ ಲೀಟರ್‌ಗೆ 5 ರೂ.ಗಳಿಂದ 4 ರೂ.ಗಳಿಗೆ ಇಳಿಸಲು ಸರ್ಕಾರವು ಪ್ರಸ್ತಾಪಿಸುತ್ತಿದೆ. ಅಧಿಕವಾಗಿ ಕಬ್ಬನ್ನು ಅರೆದಿರುವ ಕಾರಣ ಸಕ್ಕರೆ ಕಾರ್ಖಾನೆಗಳಲ್ಲಿ ಹೆಚ್ಚುವರಿ ಕಾಕಂಬಿ ಉತ್ಪತ್ತಿ ನಿರೀಕ್ಷಿಸಿದೆ ಇದನ್ನು ಬಳಿಸಿಕೊಂಡು ಸಕ್ಕರೆ ಕಾರ್ಖಾನೆಗಳು ಹೆಚ್ಚು ಲಾಭಗಳಿಸಲು ಅನುಕೂಲವಾಗುವಂತೆ ರೆಕ್ಟಿಫೈಡ್ ಸ್ಪಿರಿಟ್ ಮೇಲಿನ ರಫ್ತು ಶುಲ್ಕವನ್ನು ಪ್ರತಿ ಬಲ್ಕ್ ಲೀಟರ್‌ಗೆ 3 ರೂ.ಗಳಿಂದ 2 ರೂ.ಗಳಿಗೆ ಇಳಿಸುವ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ. ಇದೇ ಕಾರಣಕ್ಕಾಗಿ ಹೊರ ರಾಜ್ಯದಲ್ಲಿ ಮಾರಾಟವಾಗುವ ಭಾರತೀಯ ಮದ್ಯದ ಮೇಲಿನ ರಫ್ತು ಶುಲ್ಕವನ್ನು ಪ್ರತಿ ಬಲ್ಕ್ ಲೀಟರ್‌ಗೆ 3.50 ರೂ.ಗಳಿಂದ 2.50 ರೂ.ಗಳಿಗೆ ಇಳಿಸಲು ಪ್ರಸ್ತಾಪಿಸಲಾಗಿದೆ.

189. ಈ ಪ್ರಸ್ತಾವಗಳಿಂದ ಮುಂದಿನ ಆರ್ಥಿಕ ವರ್ಷ ನಿವ್ವಳ 55 ಕೋಟಿ ರೂ.ಗಳ ಹೆಚ್ಚುವರಿ ಸಂಪನ್ಮೂಲವನ್ನು ನಿರೀಕ್ಷಿಸಲಾಗಿದೆ.

ನೋಂದಣಿ ಹಾಗೂ ಮುದ್ರಾಂಕ ಶುಲ್ಕ

190. ತೆರಿಗೆದಾರರಿಗೆ ಅನುಕೂಲವಾಗುವಂತೆ ಶುಲ್ಕಗಳ ದರಗಳನ್ನು ಸರಳೀಕರಣಗೊಳಿಸಲು ನಾನು ಹಲವಾರು ವಿನಾಯಿತಿ ಮತ್ತು ಪರಿಹಾರಗಳನ್ನು ನೀಡಲು ಉದ್ದೇಶಿಸಿದ್ದೇನೆ.

ಒಂದೇ ಬಾರಿಗೆ ಇತ್ಯರ್ಥಗೊಳಿಸುವ ವಿಷಯ

191. ಕರ್ನಾಟಕ ಮುದ್ರಾಂಕ ಅಧಿನಿಯಮ 1957 ಕಲಂ 45-ಎ ಅಡಿಯಲ್ಲಿ ಬೆಂಗಳೂರು ಮತ್ತು ರಾಜ್ಯದ ಇತರೆ ಪ್ರದೇಶಕ್ಕೆ ಸಂಬಂಧಿಸಿದಂತೆ ನೋಂದಣಿ ಅಪಮೌಲ್ಯದ ಹಲವಾರು ಪ್ರಕರಣಗಳ ಬಾಕಿ

ಉಳಿದಿದೆ. ಈ ಬಾಕಿ ಪ್ರಕರಣಗಳನ್ನು ತೀರ್ಮಾನಿಸಲು ಮತ್ತು ಸರ್ಕಾರಕ್ಕೆ ಇದರಿಂದ ಬರಬೇಕಾಗಿರುವ ಆದಾಯವನ್ನು ಪಡೆಯಲು ಒಂದೇ ಬಾರಿಗೆ ಇತ್ಯರ್ಥಗೊಳಿಸಿಕೊಳ್ಳುವ ವ್ಯವಸ್ಥೆಯನ್ನು ನಾನು ಪ್ರಸ್ತಾಪಿಸುತ್ತೇನೆ. ಕಕ್ಷಿಗಾರರು ಕೂಡ ಈ ವ್ಯಾಜ್ಯಗಳಿಂದ ಮುಕ್ತಗೊಳ್ಳಬಹು ದಾಗಿದೆ. ದಿನಾಂಕ 16-3-1999ರ ದಿನದಂದು ಬಾಕಿ ಇದ್ದಂತಹ ಪ್ರಕರಣಗಳಲ್ಲಿ ಉಪ ನೋಂದಣಾಧಿಕಾರಿಗಳು ಲೆಕ್ಕ ಹಾಕಿದ ಮೌಲ್ಯದ ಮತ್ತು ಪತ್ರದಲ್ಲಿ ಕಾಣಿಸಿದ ಮೌಲ್ಯದ ವ್ಯತ್ಯಾಸಕ್ಕೆ ಪಾವತಿಸಬೇಕಾಗಿರುವ ಶುಲ್ಕದ ಮೊತ್ತದಲ್ಲಿ ಶೇಕಡಾ 30ರಷ್ಟು ಶುಲ್ಕವನ್ನು ಮಾಫಿ ಮಾಡಲು ಪ್ರಸ್ತಾಪಿಸುತ್ತೇನೆ. ಈ ಯೋಜನೆಯನ್ನು ಪ್ರಕಟಿಸಿದ 3 ತಿಂಗಳ ಒಳಗಡೆ ಕಕ್ಷಿಗಾರರು ಸದರಿ ರಿಯಾಯಿತಿಯ ಸೌಲಭ್ಯ ಪಡೆಯಲು ಬಾಕಿ ಇರವು ಶುಲ್ಕವನ್ನು ಪಾವತಿಸುವ ಅವಕಾಶ ಕಲ್ಪಿಸಿದೆ. ಈ ರಿಯಾಯಿತಿ ಸೌಲಭ್ಯವನ್ನು ಯಾವುದೇ ಸಂದರ್ಭದಲ್ಲಿಯೂ ವಿಸ್ತರಿಸುವುದಿಲ್ಲ. ಈ ಯೋಜನೆಯ ವಿವರಗಳನ್ನು ಮುಂದೆ ಪ್ರತ್ಯೇಕವಾಗಿ ಅಧಿಸೂಚನೆಗೊಳಿಸಲಾಗುವುದು.

ಸ್ಥಳೀಯ ಸಂಸ್ಥೆಗಳು

192. ಪೌರಸಭೆಗಳು, ಜಿಲ್ಲಾ ಪಂಚಾಯಿತಿಗಳು ಮತ್ತು ಇತರೆ ಸಂಸ್ಥೆಗಳು ಬರೆದು ಕೊಡುವ ಕ್ರಯ ಪತ್ರಗಳಿಗೆ ಇನ್ನು ಮುಂದೆ ಮುದ್ರಾಂಕ ಅಪಮೌಲ್ಯದ ನಿಯಮವು ಅನ್ವಯಿಸುವುದಿಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕರ್ನಾಟಕ ಗೃಹ ನಿರ್ಮಾಣ ಮಂಡಳಿಗಳು ಪ್ಲಾಟ್ ಮತ್ತು ಅಪಾರ್ಟ್‌ಮೆಂಟುಗಳಿಗಾಗಿ ಬರೆದುಕೊಡುವ ಕ್ರಯಪತ್ರಗಳಿಗೆ ಹೆಚ್ಚಿನ ಮುದ್ರಾಂಕ ಶುಲ್ಕವನ್ನು ಇದುವರೆವಿಗೂ ವಿಧಿಸುತ್ತಿದ್ದು ಈ ಸಂಸ್ಥೆಗಳು, ಖಾಸಗಿ ಭೂ ಅಭಿವೃದ್ಧಿದಾರರುಗಳಿಗೆ ಸರಿಸಮನಾಗಿ ಈ ವ್ಯವಹಾರದಲ್ಲಿ ತೊಡಗಲು ಅನುಕೂಲವಾಗುವಂತೆ ಶುಲ್ಕದ ದರಗಳನ್ನು ಕಡಿಮೆಗೊಳಿಸಲಾಗಿದೆ.

193. ಮಹಾನಗರ ಪಾಲಿಕೆಗಳು ಮತ್ತು ಪುರಸಭೆಗಳು ನಿವೇಶನಗಳ ಹಂಚಿಕೆ ಸಂಬಂಧದಲ್ಲಿ ಬರೆದುಕೊಟ್ಟ ಪತ್ರಗಳನ್ನು ಇದುವರೆವಿಗೂ ಕರ್ನಾಟಕ ಮುದ್ರಾಂಕ ಅಧಿನಿಯಮ, 1957ರ ಕಲಂ 45-ಎ ಅಡಿ ಅಪಮೌಲ್ಯ ತನಿಖೆಗೆ ಒಳಪಡಿಸಲಾದ ಪ್ರಕರಣಗಳಲ್ಲಿ ಮೌಲ್ಯದ ವ್ಯತ್ಯಾಸಕ್ಕೆ ನೀಡಬೇಕಾದ ಮುದ್ರಾಂಕ ಶುಲ್ಕವನ್ನು ಸಂಪೂರ್ಣವಾಗಿ ಮನ್ನಾ ಮಾಡಲು ಪ್ರಸ್ತಾಪಿಸುತ್ತಿದ್ದೇನೆ. ಈ ವಿಷಯದ ಬಗ್ಗೆ ವಿವರಗಳನ್ನು ಪ್ರತ್ಯೇಕವಾಗಿ ಅಧಿಸೂಚನೆಗೊಳಿಸಲಾಗುವುದು.

ವ್ಯಾಪಾರ ಮತ್ತು ಕೈಗಾರಿಕೆ

194. ವ್ಯಾಪಾರ ಮತ್ತು ಕೈಗಾರಿಕಾ ವಲಯಕ್ಕೆ ಪರಿಹಾರ ನೀಡುವ ಸಲುವಾಗಿ ಸರಕು ಮತ್ತು ಕಚ್ಚಾ ಸಾಮಗ್ರಿಗಳಿಗೆ ಸಂಬಂಧಿಸಿದ ಸಾಕ್ಷಿ ರಹಿತ ಗಿರವಿ ಮತ್ತು ಒತ್ತೆ ಪತ್ರಗಳಿಗೆ ಮುದ್ರಾಂಕ ಶುಲ್ಕದಿಂದ ವಿನಾಯ್ತಿತಿ ನೀಡಲು ನಾನು ಉದ್ದೇಶಿಸಿದ್ದೇನೆ. ದುಡಿಮೆ ಬಂಡವಾಳದ ಮೇಲೆ ವಿಧಿಸುತ್ತಿರುವ ಶುಲ್ಕದ ಹೊರೆಯನ್ನು ತಪ್ಪಿಸಲು ಅಡಮಾನ ಪತ್ರಗಳ ಮೇಲಿನ ಶುಲ್ಕದ ದರವನ್ನು ಶೇ.0. 1ಕ್ಕೆ ನಿಗದಿಪಡಿಸಿ ಗರಿಷ್ಟ 10 ಸಾವಿರ ರೂ.ಗಳ ಶುಲ್ಕವನ್ನು ಮಿತಿಗೊಳಿಸಲು ಉದ್ದೇಶಿಸಿದ್ದೇನೆ. ಹಣಕಾಸು ಸಾಲ ಪಡೆಯುವ ಬಗ್ಗೆ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳು ಸ್ಥಾಪನೆಗಾಗಿ ಮಾರ್ಚ್ 2001 ನೇ ಸಾಲಿನ ಅಂತ್ಯದವರೆಗೆ ಬರೆದು ಕೊಡುವ ಗೇಣಿ ಮತ್ತು ಕ್ರಯದ ಕರಾರು, ಗೇಣಿ ಪತ್ರ, ಪೂರ್ಣಪ್ರಮಾಣದ ಕ್ರಯ ಪತ್ರ ಮತ್ತು ಸಾಲ ಪತ್ರಗಳಿಗೆ ಮುದ್ರಾಂಕ ಶುಲ್ಕದ ರಿಯಾಯ್ತಿತಿಯನ್ನು ವಿಸ್ತರಿಸಲು ಪ್ರಸ್ತಾಪಿಸುತ್ತೇನೆ.

ಭಾರೀ ಪ್ರಮಾಣದಲ್ಲಿ ವ್ಯವಹರಿಸುತ್ತಿರುವ ಹಣಕಾಸು ಸಂಸ್ಥೆಗಳಿಗೆ ಉಬ್ಬಚ್ಚು ಯಂತ್ರಗಳ ಮೂಲಕ ಮುದ್ರಾಂಕಗಳನ್ನು ಪತ್ರಗಳ ಮೇಲೆ ಉಬ್ಬಚ್ಚು ಮಾಡಿಕೊಳ್ಳಲು ಅಧಿಕಾರ ನೀಡಲಾಗುವುದು. ಕಂಪನಿಗಳು ಸಂಯೋಜನೆಗೊಳ್ಳುವ ಸಂದರ್ಭದಲ್ಲಿ ವರ್ಗಾವಣೆಗೊಳ್ಳುವ ಕಂಪನಿಗಳು ಸಂಯೋಜನೆಗೊಳ್ಳುವ ಸಂದರ್ಭದಲ್ಲಿ ವರ್ಗಾವಣೆಗೊಳ್ಳುವ ಕಂಪನಿಯ ಆಸ್ತಿಯ ಮೌಲ್ಯದ ಮೊತ್ತದ ಮೇಲೆ ಗರಿಷ್ಟ ರೂ. 1 ಲಕ್ಷಗಳ ಮಿತಿಯನ್ನು ಇರಿಸಿ ಶೇ. 1ರ ದರದಂತೆ ಶುಲ್ಕವನ್ನು ವಿಧಿಸಲಾಗುವುದು. ಅಲ್ಲದೆ ಬಿ. ಐ. ಎಫ್. ಆರ್. ಸಂಸ್ಥೆಯು ಯಾವುದೇ ನಷ್ಟ ಪೀಡಿತ ಕಂಪನಿಗಳನ್ನು ಬೇರೆ ಕಂಪನಿಯೊಡನೆ ಸಂಯೋಜನೆಗೊಳ್ಳಲು ಮಾಡಿದ ಆದೇಶದ ಸಂದರ್ಭದಲ್ಲಿ ಅಂಥಹ ನಷ್ಟ ಪೀಡಿತ ಕಂಪನಿಗಳು ಸಂಯೋಜನೆಗೊಳ್ಳುವುದಕ್ಕೆ ಮುದ್ರಾಂಕ ಶುಲ್ಕದಿಂದ ವಿನಾಯಿತಿ ನೀಡಲಾಗುವುದು.

ಸೆಕ್ಯೂರಿಟೈಜೇಷನ್

195. ಕರ್ನಾಟಕದಲ್ಲಿ ಸಾಲ ಮಾರುಕಟ್ಟೆಯ ಅಭಿವೃದ್ಧಿ ಮತ್ತು ಮೂಲ ಸೌಲಭ್ಯ ವಲಯದಲ್ಲಿ ಸಂಪನ್ಮೂಲ ಹುಟ್ಟುವಳಿಗಾಗಿ ಸೆಕ್ಯೂರಿಟೈಜೇಷನ್ ಎಂಬ ಪರಿ ಕಲ್ಪನೆಯನ್ನು ಉತ್ತೇಜಿಸಲು ಈ ಸಂಬಂಧದಲ್ಲಿ ಬರೆದುಕೊಡಲಾಗುವ ಅಸೈನ್‌ಮೆಂಟ್ ಪತ್ರಗಳಿಗೆ ಶೇ. 0. 1 ದರದಂತೆ ಮತ್ತು ಶುಲ್ಕದ ಗರಿಷ್ಟ ಮಿತಿಯನ್ನು ರೂ. 1ಲಕ್ಷಗಳಿಗೆ ನಿಗದಿಪಡಿಸಲಾಗಿದೆ. ಸೆಕೆಂಡರಿ ಮಾರುಕಟ್ಟೆಯ ವ್ಯವಹಾರದಲ್ಲಿರುವ ಡಿಬೆಂಚರುಗಳ ವರ್ಗಾವಣೆಯ ಮೇಲೆ ಗರಿಷ್ಟ ರೂ. 1 ಸಾವಿರ ಶುಲ್ಕವನ್ನು ಇಟ್ಟು ಶೇಕಡಾ 0. 5ರ ದರದಂತೆ ಮುದ್ರಾಂಕ ಶುಲ್ಕವನ್ನು ಇನ್ನು ಮುಂದೆ ವಸೂಲಿ ಮಾಡಲಾಗುವುದು.

ದಾನ ಪತ್ರ , ವಿಭಾಗ ಪತ್ರ ಮತ್ತು ಗುತ್ತಿಗೆ ಪತ್ರಗಳು

196. ಪತಿ, ಪತ್ನಿ ಅಥವಾ ಮಕ್ಕಳಿಗೆ ಬರೆದು ಕೊಡುವ ದಾನ ಪತ್ರಗಳು ಮತ್ತು ಕುಟುಂಬದ ಸದಸ್ಯರೊಳಗೆ ಮಾಡಿಕೊಳ್ಳಬಹುದಾದ ಹಕ್ಕು ಖಿಲಾಸೆ ಮತ್ತು ಗೇಣಿ ಪತ್ರಗಳ ಮೇಲೆ ರೂ. 1 ಸಾವಿರ ನಿರ್ದಿಷ್ಟ ಶುಲ್ಕವನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ.

197. ವಿಭಾಗ ಪತ್ರಗಳಲ್ಲಿ ಮಹಾ ನಗರ ಪಾಲಿಕೆ ಮತ್ತು ಪುರಸಭೆ ವ್ಯಾಪ್ತಿಗೆ ಸೇರಿದ ಕೃಷಿಯೇತರ ಆಸ್ತಿಗಳಿದ್ದಲ್ಲಿ ಪ್ರತಿ ಹಿಸ್ಸೆಗೆ ರೂ. 1 ಸಾವಿರ ದಂತೆಯೂ ಬೇರೆ ಪ್ರದೇಶಗಳಲ್ಲಿ ಪ್ರತಿ ಹಿಸ್ಸೆಗೆ ರೂ. 500 ರಂತೆಯೂ ಹಾಗೂ ಕೃಷಿ ಆಸ್ತಿಗಳಿದ್ದಲ್ಲಿ ಪ್ರತಿ ಹಿಸ್ಸೆಗೆ ರೂ. 250 ರಂತೆಯೂ ಶುಲ್ಕವನ್ನು ವಿಧಿಸಲು ಪ್ರಸ್ತಾಪಿಸಲಾಗಿದೆ.

198. ಗೇಣಿ ಪತ್ರಗಳ ಮೇಲಿನ ಮುದ್ರಾಂಕ ಶುಲ್ಕದ ದರವನ್ನು ಪರಿಷ್ಕರಿಸಿದೆ. 30 ವರ್ಷದವರೆಗಿನ ಗೇಣಿಗೆ ಶುಲ್ಕವನ್ನು ಗೇಣಿಯ ಮೊತ್ತ, ಪ್ರೀಮಿಯಮ್ ಮತ್ತು ಮುಂಗಡ ಹಣದ ಮೇಲೆ ಆಕರಿಸಿಲಾಗುವುದು. 30 ವರ್ಷ ಮೇಲ್ಪಟ್ಟ ಗೇಣಿಗಳಿಗೆ ಆಸ್ತಿಯ ಮಾರುಕಟ್ಟೆಯ ಮೌಲ್ಯದ ಮೇಲೆ ಶೇ. 5ರಂತೆ ಶುಲ್ಕವನ್ನು ವಿಧಿಸಲು ಉದ್ದೇಶಿಸಿದ್ದೇನೆ. ಆದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಇತರೆ ನರಗಾಭಿವೃದ್ಧಿ ಪ್ರಾಧಿಕಾರಗಳಂತಹ ಶಾಸನ ಬದ್ಧ ಪ್ರಾಧಿಕಾರಗಳು ಬರೆದುಕೊಡುವ ಎಷ್ಟೇ ಅವಧಿಯ ಗೇಣಿ ಪತ್ರಗಳಿಗೆ ಶುಲ್ಕವನ್ನು ಬಾಡಿಗೆ ಮೊತ್ತ, ಪ್ರೀಮಿಯಂ ಮತ್ತು ಮುಂಗಡ ಹಣದ ಅಭಿವೃದ್ಧಿಪಡಿಸುವುದಕ್ಕೆ ವಿಧಿಸಲಾಗುತ್ತಿದ್ದ ಶುಲ್ಕವನ್ನು ಹಿಂತೆಗೆದುಕೊಳ್ಳಲು ಉದ್ದೇಶಿಸಿದೆ.

ಇತರೆ ಪರಿಹಾರಗಳು

199. ಮಧ್ಯಮ ಮತ್ತು ಕಡಿಮೆ ಆದಾಯದ ವರ್ಗದವರಿಗೆ ಪರಿಹಾರವಾಗಿ ವಾಹನಗಳ ವರ್ಗಾವಣೆಯ ಮೇಲಿನ ಶುಲ್ಕವನ್ನು ರದ್ದುಪಡಿಸಲು ನಾನು ಪ್ರಸ್ತಾಪಿಸುತ್ತೇನೆ.

200. ಆಸ್ತಿ ಮೌಲ್ಯ ನಿರ್ಧಾಯಕ ವಿಧಾನವನ್ನು ಹೆಚ್ಚು ಪಾರದರ್ಶಕಗೊಳಿಸುವ ಸಲುವಾಗಿ ಸ್ಥಿರಾಸ್ತಿಗಳ ಮಾರ್ಗದರ್ಶಿ ಮೌಲ್ಯವನ್ನು ಆಯಾ ಜಿಲ್ಲಾ ಮಟ್ಟದಲ್ಲಿಯೇ ಅಧಿಸೂಚಿಸಲಾಗುವುದು. ಈ ಮಾರ್ಗದರ್ಶಿ ಮೌಲ್ಯವನ್ನು ಮಂಡಲ, ತಾಲ್ಲೂಕು, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ ಕೂಡ ಪ್ರಕಟಿಸಲಾಗುವುದು.

201. ಉಪಯೋಗಿಸದ, ತಪ್ಪಾಗಿ ಉಪಯೋಗಿಸಿದ ಮತ್ತು ವಿಕೃತಗೊಳಿಸಿದ ಮುದ್ರಾಂಕ ಕಾಗದಗಳನ್ನು ಹಿಂದಿರುಗಿಸಲು ಇದ್ದ ಅವಧಿಯನ್ನು 6 ತಿಂಗಳಿಂದ 1 ವರ್ಷದವರೆಗೆ ವಿಸ್ತರಿಸಲಾಗಿದೆ. ಉಪಯೋಗಿಸದೇ ಇರುವ ಮುದ್ರಾಂಕ ಕಾಗದಗಳ ದುರುಪಯೋಗವನ್ನು ನಿಯಂತ್ರಿಸುವ ಸಲುವಾಗಿ ಮುದ್ರಾಂಕ ಕಾಗದಗಳನ್ನು ಮರು ಪಾವತಿಗಾಗಿ ಸಲ್ಲಿಸಿದಾಗ ಶೇ. 50ರಷ್ಟು ಹಣವನ್ನು ಮಾತ್ರ ಮರು ಪಾವತಿ ಮಾಡಲು ಉದ್ದೇಶಿಸಲಾಗಿದೆ.

202. ಮುದ್ರಾಂಕ ಶುಲ್ಕದಲ್ಲಿ ಮಾಡಿರುವ ಬದಲಾವಣೆಗೆ ಅನುಗುಣವಾಗಿ ನೋಂದಣಿ ಶುಲ್ಕ ಮತ್ತು ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ಸಹ ಕಡಿಮೆಗೊಳಿಸಲಾಗಿದೆ ಅಥವಾ ಗರಿಷ್ಠಗೊಳಿಸಿದ ಶುಲ್ಕಕ್ಕೆ ನಿಯಂತ್ರಣ ಗೊಳಿಸಲಾಗಿದೆ.

203. ಪ್ರಸ್ತಾವನೆ ಮಾಡಿರುವ ಬದಲಾವಣೆಗಳನ್ನು ಅನುಬಂಧ 8 ಮತ್ತು 9ರಲ್ಲಿ ವಿವರಿಸಲಾಗಿದೆ.

ಮೋಟಾರು ವಾಹನ ತೆರಿಗೆ

204. ದಕ್ಷಿಣ ರಾಜ್ಯಗಳಲ್ಲಿ ಸರಕು ಸಾಗಣೆ ವಾಹನಗಳ ಮೇಲೆ ವಿಧಿಸಲಾಗಿರುವ ತೆರಿಗೆಗೆ ಹೋಲಿಸಿದಾಗ ಕರ್ನಾಟಕ ರಾಜ್ಯವು ಕಡಿಮೆ ದರದಲ್ಲಿ ತೆರಿಗೆಯನ್ನು ವಿಧಿಸುತ್ತಿದೆ. ಆದ್ದರಿಂದ ನಾವು ಷೆಡ್ಯೂಲ್ 'ಎ'ರ ಅಂಶ 3(1)ರ ಅಡಿ ಸರಕು ಸಾಗಣೆ ವಾಹನಗಳಿಗೆ ವಿಧಿಸುತ್ತಿರುವ ತೆರಿಗೆಯನ್ನು ಪ್ರತಿ ಹಂತದಲ್ಲಿ ಪ್ರತಿ ತ್ರೈಮಾಸಿಕಕ್ಕೆ ರೂ. 200-00 ರಂತೆ ಹೆಚ್ಚಿಸಲು ಉದ್ದೇಶಿಸಿದ್ದೇನೆ. ಈ ಹೆಚ್ಚಳದ ನಂತರವು ಸಹ ಕರ್ನಾಟಕ ರಾಜ್ಯವು ದಕ್ಷಿಣ ರಾಜ್ಯಗಳಿಗಿಂತ ಕಡಿಮೆ ದರದಲ್ಲಿ ತೆರಿಗೆ ವಿಧಿಸುತ್ತಿದೆ.

205. ಮೋಟಾರು ವಾಹನ (ಅಖಿಲ ಭಾರತ ಪರವಾನಗಿ ಪ್ರವಾಸಿ ಸಾರಿಗೆ ಪ್ರವರ್ತಕರು) ನಿಯಮ 1993ರ ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ಅಂಗೀಕೃತಗೊಂಡಿರುವ ಪ್ರವರ್ತಕರು ಕರ್ನಾಟಕ ರಾಜ್ಯದಲ್ಲಿ ಭಾರಿ ತೆರಿಗೆ ರಿಯಾಯಿತಿಯನ್ನು ಅನುಭವಿಸುತ್ತಿದ್ದಾರೆ. ನಾನು ಈ ವಾಹನಗಳಿಗೆ ತೆರಿಗೆಯನ್ನು ಪ್ರತಿ ತ್ರೈಮಾಸಿಕಕ್ಕೆ ಹಾಗೂ ಪ್ರತಿ ಆಸನಕ್ಕೆ ಷಡ್ಯುಲ್ ಎ ರ ಅಂಶ 7(ಬಿ)ಯಲ್ಲಿ ರೂ. 1000 ಕ್ಕೆ ಹೆಚ್ಚಿಸಲು ಉದ್ದೇಶಿಸಿದ್ದೇನೆ. ಅಲ್ಲದೆ ಮ್ಯಾಕ್ಸಿಕ್ಯಾಬ್ ವಾಹನಗಳಿಗೆ ವಿಧಿಸುತ್ತಿರುವ ತೆರಿಗೆಯನ್ನು ಒಂದು ಚದರ ಮೀಟರಿಗೆ ಪ್ರತಿ ತ್ರೈಮಾಸಿಕಕ್ಕೆ ರೂ. 100ರಂತೆ ಹೆಚ್ಚಿಸಲು ಉದ್ದೇಶಿದ್ದೇನೆ.

206. ಸಾರ್ವಜನಿಕರಿಗೆ ಉತ್ತಮ ಸಾರಿಗೆ ಸೌಲಭ್ಯ ಹಾಗೂ ಹೆಚ್ಚು ಬಸ್‌ಗಳನ್ನು ಒದಗಿಸುವ ದೃಷ್ಟಿಯಿಂದ ರಾಜ್ಯ ಸ್ವಾಮ್ಯದ ಸಾರಿಗೆ ಸಂಸ್ಥೆಯ ವಾಹನಗಳಿಗೆ ವಿಧಿಸುವ ತೆರಿಗೆಯನ್ನು ನಗರ ಸಾರಿಗೆ ವಾಹನಗಳಿಗೆ ಶೇ.5 ರಿಂದ ಶೇ.3ಕ್ಕೆ ಹಾಗೂ ಇತರ ವಾಹನಗಳಿಗೆ ಶೇ.8ರಿಂದ ಶೇ.6ಕ್ಕೆ ಇಳಿಸಲು ಉದ್ದೇಶಿಸಿದೆ.

207. ಈ ಬದಲಾವಣೆಗಳನ್ನು ಅನುಬಂಧ 10ರಲ್ಲಿ ತೋರಿಸಲಾಗಿದೆ. ಇದರಿಂದ ಒಟ್ಟು ರೂ. 12 ಕೋಟಿ ಆದಾಯ ಕಡಿಮೆಯಾಗುವ ನಿರೀಕ್ಷೆಯಿದೆ.

1998-99ರ ಪರಿಷ್ಕೃತ ಅಂದಾಜುಗಳು

208. 1998-99ರ ಆಯವ್ಯಯದಲ್ಲಿ 15157.42 ಕೋಟಿ ರೂ.ಗಳ ಒಟ್ಟು ಜಮೆಯನ್ನು ನಿರೀಕ್ಷಿಸಲಾಗಿತ್ತು. ಆದರೆ ಪರಿಷ್ಕೃತ ಅಂದಾಜುಗಳ ರೀತ್ಯಾ ಈಗ ಒಟ್ಟು ಜಮೆ 15509.42 ಕೋಟಿ ರೂ.ಗಳಾಗಿದೆ. ಆಯವ್ಯಯದಲ್ಲಿ 15579.74 ಕೋಟಿ ರೂ.ಗಳ ಒಟ್ಟು ವೆಚ್ಚವನ್ನು ನಿಗದಿಗೊಳಿಸಲಾಗಿತ್ತು. ಪರಿಷ್ಕೃತ ಅಂದಾಜುಗಳ ರೀತ್ಯಾ ಈಗ ಒಟ್ಟು ವೆಚ್ಚ 15887.30 ಕೋಟಿ ರೂ.ಗಳಾಗಿದೆ. ಸಾರ್ವಜನಿಕ ಲೆಕ್ಕದಲ್ಲಿನ ಹಣವನ್ನು ಪರಿಗಣಿಸಿದರೆ ಈ ವರ್ಷದ ಅಂತಿಮ ಕೊರತೆ 126.27 ಕೋಟಿ ರೂಪಾಯಿಗಳಾಗಬಹುದೆಂದು ಭಾವಿಸಲಾಗಿದೆ. 1998-99ರ ಆಯವ್ಯಯ ಪತ್ರದಲ್ಲಿ 196.62 ಕೋಟಿ ರೂ.ಗಳ ಕೊರತೆಯನ್ನು ತೋರಿಸಲಾಗಿತ್ತು.

1999-2000ರ ಆಯವ್ಯಯದಲ್ಲಿ ಅಂದಾಜುಗಳು

209. 1998-99ನೇ ಸಾಲಿನಲ್ಲಿ 17747.36 ಕೋಟಿ ರೂ.ಗಳ ಒಟ್ಟು ಜಮೆಯನ್ನು ನಿರೀಕ್ಷಿಸಲಾಗಿದೆ. ಇದರಲ್ಲಿ ರಾಜಸ್ವ ಜಮೆ 13991.78 ಕೋಟಿ ರೂ.ಗಳಾಗಿದೆ. ಹಾಗೂ ಬಂಡವಾಳ ಜಮೆಗಳು 3755.58 ಕೋಟಿ ರೂ.ಗಳಾಗಿವೆ. ಒಟ್ಟು ವೆಚ್ಚವನ್ನು 17818.63 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ರಾಜಸ್ವ ವೆಚ್ಚ 15390.97 ಕೋಟಿ ರೂ.ಗಳು ಮತ್ತು 2427.66 ಕೋಟಿ ರೂ.ಗಳು ಬಂಡವಾಳ ವೆಚ್ಚವಾಗಿದೆ.

210. ನನ್ನ ಆಯವ್ಯಯ ಭಾಷಣದಲ್ಲಿ ಈಗಾಗಲೇ ಪ್ರಸ್ತಾವಿಸಿರುವ ಪ್ರಮುಖ ಆದಾಯ ತೆರಿಗೆ ಆದಾಯಗಳ ಜೊತೆಗೆ ಸರ್ಕಾರವು ಸಣ್ಣ ಉಳಿತಾಯದಿಂದ 1100 ಕೋಟಿ ರೂ.ಗಳನ್ನು ; ಮಾರುಕಟ್ಟೆ ಸಾಲದಿಂದ (ನಿವ್ವಳ) 799.60 ಕೋಟಿ ರೂ.ಗಳನ್ನು; ಒಪ್ಪಂದದ ಸಾಲದ ಮೂಲಕ 291.06 ಕೋಟಿ ರೂ.ಗಳನ್ನು ಮತ್ತು ಕೇಂದ್ರ ಯೋಜನಾ ನೆರವಿನಿಂದ 2083.01 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರದಿಂದ ಸಂಗ್ರಹಿಸಲಾಗುವುದು.

211. ಈ ಅಂದಾಜುಗಳ ರೀತ್ಯಾ ಒಟ್ಟಾರೆ 71.27 ಕೋಟಿ ರೂ.ಗಳ ಕೊರತೆಯನ್ನು ಈ ವರ್ಷ ನಿರೀಕ್ಷಿಲಾಗುತ್ತಿದೆ. ಆರಂಭ ಶಿಲ್ಕು (-) 126.72 ಕೋಟಿ ರೂ.ಗಳನ್ನು ಪರಿಗಣನೆಗೆ ತೆಗೆದುಕೊಂಡರೆ, ಹಾಗೂ ಪ್ರಸಕ್ತ ತೆರಿಗೆ ದರ, ತೆರಿಗೆಯೇತರ ಜಮೆಗಳಿಂದ ಅಂತಿಮ ಶಿಲ್ಕು (-) 197.99 ಕೋಟಿ ರೂ.ಗಳಾಗಲಿದೆ. ತೆರಿಗೆ ಪದ್ಧತಿಯಲ್ಲಿ ತಂದಿರುವ ಹಲವಾರು ಬದಲಾವಣೆಗಳಿಂದ (+) 73 ಕೋಟಿ ರೂ.ಗಳು (ವಿವರಗಳನ್ನು ಅನುಬಂಧ 11ರಲ್ಲಿ ನೀಡಲಾಗಿದೆ) ಮತ್ತು ಇದರಿಂದ 1999-2000ರ ಅಂತಿಮ ಬಾಕಿ (-) 124.99 ಕೋಟಿ ರೂಪಾಯಿಗಳಾಗಲಿವೆ.

212. ಕೇಂದ್ರದ ಐದನೇ ವೇತನ ಆಯೋಗದ ವರದಿ ಜಾರಿಯ ಪರಿಣಾಮದಿಂದಾಗಿ ರಾಜ್ಯ ಸರ್ಕಾರದ ಮೇಲೆ ಬಿದ್ದಿರುವ ಭಾರೀ ಹೊರೆಯನ್ನು ನಾವು ಹೊರಬೇಕಾಗಿರುವುದನ್ನು ಮಾನ್ಯ ಸದಸ್ಯರು ಗಮನಿಸುತ್ತೀರಿ ಎಂದು ಭಾವಿಸಿದ್ದೇನೆ. ಈ ಉದ್ದೇಶಕ್ಕಾಗಿ ನಾನು ಆಯವ್ಯಯದಲ್ಲಿ ಸುಮಾರು 900 ಕೋಟಿ ರೂ.ಗಳನ್ನು ಒದಗಿಸಿದ್ದೇನೆ. ವೆಚ್ಚಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿ ಒಟ್ಟಾರೆ ಕೊರತೆಯನ್ನು ನಿಭಾಯಿಸಲಾಗುವುದು.

213. ನಾನು ಈಗ 1999-2000ರ ಮುಂಗಡ ಪತ್ರದ ಅಂದಾಜುಗಳನ್ನು ಸದನದ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸುತ್ತೇನೆ. ಈಗ ನಾನು 1999ರ ಜುಲೈ 31ಕ್ಕೆ ಅಂತ್ಯಗೊಳ್ಳುವ ನಾಲ್ಕು ತಿಂಗಳಿಗೆ ಲೇಖಾನುದಾನವನ್ನು ಕೋರುತ್ತೇನೆ.

214. ಈ ಸಂದರ್ಭದಲ್ಲಿ ರಾಜ್ಯದ ಜನತೆಗೆ ಹಾಗೂ ಸದನದ ಗೌರವಾನ್ವಿತ ಸದಸ್ಯರುಗಳಿಗೆ ನಾನು ಯುಗಾದಿಯ ಶುಭಾಶಯಗಳನ್ನು ಕೋರುತ್ತೇನೆ.

ಜೈ ಹಿಂದ್-ಜೈ ಕರ್ನಾಟಕ

ಬಜೆಟ್ ವಿಹಂಗಮ ನೋಟ

(ಕೋಟಿ ರೂಪಾಯಿಗಳಲ್ಲಿ)

ಕ್ರ. ಸಂ.	ಬಾಬ್ತು	ಬಜೆಟ್ ಅಂದಾಜು 1998-99	ಪರಿಷ್ಕೃತ ಅಂದಾಜು 1998-99	ಬಜೆಟ್ ಅಂದಾಜು 1999-2000
	ಪ್ರಾರಂಭ ಶಿಲ್ಕು	- 104.30	41.16	- 126.72
	ಎ. ರಾಜಸ್ವ ಲೆಕ್ಕ			
I	**ಜಮೆ :**			
	ರಾಜ್ಯ ತೆರಿಗೆ	7664.00	7280.05	8575.92
	ಕೇಂದ್ರ ತೆರಿಗೆಯಲ್ಲಿ ಪಾಲು	2280.75	1923.92	2306.03
	ಕೇಂದ್ರ ಸರ್ಕಾರದ ಅನುದಾನಗಳು	1593.18	1556.00	1665.36
	ತೆರಿಗೆಯೇತರ ರಾಜಸ್ವ	1441.63	1408.34	1444.47
	ಒಟ್ಟು-ಎ. I	**12979.56**	**12168.31**	**13991.78**
II	**ವೆಚ್ಚ :**			
	ಸಾಮಾಜಿಕ ಸೇವೆಗಳು	4991.63	4965.65	5558.62
	ಆರ್ಥಿಕ ಸೇವೆಗಳು	3384.73	3598.87	3920.87
	ಸಾಮಾನ್ಯ ಸೇವೆಗಳು	4634.72	4659.89	5459.22
	ಸಹಾಯಾನುದಾನ ಮತ್ತು ಅಂಶದಾನ	349.50	340.50	452.26
	ಒಟ್ಟು-ಎ.II	**13360.58**	**13564.91**	**15390.97**
ಎ.	ರಾಜಸ್ವ ಲೆಕ್ಕ ಹೆಚ್ಚುವರಿ / ಕೊರತೆ	- 381.02	- 1396.60	- 1399.19

ಕೋಟಿ ರೂಪಾಯಿಗಳಲ್ಲಿ

ಕ್ರ. ಸಂ.	ಬಾಬ್ತು	ಬಜೆಟ್ ಅಂದಾಜು 1998-99	ಪರಿಷ್ಕೃ ಅಂದಾಜು 1998-99	ಬಜೆಟ್ ಅಂದಾಜು 1999-2000
	ಬಿ. ಬಂಡವಾಳ ಲೆಕ್ಕ			
I	ಜಮೆ:			
	ಭಾರತ ಸರ್ಕಾರದಿಂದ ಸಾಲ	1412.74	1661.29	2083.01
	ಬಹಿರಂಗ ಮಾರುಕಟ್ಟೆ ಸಾಲ (ನಿವ್ವಳ)	218.56	625.18	799.60
	ಎಲ್ ಐಸಿ, ಆರ್ ಬಿಐ, ಜಿಐಸಿ ಮತ್ತು ಎನ್ ಸಿಡಿಸಿ ಇವುಗಳಿಂದ ಸಾಲ	216.13	200.27	291.06
	ಸಾಲಗಳು ಮತ್ತು ಮುಂಗಡಗಳ ವಸೂಲಿ	132.21	144.46	142.40
	ಸಾರ್ವಜನಿಕ ಲೆಕ್ಕ (ನಿವ್ವಳ) ಇತ್ಯಾದಿ	135.22	709.91	439.51
	ಒಟ್ಟು - ಬಿ.I	**2177.86**	**3341.11**	**3755.58**
II	ಬಟವಾಡೆ :			
	ಬಂಡವಾಳ ವೆಚ್ಚ (ನಿವ್ವಳ)	1637.65	1541.18	1774.56
	ಕೇಂದ್ರ ಸಾಲಗಳ ಮರುಸಂದಾಯ	304.73	302.99	347.22
	ಎಲ್ ಐಸಿ, ಆರ್ ಬಿಐ, ಜಿಐಸಿ ಮತ್ತು ಎನ್ ಸಿಡಿಸಿ ಇತ್ಯಾದಿಗಳಿಗೆ ಸಾಲಗಳ ಮರು ಸಂದಾಯ	31.94	40.67	67.86
	ಸಾಲಗಳ ಮತ್ತು ಮುಂಗಡಗ್ಗಳ ಬಟವಾಡೆ	244.84	227.55	238.02
	ಒಟ್ಟು - ಬಿ. II	**2219.16**	**2112.39**	**2427.66**
ಬಿ.	ಬಂಡವಾಳ ಲೆಕ್ಕ ಹೆಚ್ಚಳ / ಕೊರತೆ	-41.30	1228.72	1327.92
ಸಿ.	ವರ್ಷದ ಒಟ್ಟು ಹೆಚ್ಚಳ/ ಕೊರತೆ	-422.32	- 167.88	-71.27
ಡಿ.	ಮುಕ್ತಾಯ ಶಿಲ್ಕು ಕಳೆದಾಗ	- 526.62	- 126.72	- 197.99
ಇ.	ಎಆರ್ ಎಮ್			
	(i) ಎ ಆರ್ ಎಮ್			
	(ಅ) ಮೂಲ ಸೌಲಭ್ಯ ಕರ	110.00	-	0.00
	(ಆ) ಇತರೆ	120.00	0.00	73.00
	(ii) ಕೇಂದ್ರದಿಂದ ಪರ್ಯಾಯ ವರ್ಗಾವಣೆಯ ವಿಧಾನ (ಟಿ ಎಫ್ ಸಿ)	100.00	-	0.00
ಎಫ್.	**ಒಟ್ಟು ಹೆಚ್ಚುವರಿ / ಕೊರತೆ**	**- 196.62**	**- 126.72**	**- 124.99**

ಅನುಬಂಧ- 1

1999-2000ನೇ ಸಾಲಿನ ವಿಭಾಗವಾರು ರಾಜ್ಯ ಯೋಜನಾ ಹಂಚಿಕೆ

	ವಿಭಾಗ	ಕೋಟಿ ರೂ.ಗಳಲ್ಲಿ	ಶೇಕಡಾ ಪ್ರಮಾಣ
ಎ.	**ಆರ್ಥಿಕ ಸೇವೆಗಳು**		
